ವ್ಯಾಸತಾತ್ಪರ್ಯ ನಿರ್ಣಯ

★

ಲೇಖಕರು:
ಶ್ರೀ ರಾಮಚಂದ್ರ ಶಾಸ್ತ್ರಿ ಸೂರಿ, ಕೆರ್ಕಿ

★

– ಮಾರಾಟಗಾರರು –
ಶ್ರೀ ಮಾರಿಕಾಂಬಾ. ಪ್ರಕಾಶನ ವಿಭಾಗ, ಶಿರಸಿ

ವ್ಯಾಸತಾತ್ಪರ್ಯ ನಿರ್ಣಯ

ಲೇಖಕರು:

ಶ್ರೀ ರಾಮಚಂದ್ರ ಶಾಸ್ತ್ರಿ ಸೂರಿ, ಕರ್ಕಿ

ಪ್ರೊ. ಬಿ. ಎಚ್. ಶ್ರೀಧರ, M. A.

ಅವರ ಮುನ್ನುಡಿಯೊಂದಿಗೆ.

★

– ಮಾರಾಟಗಾರರು –

ಶ್ರೀ ಮಾರಿಕಾಂಬಾ ಪ್ರಕಾಶನ ವಿಭಾಗ

ಶಿರಸಿ (ಉ. ಕ.)

ಪ್ರಥಮ ಮುದ್ರಣ
ಕ್ರಿ. ಶ. ೧೯೬೭

ಪ್ರಥಮ ಮುದ್ರಣದ ಎಲ್ಲ ಹಕ್ಕುಗಳು
ಸಂಪಾದಕರು, ಆರಾಧನೆ ಪ್ರಕಾಶನ ವಿಭಾಗ, ಶಿರಸಿ
ಇವರಿಗೆ ಸೇರಿವೆ.

ಬೆಲೆ: ರೂ. ೧=೦೦

ಪ್ರಕಾಶಕರು:
ಸಂಪಾದಕರು "ಆರಾಧನೆ"
ಶ್ರೀ ಮಾರಿಕಾಂಬಾ ದೇವಸ್ಥಾನ
ಶಿರಸಿ (ಉ. ಕ.)

ಮುದ್ರಕರು:
ಶ್ರೀ ಲಕ್ಷ್ಮೀ-ನಾರಾಯಣ ಪ್ರೆಸ್
ಶಿರಸಿ
(ಉ. ಕನ್ನಡ)

ಮುನ್ನುಡಿ

ತಂಜಾವೂರಿನ ಭೋನ್ಸ್ಲೆ ಮನೆತನಕ್ಕೆ ಸೇರಿದ ೨ ನೆಯ ಶಾಹ್-ಜಿಯು ಆಳಿದ್ದು ಕ್ರಿ. ಶ. ೧೬೮೪ ರಿಂದ ೧೭೧೨ ರ ವರೆಗೆ. ಅವನ ಆಸ್ಥಾನದಲ್ಲಿ ೪೬ ಜನ ವಿದ್ವಾಂಸರಿದ್ದರು. ಅವರಲ್ಲಿ ಅಯ್ಯಣ್ಣ ದೀಕ್ಷಿತರು ಅಗ್ರಗಣ್ಯರು. ಅವರನ್ನು ರಾಮಭದ್ರ ದೀಕ್ಷಿತರೆಂದೂ, ಅಯ್ಯ ದೀಕ್ಷಿತರೆಂದೂ ಕರೆಯಲಾಗುತ್ತಿತ್ತು. ಅವರು ಬರೆದ ಅನೇಕ ವಿದ್ವದ್‌ಗ್ರಾಹ್ಯವಾದ ಗ್ರಂಥಗಳಲ್ಲಿ ೧) ಜಾನಕೀಪರಿಣಯವೆಂಬ ನಾಟಕ, ೨) ಪತಂಜಲಿ ಚರಿತವೆಂಬ ಕಾವ್ಯ ಮತ್ತು ೩) ವ್ಯಾಸತಾತ್ಪರ್ಯ ನಿರ್ಣಯ ಎಂಬ ಅದ್ವಿತೀಯ ಶಾಸ್ತ್ರಗ್ರಂಥ ಗಣ್ಯವಾದಂಥವು ಎಂದು ತಿಳಿದು ಬರುತ್ತದೆ. "ಅಯ್ಯಣ್ಣ" ಕನ್ನಡದಲ್ಲಿ "ಅಣ್ಣಯ್ಯ" ಆದದ್ದೂ ಉಂಟು!

ವೇದಾಂತದ ಅಥವಾ ದಶೋಪನಿಷತ್ತುಗಳ ಸಿದ್ಧಾಂತದ ಬಗ್ಗೆ ಇರುವ ಭಿನ್ನಾಭಿಪ್ರಾಯಗಳ ಸಂಖ್ಯೆಗೆ "ಬ್ರಹ್ಮಸೂತ್ರ"ದ ವಿವಿಧ ಭಾಷ್ಯಗಳೆಂಬ ವ್ಯಾಖ್ಯಾನಗಳು ಪ್ರಮಾಣಗಳಾಗಿವೆ. ಅಯ್ಯಣ್ಣ ದೀಕ್ಷಿತರ "ವ್ಯಾಸತಾತ್ಪರ್ಯ ನಿರ್ಣಯ"ವನ್ನು ಓದದ ಯಾವ ವಿದ್ವಾಂಸರೂ ಈ ವರೆಗೆ ಉಕ್ತ ವ್ಯಾಖ್ಯಾನಗಳಲ್ಲಿ ಯಾವುದು ನಿಜವಾಗಿ ಔಪನಿಷದಿಕ ಬ್ರಹ್ಮವಾದದ ಐತಿಹಾಸಿಕ ಪರಂಪರೆಯ ಮೂಲ ಸ್ವರೂಪವನ್ನು ಪ್ರತಿಬಿಂಬಿಸಲು ಶಕ್ತವಾಗಿದೆ! ಎಂಬುದನ್ನು ವಿಚಾರವಂತರೆಲ್ಲರಿಗೂ ಒಪ್ಪಿಗೆಯಾಗುವಂತೆ ನಿರ್ಣಯಿಸಿ ಹೇಳಿಲ್ಲ. ದೀಕ್ಷಿತರು ಅನುಸರಿಸಿದ್ದು ಶುದ್ಧವಾದ ವೈಜ್ಞಾನಿಕ ಕ್ರಮ; ವೇದಾಂತವನ್ನು ಖಂಡಿಸಲು ಹೊರಟ ಪ್ರಾಚೀನ ದರ್ಶನಗಳ ವಕ್ತಾರರು ವೇದಾಂತವೆಂದರೆ ಏನೆಂದು ಗ್ರಹಿಸಿ ಖಂಡಿಸಿದರು? ಎಂಬುದನ್ನು ಸಪ್ರಮಾಣವಾಗಿ ವಿವರಿಸಿ ಆ ಮೂಲಕ ವ್ಯಾಸರು ಬರೆದ "ಬ್ರಹ್ಮಸೂತ್ರ"ದ ಸಿದ್ಧಾಂತವು "ಅದ್ವೈತ" ಎಂದು ನಿರ್ವಿವಾದವಾಗಿ ತೋರಿಸಿಕೊಟ್ಟಿದ್ದಾರೆ. ವಿದ್ವಾಂಸರು ಅಗತ್ಯವಾಗಿ ಈ ಗ್ರಂಥವನ್ನು ಓದಬೇಕು. ಇತಿಹಾಸ-ಪಂಡಿತರಿಗೆ ಇದು ಮಾರ್ಗದರ್ಶಕವಾದೀತು. ಇಂಥ ಅಪೂರ್ವ ಪ್ರಮಾಣ ಗ್ರಂಥವೊಂದನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿಕೊಟ್ಟ ಕರ್ಕಿಯ ವಿದ್ವಾನ್ ರಾಮಚಂದ್ರಶಾಸ್ತ್ರಿ ಸೂರಿಗಳು ಸಂಶೋಧಕರೆಲ್ಲರ ಕೃತಜ್ಞತೆಗೆ ಪಾತ್ರರು.

ಶ್ರೀ. ರಾಮಚಂದ್ರ ಶಾಸ್ತ್ರಿಗಳು ವೇದಾಂತದಲ್ಲಿ ಘನ ಪಂಡಿತರು, ನಿಶಿತಮತಿಗಳು, ತರ್ಕಪ್ರವೀಣರು ಮತ್ತು ಸರಳವಾದ ಕನ್ನಡ ಶೈಲಿಯಲ್ಲಿ ತತ್ವಗಳನ್ನು ವಿವರಿಸಬಲ್ಲ ವಿದಗ್ಧ ಶಿಕ್ಷಕರು. ಇಂಥವರು ಮೂಲಾನುಸಾರವಾಗಿ ಮಾಡಿರುವ ಕನ್ನಡ ಸರಳಾನುವಾದವು ಜಿಜ್ಞಾಸುಗಳಾದ ಸರ್ವರ ಆದರಕ್ಕೂ ಪಾತ್ರವಾಗದೆ ಉಳಿಯದು. ಭಾರತಕ್ಕೆ ವಿದೇಶಗಳ ಗೌರವವನ್ನು ಅತ್ಯಂತ ಹೆಚ್ಚಾಗಿ ದೊರಕಿಸಿಕೊಟ್ಟ ಒಂದೇ-ಒಂದು ಶಾಸ್ತ್ರ ಯಾವುದಾದರೂ ಇದ್ದರೆ ಅದು ವೇದಾಂತ. ಆದುದರಿಂದ ಶಿರಸಿಯ ಮಾರಿಕಾಂಬಾ ದೇವಾಲಯವು ಈ ಗ್ರಂಥವನ್ನು ಮುದ್ರಿಸಿ ಪ್ರಕಟಿಸಿ ಕೊಡುತ್ತಿರುವುದು ಆದರ ಸಾಂಸ್ಕೃತಿಕ ಚಟುವಟಿಕೆಗಳಿಗೆ ಕಲಶಪ್ರಾಯವಾಗಿದೆ.

" ಜಯಂತಿ ತೇ ಸುಕೃತಿನೋ ರಸಸಿದ್ಧಾಃ ಕವೀಶ್ವರಾಃ
ನಾಸ್ತಿ ತೇಷಾಂ ಯಶಃ ಕಾಯೇ ಜರಾಮರಣಜಂ ಭಯಂ "

ಶಿರಸಿ — **ಪ್ರೊ. ಬಿ. ಎಚ್. ಶ್ರೀಧರ**
೧೩-೯-೧೯೬೭ ವೈಸ್ ಪ್ರಿನ್ಸಿಪಾಲ್,
ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು.

ಲೇಖಕರ ಮಾತು

ದರ್ಶನಗಳು ಅನೇಕ ಇವೆ. ಪ್ರಾಚೀನ ನವೀನಭೇದಗಳೂ ಇವೆ. ಆಸ್ತಿಕ ಷಡ್ದರ್ಶನಗಳೂ, ನಾಸ್ತಿಕ ಷಡ್ದರ್ಶನಗಳೂ ಪ್ರಾಚೀನವಾದವುಗಳು. ಇವುಗಳಲ್ಲಿಯೂ ಎಷ್ಟೋ ಮತಭೇದಗಳಿವೆ. ಪ್ರಕೃತ ಈ ಗ್ರಂಥವು ಯಾವ ಮತವನ್ನೂ ದೂಷಿಸಲು ಹೊರಟಿಲ್ಲ. ಆ ದೂಷಣ-ಭೂಷಣಗಳು ಆಯಾ ದರ್ಶನಗ್ರಂಥಗಳಲ್ಲಿವೆ. ಈ ವ್ಯಾಸತಾತ್ಪರ್ಯನಿರ್ಣಯವು ವ್ಯಾಸರ ಅಭಿಪ್ರಾಯವೇನೆಂಬುದನ್ನು ಮಾತ್ರ ಸಮರ್ಥನೆ ಮಾಡುತ್ತಿದೆ. ಗ್ರಂಥಕರ್ತರ ಸಮರ್ಥನಾರೀತಿಯು ವೈಶಿಷ್ಟ್ಯಪೂರ್ಣವಾಗಿದೆ, ಮನೋಹರವಾಗಿದೆ, ಅನನ್ಯವಾಗಿದೆ. ಇದರಲ್ಲಿ ಎರಡು ಭಾಗಗಳಿದ್ದು ಮೊದಲನೇ ಭಾಗದಲ್ಲಿ " ವ್ಯಾಸತಾತ್ಪರ್ಯ " ವನ್ನು ನಿರ್ಣಯಿಸಿ ಎರಡನೇ ಭಾಗದಲ್ಲಿ ದೇವರಲ್ಲಿ ಉಚ್ಚ-ನೀಚ ಭಾವನೆಗಳನ್ನು ಕಲ್ಪಿಸುವವರಿಗೆ ಚೆನ್ನಾಗಿ ಬುದ್ಧಿಗಲಿಸಿದ್ದಾರೆ. ಆ ತರಹದ ಉಚ್ಚ-ನೀಚ ಭಾವನೆಯು ಮಾನವನಿಗೆ ಮಾರಕವಾದದ್ದೆಂದು ಘೋಷಿಸಿದ್ದಾರೆ. ಅದನ್ನೂ ಸಹ ಬಹು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಗ್ರಂಥಕರ್ತರು " ಶ್ರೀ. ಅಯ್ಯಣ್ಣ ದೀಕ್ಷಿತರು " ಇವರು ಶ್ರೀ. ಮದಪ್ಪಯ್ಯ ದೀಕ್ಷಿತರ ವಂಶದವರಿದ್ದು ಸಂಸ್ಕೃತ ಸಾಹಿತ್ಯೇತಿಹಾಸದಲ್ಲಿ ಚೆನ್ನಾಗಿ ವಿರಾಜಿಸುತ್ತಿದ್ದಾರೆ. ಇವರು ಸುಮಾರು ಕ್ರಿ. ಶ. ೧೬೫೦ ರ ನಂತರದವರೆಂದು ತಿಳಿಯಲಾಗಿದೆ. ಇವರ ಅಣ್ಣ-ತಮ್ಮಂದಿರೂ, ತಂದೆ-ತಾತಂದಿರೂ ಜಗತ್ಪ್ರಸಿದ್ಧ ವಿದ್ವಾಂಸರು. ಇವರು ಮುಂದಿನ ಪೀಳಿಗೆಯಲ್ಲಿ ಜನಿಸಿದ ನೀಲಕಂಠದೀಕ್ಷಿತರೆಂಬುವವರು ಅಭಿನವ ಕಾಳಿದಾಸರೆಂದು ಸುಪ್ರಸಿದ್ಧರಾಗಿ ಬೆಳಗಿದ್ದಾರೆ.

ನನ್ನ ಮಿತ್ರರಾದ ಪ್ರೊ. ಬಿ. ಎಚ್. ಶ್ರೀಧರರು ಈ ಗ್ರಂಥದ ಮೇಲ್ಮೆಯನ್ನು ಅರಿತು ಅದನ್ನು ಕನ್ನಡ ಬಾಂಧವರು ಸವಿಯುವ ಸಮಯವನ್ನೊದಗಿಸಲು ನನಗೆ ತಿಳಿಸಿದರು. ಮತ್ತು ಅದರ ಮುದ್ರಣಾದಿಕಾರ್ಯಗಳ ಭರವಸೆಯನ್ನಿತ್ತರು. ಆ ಹೇತುವಿನಿಂದಾಗಿ ಇದೀಗ ಈ ರೂಪದಿಂದ ನನ್ನ ಕರ್ನಾಟಕದ ಬಂಧು-ಭಗಿನಿಯರ ಮುಂದೆ ಬರುವಂತಾಯಿತು.

ಇದು ಸಂಸ್ಕೃತದ ಪದಶಃ ಅರ್ಥವಾಗಿರದೆ ಅರ್ಥಾನುವಾದವಾಗಿರುತ್ತದೆ. ಆದರೆ ಮೂಲವನ್ನೆಲ್ಲಿಯೂ ಬಿಡಲಿಲ್ಲ. ಇದರ ಹೆಚ್ಚಳದ ಕುರಿತು ನಾನೇನೂ ಹೇಳಬೇಕಾಗಿಲ್ಲ. ಓದುಗರು ಇದನ್ನೋದಿ ಸ್ವತಃ ತಿಳಿಯಬೇಕಾಗಿದೆ. ಈಗಾಗಲೇ "ಆರಾಧನೆ" ಪತ್ರಿಕೆಯ ಟ್ರಸ್ಟಿಯವರಿಂದ ಖಂಡಶಃ ಈ ಮೊದಲೇ ಮುದ್ರಣವಾಗಿ ಹೊರಬಿದ್ದುದನ್ನು ಎಷ್ಟೋ ಜನರು ಸವಿದು ಆನಂದಿಸಿದ್ದಾರೆ.

ಈಗ ಈ ರೂಪದಿಂದ ಹೊರಬರಲೂ ಕಾರಣರಾದ "ಆರಾಧನೆ"-ಸಮಿತಿಯವರಿಗೆ ನಾನು ತುಂಬಾ ಋಣಿ.

—ವಿದ್ವಾನ್ ರಾಮಚಂದ್ರ ಶಾಸ್ತ್ರಿ, ಸೂರಿ ಕರ್ಕಿ.

ಶುದ್ಧಿಪತ್ರ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೨	೫	ರಚಿಸಿದ್ದಾರೆ	ರಚಿಸಿದ್ದಾನೆ
೫	೨	ಭ್ರಹ್ಮ	ಬ್ರಹ್ಮ
೬	೧೨	ಪಾನಿ	ವಾದಿ
೬	೨೮	ಸತ್ಯಾತ್ವ	ಸತ್ಯತ್ವ
೭	೨೨	ಅಂಜಿನಿ	ಅಂಜಲಿ
೯	೧	ರಚನಾಸು	ರಚನಾನು
೧೧	೯	ಆಶ್ಮರಷ್ಯ	ಆಶ್ಮರಥ್ಯ
೧೨	೩೧	ಜೋಷಮಾ	ಜೋಪಮಾ
೧೩	೧	ಜನ್ಮದಾಸ್ಯ	ಜನ್ಮಾದ್ಯಸ್ಯ
೧೩	೨೨	ಸಾಧ್ಯ	ಸಾರ್ಥ
೧೫	೭	ಸವಂದನ	ಸುನಂದನ
೧೫	೨೩	ಜಾಡಾಧಿಕ	ಜಾಪಾಧಿಕ
೧೬	೧	"ಉತ್ರಿಮಿಶ್ರತಃ"	"ಉತ್ಕ್ರಮಿಷ್ಯತಃ"
೧೭	೭	ವಧ್ವ	ಮಧ್ವ
೧೭	೨೭	ಶಾಕ್ತ್ರರಜಿತ	ಶುಕ್ತಿರಜತ
೧೮	೩	ನಿಷ್ಪತ್ಯ	ನಿತ್ಯತ್ವ
೧೮	೫	ವ್ಯಸ್ಥಾತಃ	ವ್ಯವಸ್ಥಾತಃ
೧೮	೫	ಸಾಮ್ಯಥ್ರಾ	ಸಾಮರ್ಥ್ಯ
೧೮	೧೮	ಮರುನೂಬ್ಬ	ಮರುದೊಬ್ಬ
೧೮	೧೮	ಭೊಕ್ತನಿಗೆ	ಭೋಕ್ತನಿಗ
೧೮	೨೬	ಆತ್ಮಕ್ಯತ್ವ	ಆತ್ಮೈಕತ್ವ
೧೮	೩೭	ಸಿದ್ಧಾವಾಗಿ	ಸಿದ್ಧವಾಗಿ
೧೯	೧	ದೂಶಿಸಿ	ದೂಷಿಸಿ
೧೯	೫	ತರ್ಕವಾದ್ದಲ್ಲಿ	ತರ್ಕಪಾದದಲ್ಲಿ
೧೯	೧೦	ವಿಲ್ಲದ್ದರೆ	ವಿಲ್ಲದಿದ್ದರೆ
೧೯	೧೯	ತನನ್ನನ್ನು	ತನ್ನನ್ನು
೧೯	೨೮	ಸ್ಪಷ್ಟಿ	ಸ್ಪಷ್ಟ
೧೯	೩೦	ದ್ರಷ್ಟ್ಯ	ದ್ರಷ್ಟು
೨೦	೫	ಪ್ರತಿ ಪ್ರತಿಜ್ಞಾನ	ಪ್ರತಿಜ್ಞಾ
೨೦	೮	ವೇದಾಂವು	ವೇದಾಂತವು
೨೦	೧೫	ಉಪಶ್ರಮಿಸಿ	ಉಪಕ್ರಮಿಸಿ
೨೦	೨೨	ಸಂಯಿತೆ	ಸಂಹಿತೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೨೦	೨೭	ಏಕೋವಳೀ	ಏಕೋವಶೀ
೨೦	೩೨	ಭಾನನಂತೆ	ಭಾನದಂತೆ
೨೦	೩೩	ಭೃತ್ವ	ಭರ್ತೃ
೨೧	೫	ಆವಿದ್ಯೆ	ಅವಿದ್ಯೆ
೨೧	೮	ಆತ್ಮನು	ಆತ್ಮನ
೨೧	೧೮	ಆಕಾರ	ಆಕಾಶ
೨೧	೧೯	ಮಿಥ್ಯಾತ	ಮಿಥ್ಯಾತ್ವ
೨೧	೨೪	ನ್ಯೆಕ್ವ	ನ್ಯೆಕ
೨೧	೨೫	ಸಂ-ಭಾವಾತ್	ಸಂಭವಾತ್
೨೧	೨೬	ಪಾಂಚರಾತ್ರಿ	ಪಾಂಚರಾತ್ರ
೨೧	೩೬	ಆದ	ಅದು
೨೨	೩	ವಾಖ್ಯ	ವಾಕ್ಯ
೨೨	೪	ಸಿದ್ಧಿತವಾದ	ಸಿದ್ಧವಾದ
೨೨	೧೪	ಡುವರು	ಡರು
೨೨	೨೪	ಚಿಡ್ರೂಪ	ಚಿದ್ರೂಪ
೨೩	೬	ಅಥವರ್ಥ	ಅರ್ಥ
೨೩	೨೩	ಇಲ್ಲದತಾಗುವ	ಇಲ್ಲದಂತಾಗುವ
೨೩	೨೫	ಚ್ಯೂತಿ	ಚ್ಯುತಿ
೨೫	೩೬	ಆಶದಲ್ಲಿ	ಅಂಶದಲ್ಲಿ
೨೪	೨೮	ಪ್ರಮಾನ್	ಪುಮಾನ್
೨೫	೬	ಕಪಿಲ ಅದ್ವೈತ	ಕಲ್ಪಿತದ್ವೈತ
೨೫	೩೧	ಪಂಚದರೀ	ಪಂಚದಶೀ
೨೬	೧೭	ವಸ್ತ್ರ	ವಸ್ತು
೨೬	೨೦	ನಿಧಾನ	ನಿದಾನ
೨೭	೧೨	ಈಶದ	ಈಶನ
೩೦	೨೨	ಜನಗಳಿಂದ	ಜನ್ಮಗಳಿಂದ
೩೧	೨೩	ವಿಶಿಷ್ಠ	ವಿಶಿಷ್ಟ
೩೨	೨	ಯುಕ್ತ	ಮುಕ್ತ
೩೨	೨೧	ಕಲಿಸು	ಕಲ್ಪಿಸು
೩೩	೨೦	ಜನ್ಮಶೃತ	ಜನ್ಮಕೃತ
೩೩	೩೪	ಜನ್ಮಾದ್ಯಪ್ಯಾ	ಜನ್ಮಾದ್ಯಸ್ಯಾ
೩೪	೧	ಸ್ಪಷ್ಟಿ	ಸೃಷ್ಟಿ
೩೬	೨	ಹವಿಸೆಂದು	ಹವಿಸ್ಸೆಂದು
೩೬	೪	ಭಾಗಸ್ಯ	ಭಾಗಸ್ಯ
೩೬	೧೪	ಐತರೀಯ	ಐತರೇಯ
೩೬	೨೦	ಕಾರತ್ವವನ್ನು	ಕಾರಣತ್ವವನ್ನು

ಪುಟ	ಪಂಕ್ತಿ	ಅಶುದ್ಧ	ಶುದ್ಧ
೩೯	೧೮	ಶಪಿತ	ಕಲ್ಪಿತ
೩೯	೨೫	ಮೂರುಗಳಿವೆ	ಮೂರು . ಗುಣಗಳಿವೆ
೪೦	೭	ವಿಗ್ರಾಹ	ವಿಗ್ರಹ
೪೦	೧೧	ವಿಕರತ್ವಾತ್	ವಿಕಾರತ್ವಾತ್
೪೧	೨೪	ಮೂರ್ತಿಯನ್ನಸಿ	ಮೂರ್ತಿಯನ್ನು
೪೫	೩	ಕಾರತ್ವವೂ	ಕಾರಣತ್ವವೂ
೪೫	೧೯	ಲೆಖ್ಯಮಾತ್ರ	ಲೇಶಮಾತ್ರ
೪೯	೨೧	ಬ್ರಾಹ್ಮಣಃ ಪುಣ್ಯಃ	ಬ್ರಾಹ್ಮಣಾಃ ಪುಣ್ಯಾಃ
೫೦	೧	ಜಾಗೃದವಸ್ಥೆ	ಜಾಗ್ರದವಸ್ಥೆ
೫೧	೧೩	ಪ್ರಾಕೃತಿ	ಪ್ರಕೃತಿ
೫೨	೨	ವಿಷ್ಣುವಾ	ವಿಷ್ಣುಂವಾ
೫೨	೧೨	ಬರುವದಿಲ್ಲ"	ಬರುವದಿಲ್ಲ"

॥ ಶ್ರೀರಸ್ತು ॥

ಶ್ರೀ ವ್ಯಾಸ ತಾತ್ಪರ್ಯ ನಿರ್ಣಯ

ಕನ್ನಡ ಅನುವಾದ

ಮೊದಲನೆಯ ಪರಿಚ್ಛೇದವು

॥ ಮಂಗಲಂ ॥

ನಮಿಪೆ ಸತ್ಯಾನಂದ ಬೋಧಗೆ।
ಸಿರಿಯ ನಲ್ಲಗೆ ಚಂದ್ರಮುಕುಟಗೆ!
ಈಶರೂಪಗೆ ಜಗವನಾಳುವ ಸೇವ್ಯ ಬೊಮ್ಮಂಗೆ॥
ಸೇವ್ಯ ಸೇವಕಭಾವ ತಳೆದಿಹ।
ಜೀವರೂಪಗೆ ಜೀವಜಾತರ।
ಭೋಗ್ಯ ವಸ್ತುಗಳಾಗಿರುವ ಈ ಸರ್ವರೂಪಂಗೆ ॥ ೧ ॥

ಯಾರ ನೋಟವು ಎಲ್ಲ ಜನಗಳ।
ಪಾಪಮಯ ಕತ್ತಲೆಯ ಸೂರ್ಯನೊ।
ಯಾರ ವಚನವು ಭಕ್ತಿವೈರಾಗ್ಯಗಳ ಉದ್ಗಮವೋ॥
ಮಂದರಾದ್ರಿಯೊಲಿರುವುದುಪದೇ-।
ಶಕ್ರಮವು ನಿಜಸುಖಸುಧೆಗೆ ಮೇಣ್!
ನಮಿಪೆ ಶ್ರೀಧರ ವೆಂಕಟಾರ್ಯರ್ಗಮಿತ ಪರಿಯಿಂದ ॥ ೨ ॥

ಮಗನು ವೆಂಕಟಪತಿಗೆ, ತಮ್ಮನು।
ಸೊಗಯಿಪಲ್ಯಾದ್ರಿಗೆ, ಕವೀಶ್ವರ।
ನೆಗಳಿದನು ತಾ ವ್ಯಾಸತಾತ್ಪರ್ಯಾಖ್ಯ ನಿರ್ಣಯವ॥
ಮುಗುಳರಿಯಲಣ್ಣಯ್ಯ ದೀಕ್ಷಿತ-।
ನುಗಡಣೆಯ ಲೌಕಿಕರು ವೈದಿಕ-।
ರೊಗೆದಸೂಯೆಯ ತೊರೆದು ಪಕ್ಷಗ್ರಹವ ನಿಜವಿರವ ॥ ೩ ॥

ಶ್ರೀಮಾನ್ ಷಡ್ಗುಣೈಶ್ವರ್ಯದಿಂದೊಪ್ಪುವ ದಯಾಮಯನಾದ ನಾರಾಯಣನು ಎಲ್ಲ ದೀನಜನರ ಅನುಗ್ರಹಕ್ಕಾಗಿ ವ್ಯಾಸರೂಪದಿಂದ ಅವತರಿಸಿ ನಾನಾರ್ಥಕವಾಗಿ ತೋರುವ

ಉಪನಿಷದ್ವಾಕ್ಯಗಳನ್ನು ಸರಿಯಾಗಿ ತಿಳಿಯಲು ಅಸಮರ್ಥರಾದ ಮಂದಬುದ್ಧಿಗಳಿಗಾಗಿ ಎಲ್ಲ ಉಪನಿಷತ್ತುಗಳ ನಿಜವಾದ ತಾತ್ಪರ್ಯವನ್ನು ನಿರ್ಣಯ ಮಾಡುವ ಮೂಲಕ, ಪರತತ್ವ ಸ್ವರೂಪವನ್ನು ತಿಳಿಸಲೋಸುಗ, ಮೋಕ್ಷಸಾಧನವಾದ ತತ್ವಜ್ಞಾನವನ್ನು ವಿಸ್ತರಿಸುವ "ಅಥಾ- ತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರವನ್ನು ಮೊದಲ್ಗೊಂಡು "ಅನಾವೃತ್ತಿಃ ಶಬ್ದಾತ್" ಎಂಬಲ್ಲಿಗೆ ಪೂರ್ಣವಾಗುವ ಒಂದು "ಬ್ರಹ್ಮಸೂತ್ರ" ವೆಂಬ ಗ್ರಂಥವನ್ನು ರಚಿಸಿದ್ದಾರೆ. ವ್ಯಾಸರು ನಾರಾಯಣನ ಅವತಾರವೆನ್ನುವದಕ್ಕೂ, ಅವರೇ ಬ್ರಹ್ಮಸೂತ್ರವನ್ನು ರಚಿಸಿದವರೆನ್ನು ವದಕ್ಕೂ ಶೈವ ಏಕಾದಶ ರುದ್ರಸಂಹಿತೆಯಲ್ಲಿ ಆಧಾರವಿದೆ. ಆ ವಚನವು ಇಂತಿದೆ. "ವ್ಯಾಸರು ನಾ ರಾ ಯ ಣ ನ ಅಂಶಾವತಾರಿಗಳೂ, ಷಡ್ಗುಣೈಶ್ವರ್ಯಸಂಪನ್ನರೂ, ಬಾದರಾಯಣನೆಂಬ ಇನ್ನೊಂದು ಹೆಸರುಳ್ಳವರೂ ಆಗಿರುವರು. ಮಂದ ಬುದ್ಧಿಗಳಾದ ಜನರನ್ನು ಕಂಡು ದಯೆಯಿಂದ "ವೇದಾಂತಗಳ ಅರ್ಥವು ಸಾಮಾನ್ಯರಿಗಾಗಲಾರದು; ಒಮ್ಮೆ ಆದರೂ ನಾನಾ ಪ್ರಕಾರವಾಗಿ ಆದೀತು;- ಒಂದೇ ರೀತಿಯಿಂದ ಆಗಲಾರದು; ಆದ್ದರಿಂದ ಇವರು ಬ್ರಹ್ಮತತ್ವವನ್ನು ಹೇಗೆ ತಿಳಿದಾರು?" ಎಂದಾಲೋಚಿಸಿ ಶಂಕರನ ಆಜ್ಞೆಯ ಮೇರೆಗೆ ಉಪನಿಷತ್ತುಗಳ ಅರ್ಥವನ್ನು ಸೂತ್ರರೂಪದಿಂದ ಬರೆದರು."

ವ್ಯಾಸರಿಂದ ರಚಿಸಲ್ಪಟ್ಟ ಆ ಬ್ರಹ್ಮಸೂತ್ರಗಳ ಅರ್ಥವೂ ಆಯಾ ಕಾಲದ ಜನರಿಗೆ ಸ್ಪಷ್ಟವಾಗಿ ತಿಳಿಯದುದರಿಂದ ಶ್ರೀ ಶಂಕರಭಗವತ್ಪಾದರು, ಭಟ್ಟ ಭಾಸ್ಕರಾಚಾರ್ಯರು, ಶ್ರೀ- ಕಂಠಾಚಾರ್ಯರು, ಯಾದವ ಪ್ರಕಾಶರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಚಿತ್ಪ್ರಕಾಶಾಚಾರ್ಯರು, ಮತ್ತು ವಲ್ಲಭಾಚಾರ್ಯರೇ ಮುಂತಾದ ಅನೇಕ ಭಾಷ್ಯಕಾರರು, ತಮ್ಮ ತಮ್ಮ ಮತಗಳಿಗನುಗುಣವಾಗಿ ಆ ಸೂತ್ರಗಳನ್ನು ಅರ್ಥ ಮಾಡಿದ್ದಾರೆ. ಅವುಗಳಲ್ಲಿ:-

ಶ್ರೀ ಶಂಕರಾಚಾರ್ಯರದ್ದು:- ಜೀವಬ್ರಹ್ಮ-ಅಭೇದವು ಸ್ವಾಭಾವಿಕವೂ ತ್ರಿಕಾಲ ಸತ್ಯವೂ ಭೇದವು ಮಾಯಿಕವೂ ಅಸತ್ಯವೂ ಆದದ್ದು ಎಂಬ ಮತ.

ಭಟ್ಟ ಭಾಸ್ಕರಾಚಾರ್ಯರದ್ದು;- ಜೀವನಿಗೂ ಬ್ರಹ್ಮನಿಗೂ ಅಭೇದವು ಸ್ವಾಭಾವಿಕ ಸತ್ಯವೆಂದೂ ಭೇದವು ಉಪಾಧಿನಿಮಿತ್ತಕವಾದರೂ ಸತ್ಯವಾದದ್ದೂ ಎಂಬ ಮತ.

ಯಾದವ ಪ್ರಕಾಶಾಚಾರ್ಯರು:- ಜೀವ-ಬ್ರಹ್ಮರೊಳಗೆ ಭೇದಾಭೇದಗಳೆರಡೂ ಸ್ವಾಭಾವಿಕ ಸತ್ಯವೆಂದು ಹೇಳುವರು.

ಶ್ರೀಕಂಠ-ರಾಮಾನುಜಾಚಾರ್ಯರ ಮತಗಳಲ್ಲಿ ವಿಶಿಷ್ಟಾದ್ವೈತವೂ, ಜೀವಬ್ರಹ್ಮರ ಭೇದಾಭೇದ ಗಳೂ, ಸ್ವಾಭಾವಿಕವೆಂದು ಸಮನಾಗಿ ಹೇಳಿದ್ದರೂ ಶ್ರೀಕಂಠರು ಶಿವಸರ್ವೋತ್ತಮವಾದಿಗಳೂ ರಾಮಾನುಜರು ವಿಷ್ಣುಸರ್ವೋತ್ತಮವಾದಿಗಳೂ ಇರುವರು.

ಮಧ್ವಾಚಾರ್ಯರು:- ಜೀವಬ್ರಹ್ಮರ ಭೇದವು ಸ್ವಾಭಾವಿಕ ಸತ್ಯವಾದದ್ದೆಂದು ಹೇಳುವರು.

ಈ ಸಂದರ್ಭಕ್ಕೆ ಹೊಂದುವ ಒಂದು ಸ್ಕಂದಪುರಾಣದ ವಚನವು ಇಲ್ಲಿ ನೆನಪಿಗೆ ಬರುತ್ತದೆ. "ಎಲೈ ಬ್ರಾಹ್ಮಣರೇ! ಈ ವೈದಿಕ ಮಾರ್ಗವನ್ನು ಬಹು ಪ್ರಯತ್ನದಿಂದಲಾದರೂ ಸ್ಥಾಪಿಸಿರಿ. ವೈದಿಕ ಮಾರ್ಗವು ಸುಸ್ಥಿರವಾದಾಗಲೇ ಎಲ್ಲವೂ ಸುಖಮಯವಾಗುವದು. ಯಾವನು ವೈದಿಕ ಮಾರ್ಗಸ್ಥಾಪನೆಯಲ್ಲಿ ಶಕ್ತನಾಗಿಯೂ ಅದನ್ನು ಮಾಡುವದಿಲ್ಲವೋ, ಆತನನ್ನು ಕೊಂದರೂ ಪಾಪವಿಲ್ಲ ಎಂದು ವೇದಾಂತಗಳು ಘೋಷಿಸುತ್ತಿವೆ. ಯಾವಾತನು ಅಸಮರ್ಥ ನಾದರೂ ವೇದೈಕ ಶ್ರದ್ಧೆಯಿಂದ ಅದನ್ನು ಸ್ಥಾಪಿಸಲು ತೊಡಗುವನೋ ಆತನು ಸರ್ವಪಾಪ ದಿಂದಲೂ ಮುಕ್ತನಾಗಿ ಆತ್ಮಜ್ಞಾನಕ್ಕೆ ಭಾಗಿಯಾಗುವನು. ಯಾವದು ತನ್ನ ವಿದ್ಯಾಭಿಮಾನ ದಿಂದ ವೇದಮಾರ್ಗ ಪ್ರವರ್ತಕನನ್ನು ಕುಯುಕ್ತಿಗಳಿಂದ ಜಯಿಸುವನೋ ಆತನು ಮಹಾ- ಪಾಪಿಯಾಗುವನು." ಎಂದು.

ಈ ಸ್ಕಂದಪುರಾಣದ ಅಭಿಪ್ರಾಯವನ್ನು ಆಲೋಚಿಸಿದರೆ ವೇದಾಂತ ವಾಕ್ಯಗಳ ಅರ್ಥ ನಿರ್ಣಯ ಮಾಡುವದು ವೈದಿಕನ ಅವಶ್ಯ ಕರ್ತವ್ಯದಲ್ಲಿ ಸೇರಿದ್ದೆಂದು ತಿಳಿದು ಬರು ವದು. ಆದ್ದರಿಂದ ಅದರ ನಿರ್ಣಯಕ್ಕಾಗಿಯೇ ಹೊರಟ ವ್ಯಾಸರ ಅಭಿಪ್ರಾಯವು ಈ ಹಿಂದೆ ಹೇಳಿದ ಆಚಾರ್ಯರುಗಳ ಮತಗಳೊಳಗೆ ಯಾವುದು? ಎಂಬ ಸಂಶಯ ಬಂದರೆ—

"ಕೇವಲ ಅದ್ವೈತವೇ ವ್ಯಾಸರಿಗೆ ಅಭಿಮತವಾದದ್ದು" ಎಂದು ನಿರ್ಣಯವನ್ನು ಮಾಡುವೆವು.

ಆದರೆ "ಪ್ರತಿ ದ್ವಾಪರದಲ್ಲಿಯೂ ವಿಷ್ಣುವು ವ್ಯಾಸರೂಪದಿಂದ ಅವತರಿಸುವನು. ಶ್ರೀ ಕೈಲಾಸೇಶನು ನಾಲ್ಕು ಶಿಷ್ಯರೊಂದಿಗೆ ಶಂಕರಾಚಾರ್ಯ ರೂಪದಿಂದ ಕಲಿಯುಗದಲ್ಲಿ ಅವತರಿಸುವನು" ಎಂಬಂತಹ ಪುರಾಣ ವಚನಗಳಿಂದ ಶ್ರೀ ಶಂಕರಭಗವತ್ಪಾದಾಚಾರ್ಯರು ಸಾಕ್ಷಾತ್ ಪರಶಿವನ ಅವತಾರವೆಂದು ತಿಳಿದುಬರುವದರಿಂದ, ಆ ಶಂಕರನು ಸೂತಸಂಹಿತೆ ಯನ್ನು ಹದಿನೆಂಟು ಸಲ ನೋಡಿ ಕಿವಿಗಿಂಪಾದ ಬ್ರಹ್ಮಸೂತ್ರಭಾಷ್ಯವನ್ನು ಬರೆದರೆಂದೂ ಅವರ ಭಾಷ್ಯಕ್ಕೆ ಸೂತಸಂಹಿತೆಯೇ ಮೂಲವೆಂದೂ ಕಂಡುಬರುವದರಿಂದ ಶ್ರೀ ಶಂಕರಾಭಿಮತವಾದ ಕೇವಲವಾದ ಅದ್ವೈತವೇ ವ್ಯಾಸರಿಗೆ ಅಭಿಮತವಾದದ್ದೆಂದು ಪ್ರಾಮಾಣಿಕವಾಗಿ ಸ್ಪಷ್ಟವಾಗು ವಾಗ ಮತ್ತೆ ಆ ಬಗ್ಗೆ ಈ ಗ್ರಂಥವನ್ನು ಬರೆಯುವದು ವ್ಯರ್ಥವಲ್ಲವೇ? ಎಂಬ ಶಂಕೆ ಯುಂಟಾಗಬಹುದು.

ಅದಕ್ಕೆ ಉತ್ತರವೇನಂದರೆ:- "ಅನಂತನು ಮಹಾಶೇಷನ ಪ್ರಥಮ ಅವತಾರ ವೆಂತಲೂ ಲಕ್ಷ್ಮಣನು ಎರಡನೆಯವನೆಂತಲೂ ಬಲರಾಮನು ಮೂರನೆಯವನೆಂತಲೂ ರಾಮಾ- ನುಜಾಚಾರ್ಯರು ನಾಲ್ಕನೆಯವನೆಂತಲೂ ಹೇಳಿದ" ಪುರಾಣವಚನದಂತೆ ರಾಮಾನುಜಾ- ಚಾರ್ಯರು ಮಹಾಶೇಷನ ಅವತಾರವೆಂದೂ, ಅವರು ಬೋಧಾಯನಾಚಾರ್ಯರಿಂದ ರಚಿತ ವಾದ ವಿಸ್ತೃತವಾದ ಬ್ರಹ್ಮಸೂತ್ರವೃತ್ತಿಯನ್ನೇ ಅವಲಂಬಿಸಿ ಭಾಷ್ಯವನ್ನು ಬರೆದರೆಂದೂ ಪ್ರಾಮಾಣಿಕವಾಗಿ ಆ ಮತದವರು ನಂಬುವದರಿಂದ ಅದೂ ನ್ಯಾಯಸಮ್ಮತವಾಗಬೇಕಾಯಿತು; ಮತ್ತು ಮೊದಲ ಅವತಾರವು ಹನುಮಂತನೆಂದೂ ಎರಡನೆಯದು ಭೀಮಸೇನನೆಂದೂ ಮೂರನೆ ಯದು ಮಧ್ವಾಚಾರ್ಯರೆಂದೂ ಹೇಳಿ ಈ ಮೂರು ಅವತಾರಗಳಿಂದ ವಾಯುದೇವನು ಭಗ ವಂತನ ಕಾರ್ಯ ಸಾಧಕನೆಂದು ಹೇಳುವ ವಚನಗಳ ಮೇಲೆ ಮಧ್ವಾಚಾರ್ಯರು ವಾಯು ವಿನ ಅವತಾರವೆಂತಲೂ ಅವರ ಭಾಷ್ಯವು ಅವರ ಮತದಲ್ಲಿಯೇ ಪ್ರಸಿದ್ಧವಾದ "ಬ್ರಹ್ಮತರ್ಕ" "ಮೂಲರಾಮಾಯಣ" ಮೊದಲಾದ ಗ್ರಂಥಗಳ ಮೂಲಕ ರೂಪಿತವಾದುದೆಂದು ಸಿದ್ಧವಾಗುವಾಗ ಮಧ್ವಾಚಾರ್ಯರ ಮತವೂ ವ್ಯಾಸತಾತ್ಪರ್ಯಕ್ಕೆ ಅನುಗುಣವಾಗಿದೆಯೆಂದು ಹೇಳಬೇಕಾಯಿತು.

ಇದರಂತೆ ಭಟ್ಟ ಭಾಸ್ಕರ, ಯಾದವಪ್ರಕಾಶ, ಶ್ರೀಕಂಠ, ಚಿತ್ಸುಖ, ಚಿದ್ವಿವರಣ, ವಲ್ಲಭ ಮೊದಲಾದ ಎಲ್ಲ ಆಚಾರ್ಯರ ಮತಗಳು ಆಯಾ ಮತಪ್ರಸಿದ್ಧವಾದ ಆಯಾ ವಚನಗಳಿಂದ ಆಯಾ ಆಚಾರ್ಯರು ಆಯಾ ದೇವಾಂಶಸಂಭೂತರಾಗಿ ಬರೆದಿದ್ದರಿಂದ ಪ್ರಾಮಾಣಿಕವಾದವುಗಳೆಂದು ಒಪ್ಪುವಾಗ ಅವೇ ವ್ಯಾಸತಾತ್ಪರ್ಯಕ್ಕೆ ಹೊಂದಿಕೊಂಡಿವೆಯೆಂಬುದೂ ಒಪ್ಪಬೇಕಾದ ಸಂಗತಿಗಳಾಗುತ್ತವೆ. ಹೀಗಾಗಿ ಅನ್ಯೋನ್ಯ ವಿರುದ್ಧವಾದ ಅರ್ಥಗಳನ್ನು ಹೇಳುತ್ತಿರುವ ಆ ಎಲ್ಲ ಭಾಷ್ಯಗಳನ್ನೂ ಓದುವ ಮಂದರಿಗೆ ವ್ಯಾಸತಾತ್ಪರ್ಯದಲ್ಲಿ ಸಂಶಯ ಬರುವದರಿಂದ ಅದರ ನಿರ್ಣಯಕ್ಕಾಗಿ ಈ ಗ್ರಂಥವನ್ನು ಬರೆಯಲೇ ಬೇಕಾಗಿದೆ. ಆದ್ದರಿಂದ ಆ ವಿಚಾರವನ್ನೇ ಶುರುಮಾಡುವೆನು.

" ಸೂತಸಂಹಿತೆ " " ಬೋಧಾಯನ ವೃತ್ತಿ " ಮುಂತಾದ ಮೂಲಗಳನ್ನು ಅನುಸರಿಸಿ ಬರೆದ ಆ ಎಲ್ಲ ಭಾಷ್ಯಗಳೂ—

೨) ವ್ಯಾಸರ ಮತವಾದ ಒಂದರ್ಥದಲ್ಲಿ ಪ್ರಮಾಣಗಳೋ?

೨) ಅಥವಾ ಅಪ್ರಮಾಣಗಳೋ ?

೩) ಅಥವಾ ಆ ಭಾಷ್ಯಗಳೊಳಗೆ ಯಾವದೋ ಒಂದು ಭಾಷ್ಯವು ಮಾತ್ರ ಪ್ರಮಾಣವೋ?

ಎಂಬ ಮೂರು ಪ್ರಶ್ನೆಗಳು ಇಲ್ಲಿ ಉದ್ಭವಿಸುವವು.

ಒಂದೇ ವಸ್ತುವು ನಾನಾರೂಪವನ್ನು ನಿಜವಾಗಿ ಹೊಂದಬೇಕಾಗಿ ಬರುವದರಿಂದ ಮೊದಲನೆಯ ಪ್ರಶ್ನೆಯನ್ನು " ಹೌದು " ಎಂದು ಒಪ್ಪಲು ಬರುವಂತಿಲ್ಲ. ಎಂದಿಗೂ ಒಂದು ವಸ್ತುವು ವಿರುದ್ಧವಾದ ಅನೇಕ ರೂಪಗಳನ್ನು ನಿಜವಾಗಿ ಹೊಂದಲಾರದು. ಎರಡನೆಯ ಪ್ರಶ್ನೆಯನ್ನು ಒಪ್ಪಿದರೆ ಆಯಾ ಭಾಷ್ಯಗಳಲ್ಲಿ ಹೇಳಿದಂತೆ ಭೇದವೊ ಅಭೇದವೊ ಯಾವದೋ ಒಂದು ರೂಪವು ವಸ್ತುವಿಗೆ ಇರಬೇಕಾದದ್ದು ಯುಕ್ತವಾದಾಗ ಆ ಅರ್ಥವನ್ನು ಹೇಳುವ ಉಪನಿಷತ್ತುಗಳೂ ಬ್ರಹ್ಮಸೂತ್ರಗಳೂ ಅಪ್ರಾಮಾಣಿಕವಾದವುಗಳೆಂದಾಗಿ ವೇದಾಂತ ಶಾಸ್ತ್ರವೇ ಇಲ್ಲದಂತಾಗುವದು. ಆದ್ದರಿಂದ ಆ ಎರಡೂ ಪ್ರಶ್ನೆಗಳನ್ನು ಬಿಟ್ಟು ಮೂರನೆಯ ಪ್ರಶ್ನೆಯನ್ನೇ " ಹೌದು " ಎಂದು ಒಪ್ಪಿಕೊಳ್ಳಬೇಕಾಗುವದು. ಅಂದರೆ ಆ ಎಲ್ಲ ಭಾಷ್ಯಗಳೊಳಗೆ ಯಾವದೋ ಒಂದು ಭಾಷ್ಯವು ಮಾತ್ರ ಪ್ರಾಮಾಣಿಕವಾದದ್ದೆಂದು ಒಪ್ಪಿದಂತಾಯಿತು. ಆದರೆ ಆ ಭಾಷ್ಯವೇ ಇದು ಎಂದು ಸುಲಭವಾಗಿ ನಿರ್ಧರಿಸಲು ಯಾರಿಂದಲೂ ಶಕ್ಯವಿಲ್ಲ.

ಒಪ್ಪೆ " ಆ ಎಲ್ಲ ಭಾಷ್ಯಗಳನ್ನೂ ಚನ್ನಾಗಿ ನೋಡಿ ಪೂರ್ವ ಮೀಮಾಂಸೆಯಲ್ಲಿ ಹೇಳಿದ ಉಪಕ್ರಮ ಉಪಸಂಹಾರ ಮುಂತಾದ ಆರು ತಾತ್ಪನಿರ್ಣಯ ಹೇತುಗಳನ್ನು ಮುಂದಿಟ್ಟುಕೊಂಡು ಉಪನಿಷತ್ತು-ಬ್ರಹ್ಮಸೂತ್ರಗಳ ತಾತ್ಪರ್ಯಗಳಲ್ಲಿ ಬಲಾಬಲ ನಿರ್ಣಯ ಮಾಡಿ ಇದೇ ವ್ಯಾಸ ಸಮ್ಮತವೆಂದು ಏಕೆ ಹೇಳಬಾರದು ? " ಎಂಬ ಪ್ರಶ್ನೆಯು ಬರಬಹುದು.

ಆದರೆ ಆ ಎಲ್ಲ ಭಾಷ್ಯಕಾರರೂ ಆ ಉಪಕ್ರಮಾದಿಗಳನ್ನೇ ಇಟ್ಟುಕೊಂಡು ಉಪನಿಷತ್ತು-ಬ್ರಹ್ಮಸೂತ್ರಗಳ ತಾತ್ಪರ್ಯ ಬಲಾಬಲ ನಿರ್ಣಯ ಮಾಡಿಯೇ ತಮ್ಮ ತಮ್ಮ ಭಾಷ್ಯಗಳಲ್ಲಿ " ವ್ಯಾಸ ತಾತ್ಪರ್ಯವಿದು " ಎಂದು ಬರೆದಿರುವಾಗ ನಾವೀಗ ಪುನಃ ಆ ಕಾರ್ಯವನ್ನು ಆ ಮಾರ್ಗದಿಂದ ವಿಶೇಷ ರೀತಿಯಾಗಿ ಮಾಡಲಾರೆವು. ಅಥವಾ ನಾವೇ ಸ್ವತಃ ಯುಕ್ತಿಗಳಿಂದ ಶ್ರುತಿಗಳ ಭಾವವನ್ನು ಕಂಡು ಹಿಡಿದು " ಇದೇ ವ್ಯಾಸ ಸಮ್ಮತವಾದದ್ದು " ಎಂದೂ ನಿರ್ಣಯ ಮಾಡಲಾರೆವು. ಯಾಕಂದರೆ ಇಲ್ಲಿ ಈಗ ಮೂರು ಶಂಕೆಗಳು ಹುಟ್ಟುವವು.

೧) ನಾವು ನಿರ್ಣಯಿಸುವಾಗ ಸಹಕಾರವಾದವುಗಳು ಬರೆ ಯುಕ್ತಿಗಳೊ ?

೨) ಶ್ರುತಿಗಳೊ ?

೩) ಅಥವಾ ಅವೆರಡೂ ಕೂಡಿಯೋ ?

ಈ ಮೂರು ಪ್ರಶ್ನೆಗಳಲ್ಲಿ ಮೊದಲನೆಯ ಪ್ರಶ್ನೆಗೆ ಮತ್ತೆರಡು ವಿಭಾಗಗಳನ್ನು ಮಾಡಬಹುದು. ಆ ಬರೆ ಯುಕ್ತಿಗಳೆಂದರೆ-

೧) ಉಪಕ್ರಮಾದಿ ಆರು ಯುಕ್ತಿಗಳೊ ?

೨) ಪ್ರತಿಜ್ಞಾ, ಹೇತು ಮುಂತಾದ ಐದು ಅವಯವಗಳಿಂದ ಕೂಡಿದ ಅನುಮಾನ ಪ್ರಮಾಣಗಳೋ ?

ಅವು ಉಪಕ್ರಮಾದಿ ಆರು ಯುಕ್ತಿಗಳು ಎಂಬ ಮೊದಲನೆಯ ವಿಭಾಗವು ಹೊಂದುವದಿಲ್ಲ. ಆ ಅರು ಯುಕ್ತಿಗಳು ಶ್ರುತಿಗಳೊಡನೆ ಕೂಡಿಕೊಂಡೇ ಪ್ರಮಾಣವಾಗುವವಾದ್ದರಿಂದ ಮೇಲಿನ ಮೂರನೇ ಪ್ರಶ್ನೆಯೊಳಗೇ ಸೇರ್ಪಡುವದು. ಆದ್ದರಿಂದ ಆ ವಿಭಾಗವು ಬೇರೆಯಾಗಿ ಉಳಿಯಲಿಲ್ಲ; ಮತ್ತು ಮೇಲಿನ ಮೂರನೆಯ ಪ್ರಶ್ನೆಗೆ ಮುಂದೆ ಹೇಳುವ ದೂಷಣಗಳು ಇದಕ್ಕೂ ಹತ್ತುತ್ತವೆ. ಪ್ರತಿಜ್ಞಾದಿ ಐದು ಅವಯವಗಳಿಂದ ಕೂಡಿದ ಅನುಮಾನಗಳು ಸಹಾಯಕ ಯುಕ್ತಿಗಳೆಂಬ ಎರಡನೆಯ ವಿಭಾಗವೂ ಸರಿಯಲ್ಲ. ಯಾಕಂದರೆ " ನೈಷಾ ತರ್ಕೇಣ ಮತಿರಾಪನೇಯಾ " " ತರ್ಕಾಪ್ರತಿಷ್ಠಾನಾತ್ " ಎಂಬ ಶ್ರುತಿ-ಸೂತ್ರಗಳಿಂದಲೂ " ಬಹು ಪ್ರಯಾಸದಿಂದ ಒಬ್ಬನು ಸಿದ್ಧಪಡಿಸಿದ ಅರ್ಥವನ್ನು ಮತ್ತೊಬ್ಬ ಕುಶಲಿಯು ಅಲ್ಲಗಳೆದು ಇನ್ನೊಂದರ್ಥವನ್ನು ಸಿದ್ಧಮಾಡುವನು " ಎಂಬ ತಜ್ಞರ ವಚನದಂತೆಯೂ ವೇದಾಂತ ಮಾತ್ರದಿಂದ ನಿರ್ಣಯಿಸಲ್ಪಡುವ ವಸ್ತುವಿನ ವಿಷಯದಲ್ಲಿ ಬರೆ ಯುಕ್ತಿಗಳಿಗೆ ಪ್ರವೇಶವಿಲ್ಲ ಎಂದು ಸಿದ್ಧವಾಗುವದು. ಆದ್ದರಿಂದ ಬರಿ ಯುಕ್ತಿಯಿಂದ ನಾವು " ಇದೇ ವ್ಯಾಸತಾತ್ಪರ್ಯ " ಎಂದು ನಿರ್ಣಯ ಮಾಡುವದು ಬುಡವಿಲ್ಲದ್ದಾದೀತು. " ಅಹಂ ಬ್ರಹ್ಮಾಸ್ಮಿ, ತತ್ವಮಸಿ, ಅಯಮಾತ್ಮಾ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ, ಆನಂದೋ ಬ್ರಹ್ಮ, ಏಕಮೇವಾದ್ವಿತೀಯಂ ಬ್ರಹ್ಮ" ಮುಂತಾದ ಅಭೇದವನ್ನು ಬೋಧಿಸುವ ಶ್ರುತಿಗಳೂ " ಪೃಥಗಾತ್ಮಾನಂ ಪ್ರೇರಿತಾರಂಚಮತ್ವಾ, ದ್ವಾಸು ಪರ್ಣಾ " ಮೊದಲಾದ ಭೇದವನ್ನು ಬೋಧಿಸುವ ಶ್ರುತಿಗಳೂ ಸಮ

ಸಾಗಿರುವದರಿಂದ ಬರಿ ಶ್ರುತಿ ಸಹಾಯದಿಂದ ಹಾಗೆ ನಿರ್ಣಯಮಾಡಲು ಸಾಧ್ಯವಿಲ್ಲ. ಆದ್ದರಿಂದ ಮೇಲಿನ ಎರಡನೆಯ "ಶ್ರುತಿ, ಸಹಾಯದಿಂದ ನಿರ್ಣಯಿಸುವದು" ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಈ ಅಭಿಪ್ರಾಯದಿಂದಲೇ "ವೇದಾಂತಗಳ ಅರ್ಥವು ಸಾಮಾನ್ಯರಿಗಾಗದು" ಎಂಬ ರುದ್ರ ಸಂಹಿತೆಯ ವಚನವನ್ನು ಮೇಲೆ ಹೇಳಿದ್ದಾಗಿದೆ.

ಮೂರನೆಯದಾದ ಶ್ರುತಿ-ಯುಕ್ತಿ ಇವೆರಡರ ಸಹಾಯದಿಂದ ನಿರ್ಣಯ ಮಾಡುವ ಪಕ್ಷವೂ ಸರಿಯಲ್ಲ. ಯಾಕಂದರೆ- ಈ ಹಿಂದಿನ ಎಲ್ಲ ಭಾಷ್ಯಕಾರರೂ ಇವೆರಡರ ಸಹಕಾರದಿಂದಲೇ ತಮ್ಮ ತಮ್ಮ ಭಾಷ್ಯಗಳಲ್ಲಿ ವ್ಯಾಸ ತಾತ್ಪರ್ಯವನ್ನು ತಮ್ಮ ತಮ್ಮಂತೆ ನಿರ್ಣಯಿಸಿದ್ದಾರೆ; ಮತ್ತು ನಮಗಿಂತಲೂ ಹೆಚ್ಚು ಜ್ಞಾನವುಳ್ಳ ಹಿಂದಿನ ಪಂಡಿತರು ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಗಳ ಬಾಯಿ ಕಟ್ಟಿಸಿ ಇದೇ ವ್ಯಾಸ ಮತವೆಂದು ನಿರ್ಣಯ ಮಾಡದಿರುವಾಗ ಅಲ್ಪಜ್ಞರಾದ ನಾವು ಮತಾಭಿಮಾನದಿಂದಲೂ ಜಡವಾದ ಬುದ್ಧಿಯ ಬಲದಿಂದಲೂ ಹಾಗೆ ನಿರ್ಣಯಿಸುವದು ಬರಿ ಭ್ರಾಂತಿಯಮಾತು.

ಹಾಗಾದರೆ ವ್ಯಾಸ ತಾತ್ಪರ್ಯ ನಿರ್ಣಯದ ವಿಷಯದಲ್ಲಿ ಕುತೂಹಲವುಳ್ಳ ಸಮರ್ಥ ದೊರೆಯು ಸಭೆಗೆ ಎಲ್ಲ ದಾನಿಗಳನ್ನೂ ಕರೆದು ಅವರೆಲ್ಲರ ಅಭಿಪ್ರಾಯಗಳನ್ನೂ ಕೇಳಿಕೊಂಡು ಮಧ್ಯಸ್ಥನ ಸಹಾಯದಿಂದ ಅವುಗಳಲ್ಲೊಂದು ಪಕ್ಷವನ್ನು ನಿರ್ಣಯಿಸಿ "ಇದೇ ವ್ಯಾಸರ ಮತ" ಎಂದು ಸುಗ್ರೀವಾಜ್ಞೆ ಮಾಡಬಹುದಲ್ಲವೇ? ಎನ್ನುವಂತೆಯೂ ಇಲ್ಲ. ಅಂಥ ಪ್ರಭುವು ಈಗ ಯಾರೂ ಇಲ್ಲ ಒಮ್ಮೆ ಇದ್ದರೂ ಮಧ್ಯಸ್ತನು ಸಿಗಲಾರನು. ಮಧ್ಯಸ್ಥನೆಂದರೆ ವಾದಿಪ್ರತಿವಾದಿಗಳು ಒಪ್ಪುವ ಮತಗಳಲ್ಲಿ ಅಭಿಮಾನವಿಲ್ಲದವನಾಗಿಯೂ ಆ ಪಕ್ಷಗಳನ್ನು ಚೆನ್ನಾಗಿ ತಿಳಕೊಂಡಿರುವವನೂ ಆಗಿರಬೇಕು. ಇಂಥ ಮಧ್ಯಸ್ಥನು ಈಗ ಯಾರು? ಎಂಬ ಪ್ರಶ್ನೆ ಈಗ ಏಳುತ್ತದೆ. ಅವೈದಿಕರೆನಿಸಿದ ಚಾರ್ವಾಕ, ಬೌದ್ಧ, ಜೈನ ಮುಂತಾದವರಿಗೆ ವೇದದಲ್ಲಿ ನಂಬಿಕೆಯಿಲ್ಲದಿರುವದರಿಂದ ಮತ್ತು ವೇದಾಂತವನ್ನೋದದಿರುವದರಿಂದ ಅವರು ಬಲಾಬಲ ನಿರ್ಣಯದಲ್ಲಿ ಸಮರ್ಥರಾಗಲಾರರು; ಮತ್ತು ಅವರ ಮುಂದೆ ಈ ವೇದಾರ್ಥ ನಿರ್ಣಯ ಮಾಡಲು ಉಪಕ್ರಮಿಸುವದು ಪಾಪದಾಯಕವಾಗಿರುವದು. "ವೇದಾಕ್ಷರವನ್ನು ಕೇಳಿದರೆ ಕಾಯಿಸಿದ ಸೀಸ ಅರಗುಗಳಿಂದ ಅವರ ಕಿವಿಯನ್ನು ಸುಡಬೇಕು. ವೇದೋಚ್ಚಾರ ಮಾಡಿದರೆ ಅವರ ನಾಲಿಗೆ ಸೀಳಬೇಕು. ಅಭ್ಯಾಸ ಮಾಡಿದರೆ ತಲೆ ಕತ್ತರಿಸಬೇಕು. ಎಂದು ಗೌತಮ ಧರ್ಮಸೂತ್ರದಲ್ಲಿ ವೇದಬಾಹಿರರಿಗೆ ದಂಡ ವಿಧಿಸಿದ್ದಾರೆ. ಇನ್ನು ಕಪಿಲ, ಕಣಾದ, ಗೌತಮ, ಜೈಮಿನಿ, ಪತಂಜಲಿ ಮುಂತಾದ ವೇದಪ್ರಾಮಾಣ್ಯವಾದಿಗಳನ್ನು ಮಧ್ಯಸ್ಥರನ್ನಾಗಿ ಎಣಿಸಬಹುದಾದರೂ ಆಯಾ ಮತವನ್ನೇ ಅವಲಂಬಿಸಿರುವ ಪಂಡಿತರು ಈಗ ಎಲ್ಲಿಯೂ ಕಾಣಿಸುವದಿಲ್ಲ; ಮತ್ತು ಅನೇಕ ಜೀವವಾದ, ಪ್ರಪಂಚಸತ್ಯಾತ್ವ, ಜೀವ-ಪರ ಭೇದ ಮುಂತಾದ ವಿಷಯಗಳಲ್ಲಿ ಇತರೆಲ್ಲರೂ ಪಕ್ಷಪಾತಿಗಳಾದ್ದರಿಂದ ಅವರ ಮಧ್ಯಸ್ಥಿಕೆಯು ಅತ್ಯಂತ ವಿಸಂಗತವಾದುದು. ವೇದಾಂತದ ವಿವಿಧ ಮತಗಳಲ್ಲಿ ಅಭಿಮಾನವುಳ್ಳ ಜನರು ಇರಬಹುದಾದರೂ ಅವುಗಳಲ್ಲಿಯೂ ಶಂಕರ, ರಾಮಾನುಜ, ಮಧ್ವ, ಶ್ರೀಕಂಠ ಎಂಬ ನಾಲ್ಕು ಮತದವರೇ ಹೆಚ್ಚಾಗಿರುವದರಿಂದಲೂ ಇವರನ್ನು ಮಧ್ಯಸ್ಥಿಕೆಗೆ ಕರೆಯುವದು ಹಾಸ್ಯಾಸ್ಪದವಾಗುವದು.

ವಾದಿ-ಪ್ರತಿವಾದಿಗಳ ಅಭಿಪ್ರಾಯ, ಅವುಗಳ ಬಲಾಬಲ ಇವುಗಳನ್ನು ನಿರ್ಣಯಿಸಲು ಇವರು ಸಮರ್ಥರಾದರೂ ತತ್ವನಿರ್ಣಯ ಮಾಡಬೇಕಾದ ಮುಖ್ಯಾಂಶದಲ್ಲಿ ತಮ್ಮ ತಮ್ಮ ಪರಂಪರಾಗತವಾದ ಮತದ ಹಾನಿಯಾಗುವ ಸಂದರ್ಭದಲ್ಲಿ ದುರಾಗ್ರಹಕ್ಕೊಳಗಾಗುವ ಪ್ರಸಂಗ ಬರುವದಿಲ್ಲವೇ? ಇದರಿಂದಲೇ "ವಾದಿಯ ದೌರ್ಬಲ್ಯವು ಮತದ ದೌರ್ಬಲ್ಯಕ್ಕೆ ಕಾರಣ" ಎಂಬ ಗಾದೆ ಹುಟ್ಟಿದೆ.

ಆದ್ದರಿಂದ ೧ ಯುಕ್ತಿಬಲದಿಂದಲೂ, ೨ ಶ್ರುತಿಬಲದಿಂದಲೂ, ೩ ಅದೆರಡರ ಬಲದಿಂದಲೂ, ೪ ಮಧ್ಯಸ್ಥರಾದ ವಿದ್ವಾಂಸರ ಬಲದಿಂದಲೂ ಆಯಾ ವಾದಿಗಳಿಗೊಪ್ಪಿದ ಸುಳ್ಳು ಸಾಕ್ಷಿಯಂತಿರುವ ಸೂತಸಂಹಿತೆ, ಬೋಧಾಯನ ವೃತ್ತಿ ಮುಂತಾದ ವಚನ ಪ್ರಮಾಣಗಳ ಬಲದಿಂದ ಬರೆದ ಆಯಾ ಭಾಷ್ಯಗಳ ಆಧಾರದಿಂದಲೂ ವ್ಯಾಸ ತಾತ್ಪರ್ಯ ನಿರ್ಣಯವನ್ನು ಮಾಡಲು ಬರುವಂತಿಲ್ಲ.

ಹಾಗಿದ್ದರೆ ನೀವಾದರೂ ಈಗ ಆ ನಿರ್ಣಯವನ್ನು ಹೇಗೆ ಮಾಡುವಿರಿ?

ನೋಡಿರಿ! ಹರಿಹರರೊಳಗೆ ಯಾರು ಸತ್ವಗುಣ ಸಂಪನ್ನರು? ಎಂಬ ಪ್ರಶ್ನೆ ಬಂದಾಗ ವೇದಾಂತಾಚಾರ್ಯರು ತಮ್ಮ ಸ್ತೋತ್ರ ಭಾಷ್ಯದಲ್ಲಿ "ಸ್ಯಾನ್ನಾಗರ ದ್ರಾವಿಡ ವೇಸರಂಚ ಕ್ರಮೇಣ ವೈ ಸತ್ವರಜಸ್ತಮಾಂಸಿ। ಮಹೀಸುರೋರ್ವೀಪತಿ ವೈಶ್ಯಕಾಶ್ಚ ಹರಿಶ್ಚ ಧಾತಾ ಹರ ಆದಿದೇವಃ॥" ನಾಗರ, ದ್ರಾವಿಡ, ವೇಸರ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಹರಿ, ಬ್ರಹ್ಮ, ಹರ ಈ ಮೂವರ ಮೂರು ಗುಂಪುಗಳಲ್ಲಿ ಕ್ರಮವಾಗಿ ಸತ್ವ-ರಜಸ-ತಮೋ ಗುಣಗಳಿರುವವು; ಎಂಬ ಮಧ್ಯಸ್ಥ ಶಿಲ್ಪಶಾಸ್ತ್ರ ವಚನದಿಂದ ವಿಷ್ಣುವೇ ಸತ್ವಗುಣಾಶ್ರಯನು ಎಂದು ನಿರ್ಣಯಿಸಿದ್ದಾರೆ.

ಸುದರ್ಶನಾಚಾರ್ಯರು ತಮ್ಮ ಚತುರ್ವೇದ ತಾತ್ಪರ್ಯ ಸಂಗ್ರಹದಲ್ಲಿ ಶಿವ-ನಾರಾಯಣರೊಳಗೆ ನಮಸ್ಕಾರಕ್ಕೆ ಅರ್ಹರು ಯಾರು? ಎಂಬ ಸಂಶಯವನ್ನೆತ್ತಿ ಅದಕ್ಕೆ ಭರತ ಶಾಸ್ತ್ರದ "ವಜ್ರಿಣೀ ಮುದ್ರೆಯಿಂದ ದೇವೇಂದ್ರನನ್ನೂ, ಪದ್ಮಿನೀ ಮುದ್ರೆಯಿಂದ ಬ್ರಹ್ಮನನ್ನೂ, ಶಂಖಿನೀ ಮುದ್ರೆಯಿಂದ ಕೇಶವನನ್ನೂ, ತಲೆಯ ಮೇಲಿನ ಅಂಜನಿ ಮುದ್ರೆಯಿಂದ ಶಿವನನ್ನೂ ಸಂತೋಷಪಡಿಸಬೇಕು" ಎಂಬ ವಚನದ ಆಧಾರದಿಂದ ಭೋಶಂಕರ! ಶಂಖಿನೀ ವಜ್ರಿಣೀ ಮುದ್ರೆಗಳಿಂದ ಇತರ ದೇವರಿಗೆ ಸಂತೋಷವಾದರೂ ನೀನು ಮಾತ್ರ ತಲೆಯಲ್ಲಿಟ್ಟ ಬೊಗಸೆಯಿಂದಲೇ ಪ್ರೀತಿ ಪಡುವವನು ಎಂಬ ತಮ್ಮ ಕಾವ್ಯಮಯ ವಾಣಿಯಿಂದ ಶಂಕರನೇ ಸಮಸ್ಕಾರಕ್ಕೆ ಅರ್ಹನೆಂದು ಹೇಳಿದ್ದಾರೆ.

ಈಗ ನಾವೂ ಮೇಲಿನಂತೆ ಇರುವ ಅನೇಕ ನಿದರ್ಶನಗಳಿಂದ ಶಂಕರ, ರಾಮಾನುಜ, ಮಧ್ವ, ಶ್ರೀಕಂಠ ಮುಂತಾದ ವೇದಾಂತವಾದಿಗಳಿಗೆ ಮಧ್ಯಸ್ತರೆಂದೆನಿಸಿಕೊಂಡ ಕಪಿಲ, ಕಣಾದ, ಗೌತಮ, ಪತಂಜಲಿ, ಜೈಮಿನಿಗಳ ಶಾಸ್ತ್ರಗಳಲ್ಲಿ, ಅವುಗಳನ್ನನುಸರಿಸಿದ ಭಾಷ್ಯ, ವಾರ್ತಿಕ, ವೃತ್ತಿಗ್ರಂಥಗಳಲ್ಲಿ ಮತ್ತು ಪಾಶುಪತ, ಪಾಂಚರಾತ್ರ, ಭೌದ್ಧ, ಜೈನ, ಚಾರ್ವಾಕ, ದರ್ಶನಗಳಲ್ಲಿ "ಪರಮತವನ್ನು ಯುಕ್ತಿಯಿಂದ ತಪ್ಪೆಂದು ಸಿದ್ಧಮಾಡಿದ ಹೊರತು ತಮ್ಮ ಮತವು ಬೆಳಗಲಾರದು" ಎಂಬ ನ್ಯಾಯವನ್ನು ಅನುಸರಿಸಿ ತಮ್ಮ ತಮ್ಮ ಮತಗಳ ಸ್ಥಾಪನೆ

ಗಾಗಿ ಪರ ಮತವನ್ನು ಖಂಡಿಸುವಾಗ ಕಪಿಲ ಕಣಾದಾದಿಗಳು " ಕೇವಲ ಅದ್ವೈತವೇ ವ್ಯಾಸ ತಾತ್ಪರ್ಯಕ್ಕೆ ವಿಷಯ " ವಾದದ್ದೆಂಬ ತಿಳಿವಳಿಕೆಯಿಂದ ಖಂಡಿಸಿರುವದರಿಂದ ಅದೇ ಅದ್ವೈತವು ವ್ಯಾಸಾಭಿಮತವೆಂದು ನಿರ್ಣಯಿಸುವೆವು. ಇದಕ್ಕೆ ಹೊಂದುವಂತೆ ಗೌತಮರು ಒಂದು ಮಾತನ್ನಾಡಿದ್ದಾರೆ. " ಒಂದು ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದಾಗ ಸಾಕ್ಷಿಯ ಆಧಾರದ ಮೇಲೆ ನಿರ್ಣಯಿಸಿಕೊಳ್ಳತಕ್ಕದ್ದು " ಎಂದು. ಆದ್ದರಿಂದ ಆ ಅದ್ವೈತವನ್ನೇ ಒತ್ತಿಹೇಳುವ ಸೂತ-ಸಂಹಿತೆಯ ಮೂಲಕ ಬರೆದ ಶ್ರೀ ಶಂಕರ ಭಗವತ್ಪಾದರ ಭಾಷ್ಯವೇ " ವ್ಯಾಸ ತಾತ್ಪರ್ಯ-ವಿಷಯ " ವೆಂತಲೂ ಪ್ರಾಮಾಣಿಕವೆಂತಲೂ ಸಿದ್ಧವಾಗುತ್ತದೆ.

ಈಗೊಂದು ಶಂಕೆ— ಈ ಮೊದಲು ನೀವು ಜೀವಾನೇಕತ್ವ, ಪ್ರಪಂಚಸತ್ಯತ್ವ, ಜೀವಪರಭೇದ ಮುಂತಾದ ವಿಷಯಗಳಲ್ಲಿ ಅಭಿಮಾನಿಗಳಾದ ಕಪಿಲ, ಕಣಾದ ಮೊದಲಾದ ಋಷಿಗಳು ಮಧ್ಯಸ್ಥರಾಗಲು ಅನರ್ಹರು ಎಂದು ಹೇಳಿ ಈಗ ಅವರನ್ನೆ ಸಾಕ್ಷಿಯಾಗಿ ಇಟ್ಟು ಕೊಂಡು ವ್ಯಾಸ ತಾತ್ಪರ್ಯ ನಿರ್ಣಯವನ್ನು ಮಾಡಿದರೆ ನಿಮಗೆ ಸ್ವವಚನ ವಿರೋಧವೆಂಬ ದೋಷವು ಬರುವದಿಲ್ಲವೇ?

ನಿಜ, ಕಪಿಲಾದಿಗಳಿಗೆ ಭೇದಾಭೇದ ಶ್ರುತಿಗಳ ಅರ್ಥವಿಚಾರದಲ್ಲಿ ವೇದಪ್ರಾಮಾಣ್ಯವಾದಿಗಳಾದ ಅವರಿಗೆ ಮಧ್ಯಸ್ಥತ್ವ ಇಲ್ಲವೆಂದು ಹೇಳಿದರೂ ವ್ಯಾಸ ಮತವನ್ನು ಅನುವಾದ ಮಾಡಿ ಅದನ್ನು ಖಂಡಿಸುವ ಪ್ರಸಂಗದಲ್ಲಿ ಅವರೆಲ್ಲರೂ ವ್ಯಾಸರ ಮತವನ್ನು ಅರಿತಿರಬೇಕಾದದ್ದು ಅವಶ್ಯವಾದ್ದರಿಂದ; ಮತ್ತು ಆ ಪಕ್ಷದಲ್ಲಿ ಅಭಿಮಾನವಿಲ್ಲದ್ದರಿಂದ ವ್ಯಾಸಸಿದ್ಧಾಂತ ವಿಷಯದಲ್ಲಿ ಅವರಿಗೆ ಮಧ್ಯಸ್ಥತ್ವವು ಹೊಂದುವುದಾಗಿದೆ. ಆದುದರಿಂದ ನಮಗೆ ಸ್ವವಚನ ವಿರೋಧವು ಬಂದಂತಾಗಿಲ್ಲ.

ಹಾಗಿದ್ದರೆ ಈ ನಿಮ್ಮ ಗ್ರಂಥದಲ್ಲಿಯೇ ಮೇಲಿನ ರೀತಿಯಿಂದ ವ್ಯಾಸ ಸಿದ್ಧಾಂತವು ಎಲ್ಲರಿಗೂ ತಿಳಿದು ಬರುವದರಿಂದ ಭಾಷ್ಯ ಮೊದಲಾದ ಮೂಲ ಗ್ರಂಥಗಳನ್ನು ಯಾರೂ ಓದಬೇಕಾಗಿಲ್ಲವಷ್ಟೇ ?

ಹಾಗಲ್ಲ " ಉಪನಿಷತ್ತುಗಳಿಂದಲೇ ತಿಳಿಯಬೇಕಾದ ತತ್ವವಿದು " " ಯಾರು ವೇದವನ್ನರಿಯಲಾರರೋ ಅವರು ಈ ಬ್ರಹ್ಮವನ್ನು ತಿಳಿಯಲಾರರು " ಮುಂತಾದ ವೇದಾಂತ ವಾಕ್ಯಗಳ ಆಧಾರದ ಮೇಲೆ ಪರತತ್ವವನ್ನು ನಿರ್ಣಯಿಸುವಾಗ ಶ್ರುತಿಗಳನ್ನೇ ಆಧರಿಸಬೇಕೆಂದು ವ್ಯಾಸರು ಹೇಳಿದ್ದರಿಂದ ಆ ವೇದಾರ್ಥವನ್ನು ನಿರ್ಣಯಿಸುವ ಆಯಾ ಭಾಷ್ಯ ಗ್ರಂಥಗಳನ್ನೇ ಅವಲಂಬಿಸಬೇಕಾಗಿದೆ. ಆದ್ದರಿಂದ ಶಂಕರ ಭಾಷ್ಯದ ರೀತಿಯಿಂದಲೋ ಅಥವಾ ಶ್ರೀಕಂಠ, ರಾಮಾನುಜ, ಮಧ್ವ ಮುಂತಾದವರ ಭಾಷ್ಯಗಳ ರೀತಿಯಿಂದಲೋ ನಿರ್ಣಯ ಮಾಡುವದು ಎಂಬ ಭಿನ್ನಾಭಿಪ್ರಾಯ ಬಂದರೆ ಕಪಿಲಾದಿ ಮಹರ್ಷಿಗಳ ಅನುವಾದ ಬಲದಿಂದ ಬಲಗೊಂಡ ಶಂಕರಾಚಾರ್ಯ ಭಾಷ್ಯದಲ್ಲಿ ಹೇಳಿದ ಪದ್ಧತಿಯಿಂದ ಉಪಕ್ರಮಾದಿ ಆರು ಯುಕ್ತಿಗಳಿಂದ ಶ್ರುತಿಗಳನ್ನು ಅರ್ಥಮಾಡುವದೇ ಯುಕ್ತವೆಂದು ತಿಳಿದು ಎಲ್ಲರೂ ಆ ಭಾಷ್ಯ ಗ್ರಂಥವನ್ನೋದಲು ತವಕಪಡುವರು. ಅಂತೂ ನಮ್ಮ ಗ್ರಂಥವನ್ನು ಓದಿದಮೇಲೆ ಭಾಷ್ಯಾದಿ ಮೂಲ ಗ್ರಂಥಗಳನ್ನೋದಲು ಮತ್ತಿಷ್ಟು ಉತ್ಸಾಹವು ಬರುವದು.

ವ್ಯಾಸಕೃತವಾದ ವೇದಾಂತ ಶಾಸ್ತ್ರದಲ್ಲಿ " ರಚನಾನುಪಪತ್ತೇಶ್ಚ ನಾನುಮಾನಂ " ಮುಂತಾದ ಅಧಿಕರಣಗಳಲ್ಲಿ (ಒಂದೊಂದು ವಿಷಯವನ್ನು ಕುರಿತು ಕೆಲವು ಸೂತ್ರಗಳಿಂದ ವಿಮರ್ಶೆ ಮಾಡುವ ಒಂದೊಂದು ಭಾಗಕ್ಕೆ ಅಧಿಕರಣಗಳು ಎಂದನ್ನುತ್ತಾರೆ.) ಹೇಗೆ ಸಾಂಖ್ಯ ಮತವನ್ನು ಖಂಡಿಸುವರೋ ಹಾಗೆಯೇ ಸಾಂಖ್ಯ ಶಾಸ್ತ್ರದಲ್ಲಿ ಕಪಿಲರು ವೇದಾಂತಶಾಸ್ತ್ರದ ವಿಷಯವಾದ ಕೇವಲಾದ್ವೈತ, ಭೇದೋಪಾಧಿಕತ್ವ, ಪ್ರಪಂಚಾನಿರ್ವಚನೀಯತ್ವ (ಭೇದೋ-ಪಾಧಿಕತ್ವವೆಂದರೆ- ಎಲ್ಲಾ ಭೇದಗಳೂ ಉಪಾಧಿ ಮೂಲಕವಾಗಿ ಬಂದಿರುವವು ಎಂದರ್ಥ. ಪ್ರಪಂಚಾನಿರ್ವಚನೀಯತ್ವವೆಂದರೆ ಈ ಜಗತ್ತು ಸತ್ಯ-ಅಸತ್ಯತೆಗೆ ಹೊರತಾದ್ದು ಎಂದರ್ಥ.) ಮುಂತಾದ ಕೆಲವು ವಿಷಯಗಳನ್ನು ಅನುವಾದ ಮಾಡಿ ಖಂಡಿಸಿದ್ದಾರೆ. ಅದನ್ನೇ ಈಗ ವಿಮರ್ಶಿಸೋಣ.

ಸಾಂಖ್ಯಶಾಸ್ತ್ರದ ಮೊದಲನೆಯ ಅಧ್ಯಾಯದಲ್ಲಿ " ನಾವಿದ್ಯತೋ ಪ್ಯವಸ್ತುನಾ ಬಂಧಾಯೋಗಾತ್ " ಮಿಥ್ಯಾರೂಪದ ಅವಿದ್ಯೆಯಿಂದಲೂ ಬಂಧವು ಹುಟ್ಟಲಾರದಾದ್ದರಿಂದ ಕೇವಲಾ-ದ್ವೈತವು ಯುಕ್ತವಲ್ಲ. " ವಸ್ತುತ್ವೇ ಸಿದ್ಧಾಂತ ಹಾನಿಃ " ಆ ಅವಿದ್ಯೆಯು ಸತ್ಯವಾದರೆ ಸಿದ್ಧಾಂತವು ಕೆಡುವದು. " ವಿಜಾತೀಯ ದ್ವೈತಾಪತ್ತಿಶ್ಚ " ಮತ್ತು ಚೈತನ್ಯಕ್ಕೆ ವಿಜಾತೀಯವಾದ ಜಡ-ದ್ವೈತವು ಸಿದ್ಧಿಸುವದು. " ಏವಮೇಕತ್ವೇನ ಪರಿವರ್ತಮಾನಸ್ಯ ನ ವಿರುದ್ಧ ಧರ್ಮಾಧ್ಯಾಸಃ " ಒಂದೇ ವಸ್ತುವಿನಲ್ಲಿ ವಿರುದ್ಧ ಧರ್ಮಗಳು ತೋರಲಾರವು. ಐದನೆಯ ಅಧ್ಯಾಯದಲ್ಲಿ " ನಾವಿದ್ಯಾಶಕ್ತಿಯೋಗೋ ನಿಃಸಂಗಸ್ಯ " ನಿಃಸಂಗನಾದ ಬ್ರಹ್ಮನಿಗೆ ಅವಿದ್ಯೆಯೆಂಬ ಶಕ್ತಿಯ ಸಂಬಂಧ ಬರಲಾರದು. " ನೈಕಸ್ಯ ಆನಂದ ಚಿದ್ರೂಪತ್ವೇ, ದ್ವಯೋರ್ಭೇದಾತ್ " ಒಬ್ಬನಿಗೇ ಆನಂದರೂಪತ್ವವೂ ಜ್ಞಾನರೂಪತ್ವವೂ ಬರಲಾರದು. ಅವೆರಡೂ ವಿಭಿನವಾದವುಗಳು. "ನಾದ್ವೈತಂ ಆತ್ಮನೋ ಲಿಂಗಾತ್ ತದ್ಭೇದ ಪ್ರತೀತೇಃ " ಆತ್ಮನು ಅದ್ವಿತೀಯನಲ್ಲ. ಸುಖ ದುಃಖಾದಿಗಳು ಪ್ರತಿಒಬ್ಬನಿಗೂ ಭಿನ್ನವಾಗಿ ತೋರುತ್ತಿರುವದರಿಂದ ಆತ್ಮನು ಪ್ರತಿ ದೇಹದಲ್ಲಿಯೂ ಭಿನ್ನವಾಗಿರುವನೆಂದು ತಿಳಿದು ಬರುವದು. ಇವೇ ಮುಂತಾದ ಅನೇಕ ಸೂತ್ರಗಳಿಂದ ಕೇವಲಾದ್ವೈತವನ್ನೆತ್ತಿ ಖಂಡಿಸಿರುವದು ಅತ್ಯಂತ ಸ್ಪಷ್ಟವಾಗಿದೆ.

ಈಗ ಕಪಿಲರು ಅನುವಾದ ಮಾಡಿ ಖಂಡಿಸುತ್ತಿರುವ ಕೇವಲಾದ್ವೈತವನ್ನು ಒಪ್ಪಿಕೊಂಡ ವಾದಿಗಳಾರು? ಎಂಬ ಪ್ರಶ್ನೆ. ಪತಂಜಲಿ ಜೈಮಿನಿ ಮುಂತಾದ ವೇದಪ್ರಾಮಾಣ್ಯ-ವಾದಿಗಳೂ ಪಾಶುಪತಾದಿ ಅವೈದಿಕ ವಾದಿಗಳೂ ಆ ವಾದವನ್ನು ಒಪ್ಪುವದಿಲ್ಲವಾದ್ದರಿಂದ ಪರಿಶೇಷ ನ್ಯಾಯದಂತೆ ವ್ಯಾಸರೇ ಆ ವಾದಿಗಳು ಎಂದು ಸ್ಫುಟವಾಗುವದು. ಹಾಗಲ್ಲದೇ ವ್ಯಾಸರನ್ನುಳಿದು ಯಾವನೊಬ್ಬ ಅಪ್ರಸಿದ್ಧನು ಕೇವಲಾದ್ವೈತ ವಾದಿಯೆಂದು ಒಪ್ಪಿದರೆ ಆ ವಾದಿಯು ಒಪ್ಪಿದ ಆ ಅದ್ವೈತವು ವ್ಯಾಸಸಮ್ಮತವೆಂದಾಗದಿದ್ದರೂ ಭಟ್ಟ ಭಾಸ್ಕರ, ಯಾದವ ಪ್ರಕಾಶ, ಶ್ರೀಕಂಠ, ರಾಮಾನುಜ, ಮಧ್ವ ಮುಂತಾದ ಭಾಷ್ಯಕಾರಾನುಮತವಾದ ವಾದಗಳಲ್ಲಿ " ಇದೇ ವ್ಯಾಸಸಮ್ಮತ " ಎಂದು ನಿರ್ಣಯ ಮಾಡಲಿಕ್ಕಾಗದಿರಲು ಆ ಕಪಿಲಾದಿ ದ್ವೈತ ವಾದಿಗಳು ಸ್ವಪಕ್ಷಸ್ಥಾಪನೆ ಮಾಡದಂತಾಗದೆ ವಿತಂಡವಾದಿಗಳೆಂದು ಹೇಳುವ ಪ್ರಸಂಗ ಬರುವದಿಲ್ಲವೇ? ಇದು ಯುಕ್ತವಲ್ಲ ಆದ್ದರಿಂದ " ವ್ಯಾಸರಿಗೆ ಅನುಮತವಾದ ಒಂದು ತತ್ವವು ಬೇಕು. ಕಪಿಲಾದಿಗಳು ದೂಷಿಸಿದ ಕೇವಲಾದ್ವೈತಕ್ಕೆ ಒಬ್ಬ ಪ್ರವರ್ತಕ ಆಚಾರ್ಯರು ಬೇಕು" ಹೀಗೆ ಉಭಯಾಕಾಂಕ್ಷೆಯ ಮೂಲಕ ವ್ಯಾಸರೇ ಆ ಅದ್ವೈತವಾದಿಗಳೆಂಬು ಇಚ್ಛೆಯಿಲ್ಲದಿದ್ದರೂ

ಒಪ್ಪಬೇಕಾಯಿತು. ನಿಜವಾಗಿ ತಟಸ್ಥ ಜನರಿಗೂ ಮತ್ಸರವಿಲ್ಲದವರಿಗೂ ಈ ಮೇಲಿನ ಮಾತು ಹೃದಯಂಗಮವಾಗುತ್ತದೆ.

ಕೆಲವು ಭೇದವಾದಿಗಳು ಕಪಿಲಾದಿ ಮಹರ್ಷಿಗಳ ಸೂತ್ರಗಳಲ್ಲಿ ಕಾಣುವ "ಕೇವಲಾದ್ವೈತದ ಅನುವಾದ" ವೆಂಬ ಬ್ರಹ್ಮಾಸ್ತ್ರಕ್ಕೆ ಪ್ರತಿಕ್ರಿಯೆ ಮಾಡಲು ಅಸಮರ್ಥರಾಗಿ ಪರಂಪರೆಯಿಂದ ಬಂದ ಭೇದ ವಾಸನೆಯಿಂದ ಕೆಟ್ಟ ತಮ್ಮ ಮನಸ್ಸಿನಲ್ಲಿಯ ಮತಾಭಿಮಾನವನ್ನು ಬಿಡಲಾರದೆ ತಾವೇ ಕಲ್ಪಿಸಿದ ಕೆಲವು ಆಭಾಸಯುಕ್ತಿಗಳೆಂಬ ಸೂಜಿಯ ತುಂಡುಗಳಿಂದಲೇ ಆ ಬ್ರಹ್ಮಾಸ್ತ್ರವನ್ನು ಕಡಿಯಲು ಇಚ್ಛಿಸುತ್ತಾರೆ. ಅದನ್ನೀಗ ಉದಾಹರಿಸುವೆನು

೧) ಸಾಂಖ್ಯಸೂತ್ರಗಳನ್ನು ಸಾಂಪ್ರದಾಯಿಕ ಗ್ರಂಥಗಳಲ್ಲಿ ಎಲ್ಲಿಯೂ ಉದಾಹರಿಸಿಲ್ಲ

೨) ಪ್ರಾಚೀನ ಅದ್ವೈತ ಗ್ರಂಥಗಳಲ್ಲಿ ಎಲ್ಲಿಯೂ ಕಪಿಲಸೂತ್ರಗಳಲ್ಲಿ ಅನುವಾದ ಮಾಡಿದ್ದೆಂಬ ಹೇತುವನ್ನು ಹೇಳಿಲ್ಲ.

೩) ಕಪಿಲರು ವ್ಯಾಸರಿಗಿಂತ ಪ್ರಾಚೀನರು. ಅವರು ವ್ಯಾಸರ ಮತವನ್ನು ಅನುವಾದ ಮಾಡುವದು ಅಸಂಭವ.

೪) ಮೇಲೆ ಉದಾಹರಿಸಿದ ಸೂತ್ರಗಳಲ್ಲಿಯಾಗಲೀ ಬೇರೆಡೆಯಲ್ಲಾಗಲೀ ಕಪಿಲರು ವ್ಯಾಸ ಶಬ್ದವನ್ನೇ ಪ್ರಯೋಗಿಸಿಲ್ಲ. ಅವರು ಅನುವಾದ ಮಾಡಿದ ಆ ಅದ್ವೈತವು ವ್ಯಾಸರ ಮತವೆಂಬದು ಮುಗಿಲ ಹೂವಿನಷ್ಟೇ ಸತ್ಯವಾದದ್ದು

೫) ಕಪಿಲರು ಅನುವಾದ ಮಾಡಿದ ಕೇವಲಾದ್ವೈತವು ವ್ಯಾಸರ ವೇದಾಂತ ಸೂತ್ರಗಳಲ್ಲೆಲ್ಲಿಯೂ ಕಾಣುವದಿಲ್ಲ.

೬) ಕಪಿಲರಿಗೆ ವ್ಯಾಸರ ಮತವನ್ನು ನಿರಾಕರಿಸುವದು ಅವಶ್ಯವಾದದ್ದಾದರೆ "ಈಶ್ವರಾಸಿದ್ಧೇಃ" ಮುಂತಾದ ಸೂತ್ರಗಳಿಂದ ವ್ಯಾಸರು ಒಪ್ಪಿದ ಈಶ್ವರನು ಜಗತ್ತಿಗೆ ಕಾರಣನು ಎಂಬಂಶವನ್ನು ನಿರಾಕರಿಸುವದರಿಂದಲೇ ಆ ಕಾರ್ಯವು ಮುಗಿದಂತಾದುದರಿಂದ ಕೇವಲಾದ್ವೈತವನ್ನು ಅನುವಾದ ಮಾಡಿದ ಸೂತ್ರಗಳಿಗೂ ವ್ಯಾಸರ ಮತಾನುವಾದ ಮಾಡುವವೆಂಬ ಕಲ್ಪನೆ ಮಾಡುವ ನಿರ್ಬಂಧ ಬೇಡ.

೭) ಕೇವಲಾದ್ವೈತವೆಂಬುವದೊಂದು ಒಬ್ಬ ಸುಪ್ರಸಿದ್ಧ ವಾದಿಯದಲ್ಲದಿದ್ದರೂ ಕಪಿಲರು ತಮ್ಮ ಊಹೆಯಿಂದಲೇ ಅದ್ವೈತವನ್ನು ಕಲ್ಪಿಸಿ ಅದನ್ನು ತಮ್ಮ ಸೂತ್ರಗಳಲ್ಲಿ ಅನುವಾದ ಮಾಡಿ ಖಂಡಿಸಿರಬಹುದು.

೮) ಕಪಿಲರು ತಮ್ಮ ಕಾಲದಲ್ಲಿ ಪ್ರಸಿದ್ಧನಾದ ಯಾವನೊಬ್ಬ ಅದ್ವೈತಿಯ ಮತವನ್ನು ಅನುವಾದ ಮಾಡಿ ಖಂಡಿಸಿರಲೂ ಬಹುದು.

೯) ಸೂತಸಂಹಿತೆ ವಿಷ್ಣು ಪುರಾಣ ಮುಂತಾದವುಗಳಲ್ಲಿ ಪ್ರಸಿದ್ಧವಾದ ಜಡಭರತ, ಸೂತ, ಮುಂತಾದ ಕೇವಲಾದ್ವೈತ ವಾದಿಗಳ ಮತವನ್ನು ನಿರಾಕರಿಸಿರಬಹುದು

೧೦) ವ್ಯಾಸ ಸೂತ್ರಗಳಲ್ಲಿ "ತದನನ್ಯತ್ವಮಾರಂಭಣಶಬ್ದಾದಿಭ್ಯಃ" ಮುಂತಾದವುಗಳಿಂದ ಮೇಲಿಂದ ಮೇಲೆ ತೋರುವ ಅದ್ವೈತವನ್ನು ಎತ್ತಿ ಖಂಡಿಸಿರಬಹುದಾಗಿದೆ.

೧೧) "ಆತ್ಮೇತಿ ತೂಪಗಚ್ಛಂತಿ ಗ್ರಾಹಯಂತಿಚ" ಮುಂತಾದ ಸೂತ್ರಗಳಿಂದ ಕೇವಲಾದ್ವೈತವೇ ವ್ಯಾಸಮತವೆಂದು ಭ್ರಮೆಗೊಂಡು ಅದನ್ನು ಖಂಡಿಸಲು ಹೊರಟಿರಬಹುದು.

೧೨) ಕಪಿಲರು ಸರ್ವಜ್ಞರಾದ್ದರಿಂದ ಮುಂದೆ ಬರಲಿರುವ ಶಾಂಕರಾದ್ವೈತವನ್ನು ಅನುವಾದ ಮಾಡಿ ಖಂಡಿಸಿರಲೂಬಹುದು.

೧೩) ವೇದಾಂತೇಕದೇಶಿಗಳಾದ ಆಶ್ಮರಥ್ಯ, ಔಡುಲೋಮಿ, ಕಾಶಕೃತ್ಸ್ನ ಮುಂತಾದವರೊಳಗೊಬ್ಬರ ಮತವನ್ನು ನಿರಾಕರಿಸಿರಬಹುದು, ಹೀಗೆ ಹದಿಮೂರು ಪಕ್ಷಗಳೊಳಗೆ ಯಾವದೊಂದು ರೀತಿಯಿಂದ ನೀವು ಉದಾಹರಿಸಿದ ಕಪಿಲ ಸೂತ್ರಗಳ ಅಭಿಪ್ರಾಯವು ಹೊಂದುವುದರಿಂದ ವ್ಯಾಸರೇ ಆ ವಾದಿಗಳೆಂದು ಕಲ್ಪಿಸುವದು ಯುಕ್ತವಲ್ಲ; ಮತ್ತು ಕೇವಲಾದ್ವೈತವೇ ವ್ಯಾಸತಾತ್ಪರ್ಯ ವಿಷಯವೆಂದು ಕೂಗುವದು ಗೋಡೆಯಿಲ್ಲದ ಚಿತ್ರದಂತಾಗುತ್ತದೆ.

ಈಗ ಇವುಗಳಿಗೆಲ್ಲ ಉತ್ತರವನ್ನು ಹೇಳಬೇಕಾಯಿತು. ಕೇಳಿರಿ; ಪ್ರಪ್ರಥಮವಾಗಿ ಹೇಳಿದ "ಸಾಂಖ್ಯ ಸೂತ್ರಗಳನ್ನು ಸಾಂಪ್ರದಾಯಿಕ ಗ್ರಂಥಗಳಲ್ಲಿ ಎಲ್ಲಿಯೂ ಹೇಳಿಲ್ಲ" ವೆಂಬ ಮಾತು ಸರಿಯಲ್ಲ. ಸೂತಸಂಹಿತೆಯ ವ್ಯಾಖ್ಯಾನವಾದ ತಾತ್ಪರ್ಯದೀಪಿಕೆಯಲ್ಲಿ ಸಾಂಖ್ಯರು ಹೀಗೆ ಹೇಳುತ್ತಾರೆ ಎಂದು ಆರಂಭಿಸಿ ಮುಂದುವರಿಯುತ್ತ "ಸತ್ವರಜಸ್ತಮಸಾಂ ಸಾಮ್ಯಾವಸ್ಥಾ ಪ್ರಕೃತಿಃ" ಎಂಬ ಸೂತ್ರವನ್ನು ಹೇಳಿದ್ದಾರೆ. ಪರಿಮಲ ಗ್ರಂಥದಲ್ಲಿ ಅಪ್ಪಯ್ಯ ದೀಕ್ಷಿತರವರು "ಸ್ಥೂಲಾತ್ ಪಂಚತನ್ಮಾತ್ರಸ್ಯ" ಮುಂತಾದ "ಸಂಹತಪರಾರ್ಥತ್ವಾತ್ ಪುರುಷಸ್ಯ" ಎಂಬಲ್ಲಿಯ ವರೆಗಿನ ಸೂತ್ರಗಳನ್ನೆತ್ತಿ ಬರೆದಿದ್ದಾರೆ. ಪುರುಷಾರ್ಥ ರತ್ನಾಕರದಲ್ಲಿ ಬಾಲಕೃಷ್ಣಾನಂದ ಸರಸ್ವತಿಯವರು "ಸಾಂಖ್ಯರು ಮೋಕ್ಷದ ಲಕ್ಷಣವನ್ನು ಹೀಗೆ ಹೇಳುತ್ತಾರೆ. ಎಂದೆತ್ತಿ "ಅಥ ತ್ರಿವಿಧದುಃಖಾಂತ್ಯಂತ ನಿವೃತ್ತಿಃ ಪುರುಷಾರ್ಥಃ" ಎಂಬ ಸಾಂಖ್ಯ ಸೂತ್ರವನ್ನು ದಾಹರಿಸಿದ್ದಾರೆ. ಹೀಗೆ ಸಾಂಖ್ಯ ಸೂತ್ರಗಳ ಉದಾಹರಣೆ ಸಿಕ್ಕರೂ ಅದರಿಂದ ಕೇವಲಾದ್ವೈತ ವನ್ನು ಅನುವಾದಮಾಡಿದ ಸೂತ್ರಗಳು ಕಪಿಲರವು ಎಂಬದು ಹೇಗಾಯಿತು? ಎಂಬ ಶಂಕೆ ಬೇಡ. ಕಪಿಲ ಸೂತ್ರವನ್ನು ವ್ಯಾಖ್ಯಾನಮಾಡಿದ ಅನಿರುದ್ಧಾಚಾರ್ಯರೇ ಮೊದಲಾದ ಅನೇಕರು, "ಅಥ ತ್ರಿವಿಧ ದುಃಖಾತ್ಯಂತ ನಿವೃತ್ತಿಃ" ಎಂಬ ಸೂತ್ರವನ್ನು ಮೊದಲ್ಗೊಂಡು "ಯದ್ವಾ ತದ್ವಾತದುಚ್ಛಿತ್ತಿಃ" ಈ ವರೆಗಿನ ಎಲ್ಲ ಸೂತ್ರಗಳನ್ನೂ ವ್ಯಾಖ್ಯಾನ ಮಾಡಿದ್ದರಿಂದ ಆ ಮಧ್ಯ ಸೇರಿದ ಕೇವಲಾದ್ವೈತಾನುವಾದಕ ಸೂತ್ರಗಳೂ ಕಪಿಲರವೇ ಎಂಬದು ಸಿದ್ಧವಾಗುತ್ತದೆ.

ಎರಡನೆಯ ಪಕ್ಷವೂ ಸರಿಯಲ್ಲ. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಗೌತಮ ಕಪಿಲ ಮುಂತಾದ ಮಹರ್ಷಿಗಳೇ ಪ್ರತಿವಾದಿಗಳಾದ್ದರಿಂದ ಆ ಮತಗಳನ್ನು ನಿರಾಕರಿಸಲು ಹೊರಟ ಭಾಷ್ಯಕಾರರೇ ಮುಂತಾದವರಿಗೆ ಆಧುನಿಕ ಭೇದವಾದಿಗಳನ್ನು ಖಂಡಿಸಲು ಬೇಕಾದ "ಕಪಿಲಾ-ನುವಾದ" ಎಂಬ ಯುಕ್ತಿಯವರೆಗೆ ಮುಂದೆ ಹೋಗುವ ಪ್ರಸಂಗವಿಲ್ಲ. ಅಪ್ಪಯ್ಯ ದೀಕ್ಷಿತರೇ ಮೊದಲಾದ ಆಧುನಿಕ ಗ್ರಂಥಕಾರರಿಗೆ ತಮ್ಮ ಸಮಾನ ಯುಕ್ತಿ ಪ್ರಮಾಣಗಳನ್ನು ಉದಾಹರಿಸುವ ಪ್ರತಿವಾದಿಗಳೇ ಸಿಗಲಿಲ್ಲವಾದ್ದರಿಂದ ಅವರೂ ಅಷ್ಟು ಮುಂದೆ ಹೋಗಿಲ್ಲ. ಕಪಿಲ ಸೂತ್ರಾನುವಾದವೆಂಬ ಪ್ರಬಲ ಯುಕ್ತಿಗಳಲ್ಲದಿದ್ದರೂ ಸುಲಭವಾಗಿಯೇ ಪರಮತವನ್ನು ಖಂಡಿಸಿ ತಮ್ಮ ಕಾರ್ಯವನ್ನು ಪೂರೈಸಿದರು, ಮತ್ತು ಪ್ರಾಚೀನರು ಉದಾಹರಿಸಿಲ್ಲ ಎಂಬ ಮಾತ್ರಕ್ಕೆ "ಸಾಂಖ್ಯಾನುವಾದವು" ಕೇವಲಾದ್ವೈತ ಸಾಧಕವಾದ ಯುಕ್ತಿಯಾಗಲಾರದೆಂಬುದು ಮೂರ್ಖರ ಮಾತಾಗುವದು.

ಮೂರನೆಯ ಪಕ್ಷವೂ ಯುಕ್ತವಲ್ಲ. ವ್ಯಾಸ, ಕಪಿಲಾದಿ, ಮಹರ್ಷಿಗಳು ಎಲ್ಲ ಕಲ್ಪಗಳಲ್ಲಿಯೂ ಲೋಕಾನುಗ್ರಹಕ್ಕಾಗಿ ಅವತರಿಸುವವರಾದ್ದರಿಂದ ಅವರೊಳಗೆ ಪ್ರಾಚೀನ-ಅರ್ವಾಚೀನವೆಂಬ ವಿಭಾಗವಿಲ್ಲ. ಪ್ರತಿಸಲವೂ ತಮ್ಮ ಗ್ರಂಥಗಳಲ್ಲಿ ಪರಾಭಿಮತವಾದ ಅರ್ಥವನ್ನು ಅನುವಾದ ಮಾಡುವದು ಆ ದೃಷ್ಟಿಯಿಂದ ತಪ್ಪಾಗದು.

ನಾಲ್ಕನೆಯ ಪಕ್ಷವೂ ವಿಸಂಗತವಾದದ್ದು. ಕಪಿಲ ಸೂತ್ರಗಳಲ್ಲಿ ಕೇವಲಾದ್ವೈತವನ್ನು ನಿರಾಕರಣೆಮಾಡುವಾಗ, ಬೇರೆ ವಾದಿಗಳಿಲ್ಲದಿರುವಾಗ, ಅದು ವ್ಯಾಸರದ್ದು ಎಂಬ ನಿಶ್ಚಯವು ತಾನಾಗಿ ಆಗುವಾಗ ವ್ಯಾಸ ಶಬ್ದ ಪ್ರಯೋಗ ಮಾಡಿಲ್ಲವೆಂಬುದು ಯುಕ್ತವಲ್ಲ. ಹಾಗಿದ್ದರೆ ವ್ಯಾಸ ಸೂತ್ರಗಳಲ್ಲಿಯೂ "ಈಕ್ಷತೇರ್ನಾಶಬ್ದಂ" ಮುಂತಾದ ಸ್ಥಳಗಳಲ್ಲಿ ಕಪಿಲಾದಿ ಶಬ್ದ ಪ್ರಯೋಗ ಮಾಡಬೇಕಿತ್ತಷ್ಟೇ!

ಅಂತೆಯೇ ಐದನೆಯ ಪಕ್ಷವೂ ಸರಿಯಲ್ಲ. ಸಾಂಖ್ಯಸೂತ್ರಗಳಲ್ಲಿ ಅದ್ವೈತವಾದಿಗೆ ಅನುಮತವಾದ ಅರ್ಥವನ್ನು ಅನುವಾದ ಮಾಡಿದುದರಿಂದಲೇ "ಅದ್ವೈತವೇ ವ್ಯಾಸತಾತ್ಪರ್ಯ ವಿಷಯ" ಎಂದು ನಿಶ್ಚಯವಾಗುವಾಗ ವೇದಾಂತ ಸೂತ್ರಗಳಲ್ಲಿ ಅದು ಕಾಣದಿರುವದರಿಂದ ಏನೂ ಬಾಧಕವಿಲ್ಲ. ವ್ಯಾಸಸೂತ್ರಗಳಲ್ಲಿ ಕಾಣದಿರುವ ಅದ್ವೈತವು ವ್ಯಾಸತಾತ್ಪರ್ಯಕ್ಕೆ ಸೇರಿದ್ದೆಂದು ಹೇಗೆ ಹೇಳುವದು ಎಂಬ ಭ್ರಾಂತಿಯು ಬೇಡ. ವ್ಯಾಸರನ್ನುಳಿದು ಬೇರೆ ಅದ್ವೈತವಾದಿಯಲ್ಲದ್ದರಿಂದ ವ್ಯಾಸರೇ ಅದ್ವೈತ ವಾದಿಗಳೆಂದು ಈ ಮೊದಲೇ ಹೇಳಿದ್ದೇನೆ. ವೇದಾಂತ ಸೂತ್ರಗಳಲ್ಲಿ ಅತ್ಯಂತ ಸ್ಪಷ್ಟವಾಗಿ ಅದ್ವೈತವು ಕಾಣುತ್ತಿದ್ದರೆ ಉಳಿದೆಲ್ಲ ಭಾಷ್ಯಗಳೂ ಹುಟ್ಟುತ್ತಿದ್ದಿಲ್ಲ. ಮತ್ತು ಹೀಗೆ ತಮ್ಮ ತಮ್ಮ ಬುದ್ಧಿಗೆ ತೋಚಿದಂತೆ ಎಲ್ಲ ವಾದಿಗಳೂ ಶಂಕಿಸುವಂತಿರಲಿಲ್ಲ. ಇದಲ್ಲದೆ ಸಾಂಖ್ಯ ಸೂತ್ರಗಳಲ್ಲಿ "ಉಪಾಧಿರ್ಯೋಗೇಽಪಿ ಏಕಸ್ಯ ನಾನಾಯೋಗಃ ಆಕಾಶಸ್ಯೈವ ಘಟಾದಿಭಿಃ" ಒಂದೇ ವಸ್ತುವಿಗೂ ಉಪಾಧಿಮೂಲಕವಾಗಿ ಘಟ-ಮಠಗಳಿಂದ ಆಕಾಶಕ್ಕೆ ಹೇಗೋ ಹಾಗೆ ನಾನಾರೂಪವು ಬರುವದು. ಎಂದು ಅನುವಾದಿದ್ದಕ್ಕೆ "ಅತಏವ ಚೋಪಮಾ ಸೂರ್ಯಕಾದಿವತ್" "ಆಭಾಸಏವಚ" ಒಬ್ಬನಾದ ಆತ್ಮನಿಗೆ ನಾನಾತ್ವವು ಬಂದುದಕ್ಕೆ, ಜಲಾಪಾತ್ರೆಗಳಲ್ಲಿಯ ಸೂರ್ಯನ ಪ್ರತಿಬಿಂಬಗಳು ಉದಾಹರಣೆಯಾಗಿವೆ; ಮತ್ತು ಅವು ಬರಿ ಆಭಾಸವಾದವುಗಳು; ಸತ್ಯವಲ್ಲ." ಎಂಬವೇ ಮುಂತಾದ ಸೂತ್ರಗಳಲ್ಲಿ ತೋರಿಕೆ ಇದೆ. "ನಾತ್ಮಾವಿದ್ಯಾ ನೋಭಯಂ ಜಗದುಪಾದಾನಂ ನಿಃಸಂಗತ್ವಾತ್" ಆತ್ಮನಾಗಲಿ; ಅವಿದ್ಯೆಯಾಗಲಿ, ಅಥವಾ ಆವೆರಡೂ ಆಗಲಿ, ನಿಃಸಂಗವಾದ್ದರಿಂದ ಜಗತ್ತಿಗೆ ಉಪಾದಾನ ಕಾರಣವಲ್ಲ, ಎಂಬ ಸೂತ್ರದಲ್ಲಿ ಅನುವಾದ ಮಾಡಿದ "ಬ್ರಹ್ಮನಿಗೇ ಜಗತ್ಕಾರಣತ್ವವು"

ಜನ್ಮದಾಸ್ಯ ಯತಃ, ಪ್ರಕೃತಿಶ್ಚ, ಎಂಬ ವ್ಯಾಸಸೂತ್ರಗಳಲ್ಲಿ ಕಾಣುತ್ತದೆ. "ನಾತ್ಮಾವಿದ್ಯಾ" ಎಂಬ ಸಾಂಖ್ಯ ಸೂತ್ರದಲ್ಲಿ ನಿರಾಕರಿಸಲ್ಪಡುವ ಪ್ರಕೃತಿ ಸಹಿತನಾದ ಬ್ರಹ್ಮನ ಜಗತ್ಕಾರಣತ್ವವು ಶ್ರೀಕಂಠ ರಾಮಾನುಜ ಮುಂತಾದವರ ಮತಗಳಲ್ಲಿಯೂ ಇರುವದರಿಂದ ಅದು ಕೇವಲಾದ್ವೈತವಾದದ್ದೆಂದು ಹೇಳುವದು ಹೇಗೆ? ಎಂಬ ಶಂಕೆ ಬೇಡ. ಆ ಸೂತ್ರದಲ್ಲಿ ಕೇವಲ ಆತ್ಮನು ಜಗತ್ಕಾರಣನೋ ಅಥವಾ ಅವಿದ್ಯೆಯೋ ಅಥವಾ ಆವೆರಡೂ ಕೂಡಿಯೇ ಎಂದು ಮೂರು ವಿಕಲ್ಪಗಳನ್ನು ಮಾಡಿ ಅವನ್ನು ನಿರಾಕರಿಸುವ ಪ್ರಸ್ತಾವದಲ್ಲಿ ಅವಿದ್ಯಾ ಶಬ್ದಕ್ಕೆ ಅವಸ್ತುವಾದ ಅವಿದ್ಯೆಯೆಂದೇ ಅರ್ಥಮಾಡಬೇಕಾಗುವದು. ಅಲ್ಲದಿದ್ದರೆ ರಾಮಾನುಜಾದಿ ವಾದಿಗಳು ಹೇಳುವ ನಿತ್ಯ-ಸತ್ಯ ಪ್ರಕೃತಿಯೆಂದರ್ಥ ಮಾಡಿದರೆ ಅಂಥ ಪ್ರಕೃತಿಯನ್ನು ಸಾಂಖ್ಯರೂ ಒಪ್ಪಿ ಆ ಪ್ರಕೃತಿಯೇ ಜಗತ್ತಿನ ಉಪಾದಾನ ಕಾರಣವೆಂದು ಹೇಳುವದರಿಂದ ಅದನ್ನು ನಿರಾಕರಿಸಿದರೆ ತಮ್ಮ ಸಿದ್ಧಾಂತಕ್ಕೇ ಭಂಗ ಬರಬಹುದಾಗಿದೆ; ಮತ್ತು ಪ್ರಥಮಾಧ್ಯಾಯದಲ್ಲಿಯ "ನಾವಿ-ದ್ಯತೋಽಪ್ಯವಸ್ತುನಾ ಬಂಧಾಯೋಗಾತ್" ಎಂಬ ಸೂತ್ರದಲ್ಲಿ ಅವಿದ್ಯೆಯು ಅವಸ್ತು ಎಂದು ನಿರ್ಣಯಿಸಿದ್ದು ಅದೇ ಅರ್ಥವೇ ಈ ಸೂತ್ರದ ಅವಿದ್ಯಾ ಶಬ್ದಕ್ಕೂ ಇರುವದು ಯುಕ್ತವಾಗುವದು. ಅಂದಾಗ "ಅವಸ್ತುವಾದ ಅವಿದ್ಯೆಯಿಂದ ಕೂಡಿದ ಬ್ರಹ್ಮನು ಜಗತ್ಕಾರಣನಲ್ಲ, ಎಂಬ ಸಾಂಖ್ಯ ಸೂತ್ರಕ್ಕೆ ರಾಮಾನುಜಾದಿ ಮತಗಳನ್ನು ನಿರಾಕರಿಸುವ ಅರ್ಥವನ್ನು ಹೇಳಲಾಗದು. ಕೇವಲಾದ್ವೈತವನ್ನೇ ಖಂಡಿಸುವದು ಎಂದು ಹೇಳುವದು ನಿರ್ವಿವಾದವಾಗುವದು,

ಆರನೆಯ ಪಕ್ಷವಂತೂ ಉತ್ತಮವಲ್ಲ. "ಈಶ್ವರಾಸಿದ್ಧೇಃ" ಎಂಬ ಸಾಂಖ್ಯಸೂತ್ರದಿಂದ ನಿರಾಕರಿಸಲ್ಪಡುವದು ಗೌತಮ ಕಣಾದ ಮೊದಲಾದವರ ಮತವೂ ಆಗಬಹುದಾಗಿದೆ ಆದರಿಂದ ವ್ಯಾಸರ ಮತ ನಿರಾಕರಣವಾದಂತಾಗಿಲ್ಲ. ಅನಿರುದ್ಧ ವ್ಯಾಖ್ಯಾನದಲ್ಲಿಯೂ ಈ ಸೂತ್ರವನ್ನು ನೈಯ್ಯಾಯಿಕ ಮತದ ನಿರಾಕರಣಪರವಾಗಿಯೇ ಅರ್ಥ ಮಾಡಿದ್ದಾರೆ. ಹೀಗಿರುವಾಗ ಕೇವಲಾದ್ವೈತ ಪರವಾದ ಕಪಿಲ ಸೂತ್ರಗಳಲ್ಲಿಯ ಅನುವಾದಕ್ಕೆ ಬೇರೆ ವಾದಿಗಳಲ್ಲದ್ದರಿಂದ. ವ್ಯಾಸರನ್ನೇ ಗುರಿಪಡಿಸಬೇಕಾಗುವದು, ಆದ್ದರಿಂದ "ಈಶ್ವರಾಸಿದ್ಧೇಃ" ಎಂಬ ಸೂತ್ರಕ್ಕೆ ವ್ಯಾಸ ಮತ ಖಂಡನೆಯಲ್ಲಿ ಸಾಧ್ಯಕ್ಯವನ್ನು ಹೇಳುವಂತಿಲ್ಲ.

ಏಳನೆಯ ಪಕ್ಷವೂ ಹೊಂದುವದಿಲ್ಲ. "ವಸ್ತುತ್ವೇಸಿದ್ಧಾಂತ ಹಾನಿಃ" ಎಂಬ ತಮ್ಮ ಸೂತ್ರದಲ್ಲಿ ಕಪಿಲರು ಯಾವದೊಂದು ಸಿದ್ಧಾಂತವನ್ನು ಸಿದ್ಧವಾಗಿದ್ದಂತೆ ಗುರಿಯಿಟ್ಟು ನಿರಾ-ಕರಿಸಿದ್ದರಿಂದ ಊಹೆ ಮಾಡಿದ ಪಕ್ಷವದು ಎಂದು ಹೇಳುವದು ಯುಕ್ತವೇ?

ಎಂಟನೆಯ ಪಕ್ಷವೂ ದುಷ್ಟವಾಗಿದೆ. ಕಪಿಲರ ಕಾಲದಲ್ಲಿಯ ಆ ಅದ್ವೈತವಾದಿಯು ಮಹರ್ಷಿಯಾಗಿದ್ದರೆ ಆ ಮತವು ಇತರ ಮತಗಳಂತೆ ಶಿಷ್ಯಪರಂಪರೆಯಾಗಿ ಈ ವರೆಗೂ ಪ್ರಚಾರದಲ್ಲಿರಬೇಕಿತ್ತು. ಆದರೆ ಹಾಗೆ ಕಾಣುವದಿಲ್ಲ; ಎಂದಿಗೂ ಹಾಗಾಗುವದೂ ಯುಕ್ತವಲ್ಲ. ಆ ವಾದಿಯು ಋಷಿಯಲ್ಲದಿದ್ದರೆ ಅಂಥ ವಾದಿಯೊಬ್ಬನಿರುವದರಲ್ಲಿ ಯಾವ ಪ್ರಮಾಣವೂ ಇಲ್ಲ; ಮತ್ತು ಪ್ರಸಿದ್ಧರಾದ ವ್ಯಾಸರನ್ನು ಬಿಟ್ಟು ಮತ್ತೊಬ್ಬರನ್ನು ಅದಕ್ಕಾಗಿ ಹುಡುಕುವದೂ ಸರಿಯಲ್ಲ.

ಒಂಭತ್ತನೆಯ ಪಕ್ಷವೂ ಚೆನ್ನಾಗಿಲ್ಲ. ಸೂತ ಜಡಭರತಾದಿಗಳು ಸ್ವತಂತ್ರವಾಗಿ ಒಂದು ಸಿದ್ಧಾಂತವನ್ನು ಹೊರಗೆಡಹಿದ ಆಚಾರ್ಯರಲ್ಲ. ಸಾಂಖ್ಯ ಮತವನ್ನು ರಚಿಸಿದ ಕಪಿ

ಲರಿಗೆ ಪ್ರತಿವಾದಿಗಳಾಗಲು ಅರ್ಹರಲ್ಲ. ಆದ್ದರಿಂದ ಅವರ ಮತವನ್ನು ನಿರಾಕರಿಸುವದು ಅಸಂಭವನೀಯವಾದದ್ದು; ಮತ್ತು ಅವರನ್ನು ವಾದಿಸ್ಥಾನದಲ್ಲಿ ಸೇರಿಸಿದರೂ ಸೂತಸಂಹಿತೆ ವಿಷ್ಣುಪುರಾಣ ಮೊದಲಾದವುಗಳು ಕೇವಲಾದ್ವೈತವನ್ನು ಪ್ರತಿಪಾದಿಸುವವೆಂದು ನೀನೂ ಹೇಳಬೇಕಾದ್ದರಿಂದ ಅದಕ್ಕೆ ಸಮಾನಾರ್ಥವಾದ ವೇದಾಂತವೂ ಅದೇ ಅಭಿಪ್ರಾಯವುಳ್ಳದ್ದೆಂದು ಆಗುವದರಿಂದ ನಮ್ಮ ಇಷ್ಟವೇ ಸಿದ್ಧಿಸುವವು. ಇದೂ ಅಲ್ಲದೆ ಕೇವಲಾದ್ವೈತ ಪ್ರತಿಪಾದಕವಾದ ಆ ಸೂತಸಂಹಿತೆ, ವಿಷ್ಣುಪುರಾಣಾದಿ ಗ್ರಂಥಗಳಿಗೆ ದ್ವೈತ ಪರವಾದ ಅರ್ಥವನ್ನು ಮಾಡಲು ಹೊರಟ ನಿಮ್ಮ ಆಚಾರ್ಯರುಗಳಿಗೆ ಭ್ರಾಂತಿ ಬಂದಿತ್ತೆಂದು ನೀವೇ ಹೇಳಬೇಕಾಗಿ ಬರುವದರಿಂದ ನಿಮಗನಿಷ್ಟವೆಂದೂ ಅನಿಸುವದು.

ಹತ್ತನೆಯ ಪಕ್ಷವಂತೂ ವಿಷಮವಾಗಿದೆ. ವೇದಾಂತ ಸೂತ್ರಗಳಲ್ಲಿ ಮೇಲಿಂದ ಮೇಲೆ ತೋರುತ್ತಿರುವ ಕೇವಲಾದ್ವೈತವು ವ್ಯಾಸರಿಗೆ ಪೂರ್ವ ಪಕ್ಷವೆಂದು ಹೇಳುವದಾದರೆ, "ವಸ್ತುತ್ವೇ ಸಿದ್ಧಾಂತಹಾನಿಃ" ಎಂದು ಕಪಿಲರು ದೂಷಣಮಾಡಿದ್ದು ಅಸಮಂಜಸವಾಗುವದು. ವ್ಯಾಸ ಸಿದ್ಧಾಂತವನ್ನು ನಿರಾಕರಿಸಲು ಹೊರಟು ಅವರ ಪೂರ್ವಪಕ್ಷವನ್ನು ನಿರಾಕರಿಸುವದು ಅಸಂಭವನೀಯ. ಆ ಕೇವಲಾದ್ವೈತವು ವ್ಯಾಸ ಸಿದ್ದಾಂತವೆಂದು ಹೇಳಿದರೆ ಅದು ಈಗ ನಾವು ಹೊರಟಿರುವ ಕಾರ್ಯಕ್ಕೆ ಅನುಕೂಲವಾಗಿದೆ.

ಹನ್ನೊಂದನೆಯ ಪಕ್ಷವೂ ಸರಿಯಲ್ಲ. ಪರಮತ ನಿರಾಕರಣೆ ಮಾಡಿ ಸ್ವಮತವನ್ನು ಸ್ಥಾಪಿಸಲು ಹೊರಟ ಕಪಿಲರು ಎಲ್ಲ ತಂತ್ರಗಳ ತಿರುಳನ್ನೇ ಚನ್ನಾಗಿ ಅರಿತಿರುವದು ಅವಶ್ಯಕವಾದಾಗ ಆ ಸರ್ವಜ್ಞರಿಗೆ ಇತರ ಮತವನ್ನು ಅನುವಾದ ಮಾಡಲು ಭ್ರಾಂತಿ ಬರದೆ ವ್ಯಾಸರ ಮತಾನುವಾದದಲ್ಲಿ ಮಾತ್ರ ಭ್ರಾಂತಿ ಬಂದಿತ್ತು ಎಂದು ಕಲ್ಪಿಸುವದೇ ಭ್ರಾಂತಿಯೆಂದು ಹೇಳಬಹುದು.

ಹನ್ನೆರಡನೆಯ ಪಕ್ಷವೂ ಸಮಂಜಸವಲ್ಲ. ಗೌತಮ, ಕಣಾದ, ಜೈಮಿನಿ, ಪತಂಜಲಿ ಮುಂತಾದ ಶಾಸ್ತ್ರಕರ್ತೃಗಳ ಮತ ನಿರಾಕರಣದ ಪ್ರಸಂಗದಲ್ಲಿ ಶಾಸ್ತ್ರಕರ್ತೃವಾದ ವ್ಯಾಸರ ಮತವನ್ನೇ ನಿರಾಕರಿಸಿದ್ದಾರೆ ಎಂಬುದೇ ಸಮಂಜಸ; ಹೊರತು ಆ ಶಾಸ್ತ್ರ ವ್ಯಾಖ್ಯಾತೃಗಳಾದ ಶಾಂಕರರ ಮತವನ್ನು ನಿರಾಕರಿಸುವದು ಅಸಂಗತವಾಗುವದು. ಹಾಗಿಲ್ಲದಿದ್ದರೆ ರಾಮಾನುಜ, ಮಧ್ವ, ಶ್ರೀಕಂಠಾದಿ, ಆಚಾರ್ಯರ ಮತಗಳನ್ನೂ ಕಪಿಲರು ಖಂಡಿಸಬೇಕಾಗಿತ್ತಲ್ಲವೇ? ಎಲ್ಲಿಯೂ ಸಾಂಖ್ಯ ಸೂತ್ರಗಳಲ್ಲಿ ಅದು ಕಂಡುಬರುವದಿಲ್ಲ. ಒಮ್ಮೆ ಭಾವಿ ಶಂಕರ ಮತವನ್ನು ಗುರಿಯಿಟ್ಟು ಕಪಿಲರು ತಮ್ಮ ಶಾಸ್ತ್ರದಲ್ಲಿ ಖಂಡಿಸಿದ್ದಾರೆಂದು ಒಪ್ಪಿಕೊಳ್ಳೋಣ. ಅದೂ ನಮಗನುಕೂಲವೇ. ವೇದಾಂತ ಶಾಸ್ತ್ರದ ನಿಶ್ಚಿತಾರ್ಥವನ್ನು ಬಯಲಿಗೆಳೆಯಲು ಹೊರಟ ಭಾಷ್ಯಕಾರರೊಳಗೆ ಆಯ್ದು ಶ್ರೀಶಂಕರಭಗವತ್ಪಾದರ ಮತವನ್ನೇ ಎತ್ತಿ ಖಂಡಿಸಿದ ಕಪಿಲರ ಅಭಿಪ್ರಾಯದಲ್ಲಿ ವೇದಾಂತ ಶಾಸ್ತ್ರವನ್ನು ಬರೆದ ವ್ಯಾಸರಿಗೆ ಕೇವಲಾದ್ವೈತವೇ ಅಭಿಮತವಾಗಿತ್ತೆಂಬುದು ಸ್ಪಷ್ಟವಾಗುವದು.

ಹದಿಮೂರನೆಯ ಪಕ್ಷವೂ ಅಸಂಗತವೇ ಸರಿ. ಸ್ವತಂತ್ರವಾಗಿ ಶಾಸ್ತ್ರವನ್ನು ರಚಿಸಿರುವ ಕಣಾದ, ಗೌತಮ ಮುಂತಾದವರ ಮತಗಳನ್ನು ಖಂಡಿಸುವ ಪ್ರಸಂಗದಲ್ಲಿ ಪ್ರಧಾನ ಮಲ್ಲನಿಬರ್ಹಣ ನ್ಯಾಯದಂತೆ (ದೊಡ್ಡ ಜಟ್ಟಿಯನ್ನು ಗೆದ್ದರೆ ಚಿಕ್ಕ ಜಟ್ಟಿಗಳೆಲ್ಲರನ್ನೂ ಗೆದ್ದಂತೆ) ವೇದಾಂತ ಶಾಸ್ತ್ರವನ್ನು ಸ್ವತಂತ್ರವಾಗಿ ರಚಿಸಿದ ವ್ಯಾಸರನ್ನು ಗೆಲ್ಲುವದೇ ನ್ಯಾಯವಾದ್ದರಿಂದ ಇತರ ವೇದಾಂತಿಗಳಾದ ಆಶ್ಮರಥ್ಯ ಮುಂತಾದವರ ನಿರಾಕರಣವು ಉಚಿತವಾಗಲಾರದು. ಹಾಗಲ್ಲವೆಂದರೆ "ಈಕ್ಷತೇರ್ನಾಶಬ್ದಂ" ಎಂಬ ವ್ಯಾಸಸೂತ್ರದಲ್ಲಿಯೂ ಇತರ ಸಾಂಖ್ಯವಾದಿಗಳಾದ ಪಂಚಶಿಖ ಸನಂದನಾಚಾರ್ಯ ಮುಂತಾದವರನ್ನೇ ನಿರಾಕರಿಸಿದ್ದಾರೆಂದು ಹೇಳುವ ಪ್ರಸಂಗ ಬರುವದು. ಅದು ಸರಿಯಲ್ಲ. ಎಲ್ಲ ವೇದಾಂತ ಭಾಷ್ಯಕಾರರೂ ಆ ಸಂದರ್ಭದಲ್ಲಿ ಕಪಿಲ ಮತವನ್ನೇ ಗುರಿಯಾಗಿಟ್ಟು ನಿರಾಕರಿಸಿದ್ದು ಕಂಡುಬರುತ್ತದೆ; ಮತ್ತು ಕೇವಲಾದ್ವೈತವನ್ನು ನಿರಾಕರಿಸಿದ ಎಲ್ಲ ಪ್ರಸಂಗಗಳೂ ಇತರ ವೇದಾಂತ ಮತಗಳನ್ನು ನಿರಾಕರಿಸಿದ್ದು ಎಂದು ತಿಳಿದರೆ ಕಪಿಲರು ವ್ಯಾಸಮತವನ್ನು ನಿರಾಕರಿಸಿದಂತಾಗದೆ "ಪರ ಮತವನ್ನು ಖಂಡಿಸದೆ ಸ್ವಮತಸ್ಥಾಪನೆಯಾಗದು" ಎಂಬಂತೆ ಕಾಪಿಲಸಿದ್ಧಾಂತವು ಇನ್ನೂ ಸಿದ್ಧಿಸಿಲ್ಲವೆನ್ನಬೇಕಾಗುವದು.

ಅಲ್ಲದೆ ಕಪಿಲರು ನಿರಾಕರಿಸಿದ ಇತರ ವೇದಾಂತ ಮತಗಳು ಯಾವವು? ಆಶ್ಮರಥ್ಯರದ್ದಲ್ಲ. ಯಾಕೆಂದರೆ ಆಶ್ಮರಥ್ಯರು ಕಾರ್ಯಕಾರಣರೂಪದಿಂದಿರುವ ಜೀವಬ್ರಹ್ಮರೊಳಗೆ ಭೇದಾಭೇದವನ್ನೊಪ್ಪರು. ಶಂಕರ, ರಾಮಾನುಜ, ಶ್ರೀಕಂಠಾದಿ ಭಾಷ್ಯಕಾರರೂ "ವಾಕ್ಯಾದ್ವಯಾತ್" "ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯ" ಎಂಬ ಸೂತ್ರಗಳಲ್ಲಿ ವ್ಯಾಖ್ಯಾನಮಾಡುವಾಗ ಜೀವಬ್ರಹ್ಮರೊಳಗೆ ಸ್ವಾಭಾವಿಕವಾಗಿಯೇ ಭೇದಾಭೇದವಿದೆಯೆಂಬುದು ಆಶ್ಮರಥ್ಯಮತ ಎಂದು ಹೇಳಿದ್ದಾರೆ. ಶ್ರುತಪ್ರಕಾಶಿಕೆಯಲ್ಲಿ ಈ ಸೂತ್ರದಲ್ಲಿ ಯಾದವರ (ಆಶ್ಮರಥ್ಯರ ಇನ್ನೊಂದು ಹೆಸರು) ಪಕ್ಷವು ಹೇಳಲ್ಪಟ್ಟಿದೆಯೆಂದು ಆರಂಭಿಸಿ "ಕಾರ್ಯಕಾರಣರೂಪದಿಂದ ಜೀವ ಮತ್ತು ಬ್ರಹ್ಮರಿಗೆ ಭೇದಾಭೇದವು ಸ್ವಾಭಾವಿಕವಾಗಿದೆ." ಎಂಬುದೇ ಅವರ ಅಭಿಪ್ರಾಯವೆಂದು ಸ್ಪಷ್ಟವಾಗಿ ಹೇಳಿದೆ. ಹೀಗಿರುವಾಗ ಭೇದಾಭೇದವಾದಿಗಳಾದ ಆಶ್ಮರಥ್ಯರ ಮತವನ್ನು ಖಂಡಿಸಲು "ಉಪಾಧಿಯೋಗೇಪಿ" ಎಂಬ ಔಪಾಧಿಕ ಭೇದಾನುವಾದವೂ ಅದರ ಖಂಡನೆಯೂ ಉಚಿತವಲ್ಲ.

ಔಡುಲೋಮಿಯದೂ ಅಲ್ಲ. ಏಕೆಂದರೆ ಔಡುಲೋಮಿಗಳೂ "ಮುಕ್ತಿಗಿಂತ ಮೊದಲು ಜೀವಬ್ರಹ್ಮರೊಳಗೆ ಸ್ವಾಭಾವಿಕ ಭೇಧವನ್ನೂ ಮುಕ್ತಿಯಾದಮೇಲೆ ಸ್ವಾಭಾವಿಕ ಅಭೇದವನ್ನೂ ಹೇಳುವರು "ಉತ್ಕ್ರಮಿಷ್ಯತ ಏವಂ ಭಾವಾದಿತ್ಯೌಡುಲೋಮಿಃ" ಈ ಸೂತ್ರದ ಭಾವವನ್ನು ತಿಳಿದರೆ ಅದು ವ್ಯಕ್ತವಾಗುವದು. ಆಗಲೂ ಔಪಾಧಿಕ ಭೇದವನ್ನು ನಿರಾಕರಿಸುವದಕ್ಕೆ ಅವಕಾಶವಿರಲಾರದು. ಇದು ನಮಗೆ ಭಾಷ್ಯಾದಿ ಗ್ರಂಥಗಳನ್ನು ನೋಡಿದಾಗ ತಿಳಿಯುವದು. ರಾಮಾನುಜ ಭಾಷ್ಯದಲ್ಲಿ ಈ ಜೀವನಿಗೆ ದೇಹದಿಂದ ಉತ್ಕ್ರಾಂತಿಯಾಗುವ ಮುಂಚೆ ಬ್ರಹ್ಮನ ಭೇದವು ಔಪಾಧಿಕವೋ! ಸ್ವಾಭಾವಿಕವೋ? ಪಾರಮಾರ್ಥಿತವೋ! ಅಪಾರಮಾರ್ಥಕವೋ? ಮುಂತಾದ ಪಕ್ಷಗಳನ್ನೆಬ್ಬಿಸಿ ಔಡುಲೋಮಿಯ ಮತವನ್ನು ನಿರಾಕರಿಸಿದ್ದಾರೆ. ಅದರ ವ್ಯಾಖ್ಯಾನ ಶ್ರುತ ಪ್ರಕಾಶಿಕೆಯಲ್ಲಿ "ಮೇಲಿನ ಎರಡು ಪಕ್ಷಗಳ ಪೈಕಿ ಒಂದನ್ನು ನಿರ್ಧಾರ ಮಾಡಲು ಸ್ವಾಭಾವಿಕ ಔಪಾಧಿಕ ಎಂಬ ವಿಕಲ್ಪಮಾಡಿದೆ. ಶಂಕರರೂ ಭಾಸ್ಕರರೂ ಹೇಳಿದ

ಎರಡೂ ಪಕ್ಷಗಳನ್ನು "ಉತ್ಕ್ರಮಿಷ್ಯತಃ" ಎಂಬ ಒಂದೇ ಸೂತ್ರದಿಂದ ನಿರಾಕರಿಸುವ ಇಚ್ಛೆಯಿಂದ ಪಾರಮಾರ್ಥಿಕ ಅಪಾರಮಾರ್ಥಿಕ ಎಂದು ವಿಕಲ್ಪಮಾಡಿದೆ." ಎಂದು ಮುಂತಾಗಿ ಔಪಾಧಿಕ ಭೇಧಗಳೆರಡೂ ಭಟಭಾಸ್ಕರ, ಶಂಕರದ್ದೆಂದು ಸ್ಥಾಪಿಸುವ ಮೂಲಕ ಪಾರಿಶೇಷಕ ನ್ಯಾಯದಿಂದ ಸ್ವಾಭಾವಿಕ ಭೇಧವು ಔಡುಲೋಮಿ ಸಿದ್ಧಾಂತದ್ದು ಎಂದು ಭಾಷ್ಯದ ತಾತ್ಪರ್ಯವನ್ನು ಸ್ಪಷ್ಟಮಾಡಿದ್ದಾರೆ. ಶಾಂಕರ ಭಾಷ್ಯದಲ್ಲಿಯೂ "ಔಡುಲೋಮಿಯ ಪಕ್ಷದಲ್ಲಿ ಬಂಧ ಮೋಕ್ಷಗಳೆಂಬ ಭಿನ್ನ ಅವಸ್ಥೆಗಳಿಗೆ ಅನುಗುಣವಾಗಿ ಭೇದಾಭೇದಗಳಿವೆ" ಎಂದು ಹೇಳಿದೆ. ಅದರನ್ನು ವ್ಯಾಖ್ಯಾನ ಮಾಡುವಾಗ ವಾಚಸ್ಪತಿ ಮಿಶ್ರರು "ಜೀವನು ಪರಮಾತ್ಮನಿಗೆ ಅತ್ಯಂತ ಭಿನ್ನನು. ದೇಹ, ಇಂದ್ರಿಯ, ಮನಸ್ಸು, ಬುದ್ಧಿಗಳೆಂಬ ಉಪಾಧಿಗಳ ಸಂಪರ್ಕದಿಂದ ಯಾವಾಗಲೂ ಕಲುಷಿತನಾಗಿ ಕೊನೆಗೊಮ್ಮೆ ಜ್ಞಾನ, ಧ್ಯಾನ ಮೊದಲಾದ ಸಾಧನಗಳ ಮೂಲಕ ದೇಹೇಂದ್ರಿಯ ಸಮೂಹಗಳಿಂದ ಹೊರಬಿದ್ದಾಗ ಪರಮಾತ್ಮನೊಂದಿಗೆ ಅಭೇದವನ್ನು ಹೊಂದುವನು" ಎಂದಿದ್ದಾರೆ. ಕಲ್ಪತರು ಗ್ರಂಥದಲ್ಲಿ ಉಪಾಧಿಸಂಪರ್ಕದಿಂದಲೇ ಜೀವನಿಗೆ ಕಾಲುಷ್ಯ; ಹೊರತು ಪರಮಾತ್ಮ ಬೇದದಿಂದಲ್ಲ" ಎಂದು ಹೇಳಿದೆ. ಹೀಗೆ ಭಾಷ್ಯ ಭಾಮತಿ ಕಲ್ಪತರು ಗ್ರಂಥಗಳ ಮೇಲಿಂದ ಔಡುಲೋಮಿ ಮತದಲ್ಲಿ ಮುಕ್ತಿಗಿಂತ ಮೊದಲು ಸ್ವಾಭಾವಿಕ ಭೇದ; ಆಮೇಲೆ ಸ್ವಾಭಾವಿಕ ಅಭೇದ ಎಂಬುದು ಸ್ಪಷ್ಟವಾಗುತ್ತದೆ.

ಶಿವಾರ್ಕಮಣಿ ದೀಪಿಕೆಯಲ್ಲಿ "ಸಂಸಾರ ದೆಶೆಯಲ್ಲಿ ಜೀವನು ಪರಮೇಶ್ವರನಿಂದ ಭಿನ್ನನಾದರೂ ಮೋಕ್ಷದೆಶೆಯಲ್ಲಿ ಅಭಿನ್ನನಾಗುವದರಿಂದ ಜೀವವಾಚಕ ಶಬ್ದಗಳಿಂದ ಶ್ರುತಿಯು ಪರಮೇಶ್ವರನನ್ನು ಕರೆಯುತ್ತದೆ. ಇದು ಔಡುಲೋಮಿಯ ಮತ" ಎಂದು ಸೂತ್ರವ್ಯಾಖ್ಯಾನ ಮಾಡಿದ್ದಾರೆ. ಆದ್ದರಿಂದ ಔಡುಲೋಮಿ ಮತದ ಮೇಲೆ ಕಪಿಲರ ದೂಷಣಕ್ಕೆ ಅವಕಾಶವಿಲ್ಲ.

ಇನ್ನು ಆ ಮತವು ಕಾಶಕೃತ್ಸ್ನರದೂ ಅಲ್ಲ. ಏಕೆಂದರೆ ಶ್ರೀಕಂಠ ರಾಮಾನುಜಾಚಾರ್ಯರ ಭಾಷ್ಯಗಳಲ್ಲಿ ತಮ ತಮಗೆ ಅಭಿಮತವಾದ ವಿಶಿಷ್ಟಾದ್ವೈತವೇ ಕಾಶಕೃತ್ಸ್ನರ ಮತವೆಂದು ಹೇಳಿದ್ದರಿಂದ ಆ ಕಾಶಕೃತ್ಸ್ನರ ಮತದ ಮೇಲೆ ಕಪಿಲರು ದೋಷಕೊಡಲಾರರು. ನೋಡಿರಿ! ಶ್ರೀಕಂಠ ಭಾಷ್ಯದಲ್ಲಿ ಎಲ್ಲ ಶ್ರುತಿಗಳನ್ನೂ ಏಕಾಭಿಪ್ರಾಯ ಮಾಡಬೇಕಾದ ವಿಷಯದಲ್ಲಿ "ಎಲ್ಲ ಚೇತನಾಚೇತನ ವಸ್ತುಗಳಲ್ಲಿಯೂ ಅಂತರ್ಯಾಮಿಯಾಗಿ ಸೇರಿಕೊಂಡ ಪರಮೇಶ್ವರನು ಎಲ್ಲ ಶಬ್ದಗಳಿಂದಲೂ ಹೇಳಲ್ಪಡುವನು ಎಂದು ತಿಳಿದು ಬರುತ್ತದೆ. ಆದ್ದರಿಂದ ಕಾಶಕೃತ್ಸ್ನಾಚಾರ್ಯರ ಮತವೇ ಎಲ್ಲ ಶ್ರುತಿ, ಸೂತ್ರ, ಮಹಾತಜ್ಞರುಗಳಿಗೂ ಸಮ್ಮತವಾದದ್ದು" ಎಂದು ಹೇಳಿದೆ. ರಾಮಾನುಜ ಭಾಷ್ಯದಲ್ಲಿ "ಪರಮಾತ್ಮನು ತನ್ನ ಶರೀರವಾದ ಜೀವನಲ್ಲಿ ಆತ್ಮನೆಂದೆಣಿಸಿಕೊಂಡು ಇರುವದರಿಂದ ಜೀವ ವಾಚಕ ಶಬ್ದಗಳಿಂದ ಬ್ರಹ್ಮನನ್ನು ಹೇಳುವರು" ಎಂದಿದ್ದಾರೆ. ಜೀವ ಶಬ್ದವು ಜೀವನು ಪರಮಾತ್ಮ ಭಾವದಿಂದ ಇರುವದರಿಂದಲೇ ಪರಮಾತ್ಮನನ್ನೂ ಹೇಳುತ್ತದೆ ಎಂದೂ ಹೇಳಿದ್ದಾರೆ. ಆದರೆ ಶಾಂಕರ ಭಾಷ್ಯದ ರೀತಿಯಿಂದ ಕಾಶಕೃತ್ಸ್ನರು ಕೇವಲಾದ್ವೈತವಾದಿಗಳಾದ್ದರಿಂದ ಕಪಿಲರ ದೂಷಣವು ಹತ್ತುತ್ತದೆ. ಆ ಕಾಶಕೃತ್ಸ್ನರ ಮತವೇ ವ್ಯಾಸರ ಮತವಾದ್ದರಿಂದ, ಇದಕ್ಕೆ ಸರಲ ಭಾಷ್ಯಕಾರರ ಸಮ್ಮತಿಯಿರುವದರಿಂದ ಕಾಶಕೃತ್ಸ್ನರ ಮತವನ್ನು ನಿರಾಕರಿಸಿದರೆ ವ್ಯಾಸರ ಮತವನ್ನು ನಿರಾಕರಿಸಿದಂತೆಯೇ ಆಗುವದರಿಂದ ವ್ಯಾಸರು ಕೇವಲಾದ್ವೈತವಾದಿಗಳೆಂದು ಸಿದ್ಧವಾಗುವದು. ಈ ಪಕ್ಷವು ನಮಗೆ ಒಪ್ಪಿಗೆಯಾದದ್ದು.

ಮಧ್ವ ಭಾಷ್ಯವನ್ನು ನೋಡಿದರೆ "ಕೃಷ್ಣದ್ವೈಪಾಯನರಿಗಿಂತ ಬೇರೊಬ್ಬ ವೇದಾಂತಿಗಳು ಹೀಗೆ ಹೇಳುವರು. ಅವರು ತಮ್ಮ ಬುದ್ಧಿಗೆ ತಕ್ಕಂತೆ ಹೇಳುವದರಿಂದ ಅದು ವಿರೋಧವಾಗಲಾರದು" ಎಂದು ಹೇಳುತ್ತ ಆಶ್ಮರಥ್ಯ ಜಾಡುಲೋಮಿ, ಕಾಶಕೃತ್ಸ್ನ ಆಚಾರ್ಯರುಗಳು ಭೇದವಾದಿಗಳೆಂದೇ ಸ್ವೀಕರಿಸಿದ್ದಾರೆ. ಆದ್ದರಿಂದ ಆ ರೀತಿಯಿಂದಲೂ ಕಪಿಲರು ಕೊಟ್ಟ ದೂಷಣವು ಅವರುಗಳಿಗೆ ತಾಗದು. ಅಥವಾ "ಆ ವೇದಾಂತಿಗಳು ಬಾದರಿ ಆಚಾರ್ಯರು, ಕಪಿಲರು ಅವರಮತವನ್ನು ಅನುವಾದಮಾಡಿ ಖಂಡಿಸಿರುವರು; ಎಂದೆನ್ನುವದು ಸರಿದೋರುವದಿಲ್ಲ. ಶಂಕರ, ಶ್ರೀಕಂಠ, ರಾಮಾನುಜ, ಮಧ್ವ ಭಾಷ್ಯಗಳಲ್ಲಿ "ಅಭಾವಂ ಬಾದರಿರಾಹ" ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಒಮ್ಮತದಿಂದ "ಮುಕ್ತಿದೆಶೆಯಲ್ಲಿ ಜೀವನಿಗೆ ಶರೀರ ವಿಲ್ಲ" ಎಂದು ಪ್ರತಿಪಾದನೆ ಮಾಡಿದ್ದರಿಂದ ಬಾದರಿಗಳು ಕೇವಲಾದ್ವೈತವಾದಿಗಳಲ್ಲ, ಎಂದು ಹೇಳಿದೆ. ಮುಕ್ತಿಯಲ್ಲಿ ಜೀವನಿಗೆ ಶರೀರವಿಲ್ಲ ವೆಂಬ ಮಾತ್ರಕ್ಕೆ ಬ್ರಹ್ಮಭೇದವು ಸಿದ್ಧಿಸುವದಿಲ್ಲ. ನ್ಯಾಯಮತದಲ್ಲಿಯೂ ಮೋಕ್ಷದಲ್ಲಿ ಜೀವರಿಗೆ ಶರೀರವಿಲ್ಲ ವೆನ್ನುವರು ಜೀವನು ಪರಮಾತ್ಮಾಭಿನ್ನನೆಂದೊಪ್ಪುವದಿಲ್ಲ. ಆದ್ದರಿಂದ ಬಾದರಿಗೆ ಕಪಿಲರು ಮಾಡಿದ ದೂಷಣ ಹೊಂದುವದಿಲ್ಲ.

ಆದ್ದರಿಂದ ಈ ಎಲ್ಲ ವಿಷಯಗಳನ್ನೂ ಚೆನ್ನಾಗಿ ನೋಡಿದರೆ ಕಪಿಲರ ಸೂತ್ರಗಳಲ್ಲಿ ಕೇವಲಾದ್ವೈತವನ್ನು ಸ್ಪಷ್ಟವಾಗಿ ಅನುವಾದ ಮಾಡಿದ್ದರಿಂದಲೂ ಅಂಥ ಅದ್ವೈತವಾದಿಯು ಬೇರೆ ಯಾರೂ ಇಲ್ಲದ್ದರಿಂದಲೂ ಈ ವೈದಾಂತ ಶಾಸ್ತ್ರಗಳಲ್ಲಾಗಲಿ ಬೇರೆ ಶಾಸ್ತ್ರಗಳಲ್ಲಾಗಲಿ ಎಲ್ಲಿಯೂ ವ್ಯಾಸರನ್ನು ಭೇದವಾದಿಗಳೆಂದು ನಿಶ್ಚಯಿಸಿ ಅವರ ಭೇದ ವಾದವನ್ನು ನಿರಾಕರಿಸಿದ ಸೂತ್ರ, ವಾಕ್ಯಗಳಿಲ್ಲದ್ದರಿಂದಲೂ ವ್ಯಾಸರನ್ನು ತಮ್ಮ ಸೂತ್ರಗಳಲ್ಲಿ ವಿಶೇಷವಾಗಿ ಕಪಿಲರನ್ನೇ ಗುರಿಯಿಟ್ಟು ಆ ಮತ ನಿರಾಕರಣೆ ಮಾಡಿದ್ದರಿಂದಲೂ ಕಪಿಲರೂ ವ್ಯಾಸರನ್ನೇ ಗುರಿಯಿಟ್ಟು ಅವರ ಮತವನ್ನು ನಿರಾಕರಿಸಿದುದು ಸಂದರ್ಭೋಚಿತ ವಾದ್ದರಿಂದಲೂ ವ್ಯಾಸರೇ ಅದ್ವೈತವಾದಿಗಳೆಂಬುದು ಫಲತಮವಾಗುವದೆಂದು ಸ್ವಸಷ್ಟವಾಗಿ ಹೇಳುವೆವು.

ಅನಿರುದ್ಧವೃತ್ತಿಯಲ್ಲಿ "ಒಬ್ಬನೇ ಆತ್ಮನೆಂದು ವೇದಾಂತಿಗಳು ಹೇಳುವರು ಇದಕ್ಕೆ ಆಧಾರವಾಗಿ ಸೂತ ಸಂಹಿತೆಯಲ್ಲಿ "ನಿತ್ಯನೂ ಸರ್ವ ವ್ಯಾಪಿಯೂ ವಿಕಾರರಹಿತನೂ ದೋಷರಹಿತನೂ ಆದ ಆತ್ಮನೊಬ್ಬನು; ಆತನು ಸ್ವಾಭಾವಿಕವಾಗಿ ಭಿನ್ನನಲ್ಲ. ಮಾಯೆಯು ಭ್ರಾಂತಿಯ ಮೂಲಕ ಭಿನ್ನವಾಗಿ ತೋರುವದು; ಎಂಬ ವಚನವಿದೆ." ಎಂದು ಮುಂತಾಗಿ ವೇದಾಂತಿಗೆ ಒಪ್ಪಿಗೆಯಾದದ್ದು ಕೇವಲಾದ್ವೈತವೆಂದು ಹೇಳಿದೆ. (ಅಲ್ಲಿಯೇ ಐದನೆಯ ಅಧ್ಯಾಯದಲ್ಲಿ) "ನಾನಿರ್ವಚನೀಯಂ ತದಭಾವಾತ್" ಎಂಬ ಸೂತ್ರವನ್ನು ಶುಕ್ತರಜತ, ರಜ್ಜುಸರ್ಪ ಮುಂತಾದ ಸ್ಥಳಗಳಲ್ಲಿಯ ಆ ರಜತಸರ್ಪಗಳು ಅನಿರ್ವಚನೀಯ" ಎಂಬುದು ವೇದಾಂತಿ ಮತ ಎಂಬ ಅಭಿಪ್ರಾಯದಿಂದ ಅದನ್ನು ದೂಷಿಸುತ್ತಾನೆ ಎಂಬ ಅವತರಣಿಕೆಯನ್ನು ಹುಟ್ಟಿಸಿ ವ್ಯಾಖ್ಯಾನ ಮಾಡಿದ್ದಾರೆ, ಮತ್ತು ವೇದಾಂತ ಶಾಸ್ತ್ರದಲ್ಲಿ "ಮಹದ್ದೀರ್ಘವದ್ವಾ ಹ್ರಸ್ವಪರಿಮಂಡಲಾಭ್ಯಾಂ" ಎಂಬ ಅಧಿಕರಣದಲ್ಲಿ ವ್ಯಾಸರು ಕಣಾದ ಮತವನ್ನು ದೂಷಿಸಿದುತ್ತಿ ವೈಶೇಷಿಕ ಶಾಸ್ತ್ರದಲ್ಲಿಯೂ ಕಣಾದರು ವ್ಯಾಸಮತವನ್ನು ದೂಷಿಸಿದ್ದಾರೆ. ವೈಶೇಷಿಕ ತಂತ್ರದ ಮೂರನೆಯ ಅಧ್ಯಾಯದ ಎರಡನೆಯ ಆಹ್ನಿಕದಲ್ಲಿ ತಮ್ಮ ಮತದ ಪ್ರಕಾರ ಆತ್ಮನು ಅನು

ಮಾನ ಪ್ರಮಾಣದಿಂದ ತಿಳಿಯಲ್ಪಡುತ್ತಾನೆಂದು ಹೇಳಿ ವೇದಾಂತ ಮತವನ್ನು ಖಂಡಿಸಲು
" ತಸ್ಮಾದಾಗಮಿಕಂ " ಎಂಬ ಸೂತ್ರದಿಂದ ವೇದದಿಂದಲೇ ತಿಳಿಯಲ್ಪಡುವ ಆತ್ಮನನ್ನು
ಅನುವಾದಮಾಡಿ " ಸುಖದುಃಖ ಜ್ಞಾನ ನಿಷ್ಪತ್ತ್ಯ ವಿಶೇಷಾದೈಕಾತ್ಮ್ಯಂ ಸರ್ವಶರೀರಾಣಾಂ "
ಎಂಬ ಸೂತ್ರದಿಂದ ಆ ಆತ್ಮನಿಗೆ ವೇದಾಂತಾಭಿಮತ ಏಕಾತ್ಮತೆಯನ್ನೂ ಮಂಡಿಸಿ " ನಾನಾ
ತ್ಮಾನೋ ವ್ಯಸ್ಥಾತಃ " " ಶಾಸ್ತ್ರ ಸಾಮ್ಯ ರ್ಥಾಚ್ಚ " ಎಂಬ ಎರಡು ಸೂತ್ರಗಳಿಂದ ಏಕತ್ವ
ನಿರಾಕರಣವನ್ನು ಮಾಡುತ್ತ ಆತ್ಮನಾನಾತ್ವವನ್ನು ಸಿದ್ಧಮಾಡಿದ್ದಾರೆ. ಈ ವಿಷಯವು ಅವರ
ಸೂತ್ರ ಅವುಗಳ ವ್ಯಾಖ್ಯಾನಗಳಲ್ಲಿ ಸ್ಪಷ್ಟವಾಗಿದೆ. " ಈ ರೀತಿಯಲ್ಲಿ ಸಿದ್ಧನಾದ ಆತ್ಮನು
ಏಕನೋ ಅನೇಕನೋ ? ಎಂಬ ಸಂಶಯಬಂದರೆ ಅವರ ನಿಶ್ಚಯಕ್ಕಾಗಿ ಮೊದಲು ಪೂರ್ವ
ಪಕ್ಷವನ್ನು ಹೇಳುವರು ಸುಖದುಃಖೇತಿ. ಎಲ್ಲ ಶರೀರಗಳಲ್ಲಿಯೂ ಇರುವ ಆತನೊಬ್ಬನೇ. ಎಲ್ಲ
ಡೆಯಲ್ಲಿಯೂ ಸುಖ, ದುಃಖ, ಜ್ಞಾನ, ಇಚ್ಛೆ ಗಳ ರೂಪವು ಒಂದೇ ಆಗಿದೆ. ಬೇರೆಯಾಗಿದೆ
ಯೆಂದು ಹೇಳಲು ಕಾರಣ ವಿಶೇಷವಿಲ್ಲ ಆದ್ದರಿಂದ ಆತ್ಮನೊಬ್ಬನೆಂದೇ ಹೇಳಬೇಕು; ಎಂದು
ಪೂರ್ವಪಕ್ಷಮಾಡಿ ಸಿದ್ಧಾಂತ ಹೇಳುವರು. ನಾನೇತಿ. ಪ್ರತಿ ಶರೀರದಲ್ಲಿಯೂ ಜ್ಞಾನಸುಖಗಳು
ಬೇರೆ-ಬೇರೆಯಾಗಿವೆ. ಒಬ್ಬನಲ್ಲಿ ಹಾಗೆ ಬೇರೆಯಾಗಿರುವಂತಿಲ್ಲ. ಮತ್ತು ಒಬ್ಬನ ಸುಖದುಃಖ
ಗಳು ಮತ್ತೊಬ್ಬನಿಗೆ ತಿಳಿಯಬೇಕಿತ್ತು. ಆದ್ದರಿಂದ ಆತ್ಮ ಒಬ್ಬನಲ್ಲ. ಮತ್ತೊಂದು ಹೇತುವನ್ನು
ಹೇಳುವರು ಶಾಸ್ತ್ರೇತಿ. ಶಾಸ್ತ್ರದಲ್ಲಿಯೂ ಹೀಗೇ ಹೇಳುತ್ತದೆ. ಶಾಸ್ತ್ರವೆಂದರೆ ವೇದ. ಅಲ್ಲಿ
" ಅನಾದಿಯಾಗಿರುವ ಇಬ್ಬರು (ಜೀವ ಈಶ್ವರರು) ಒಬ್ಬ ಸರ್ವಜ್ಞ, ಸರ್ವ ಸಮರ್ಥ,
ಮತ್ತೊಬ್ಬ ಕಿಂಚಿಜ್ಞ, ಅಶಕ್ತ. ಇವರು ಕೂಡಿಯೇ ಇರುವರು. " ಒಬ್ಬ ಭೋಕ್ತಾ,
ಮತ್ತೊಬ್ಬ ಭೋಗ್ಯ, ಮರುನೊಬ್ಬ ಭೋಕ್ತನಿಗೆ ಪ್ರೇರಕ, ಇವರನ್ನು ತಿಳಿದಕೊ. " ಪರಸ್ಪರ
ಮಿತ್ರರಾದ ಇಬ್ಬರು ಕೂಡಿಯೇ ಇರುವ ಪಕ್ಷಿಗಳಂತಿರುವರು. " ಹೇಗೆ ಬೆಂಕಿಯಿಂದ ಕಿಡಿಗಳು
ಹೊರಡುವವೋ ಹಾಗೆ ಈಶ್ವರನಿಂದ ಎಲ್ಲ ಜೀವಿಗಳೂ ಹುಟ್ಟುತ್ತವೆ. " ಎಂದು ಜೀವ ನಾನಾ
ತ್ವವನ್ನು ಹೇಳುವ ಶ್ರುತಿಗಳು ಸಾಕಷ್ಟಿವೆ. " ಯಾವ ಬ್ರಹ್ಮನು ಮೊದಲು ಚತುರ್ಮುಖನನ್ನು
ಹುಟ್ಟಿಸಿ ಆತನಿಗೆ ವೇದಗಳನ್ನುಪದೇಶಿಸಿದನೋ ! ಸರ್ವಭೂತಗಳಿಗೂ ಆತ್ಮನಾಗಿ ಅವೆಲ್ಲವನ್ನು
ತನ್ನ ವಶಮಾಡಿ ಕೊಂಡಿರುವನೋ ಆತನೊಬ್ಬನೇ, ಅನೇಕ ನಿತ್ಯ ವಸ್ತುಗಳನ್ನುವುದರೊಳಗೆ
ನಿಜವಾಗಿ ನಿತ್ಯನಾಗಿರುವನೊಬ್ಬ ಚೇತನದಂತಿರುವುದರೊಳಗೆ ಚೇತನನೊಬ್ಬ " ಮುಂತಾ
ದವುಗಳು ಈಶ್ವರನ ಏಕತ್ವವನ್ನು ಹೇಳುತ್ತಿವೆ; ಆದ್ದರಿಂದ ಜೀವಾತ್ಮರು ಭಿನ್ನರು. ಹೀಗೆ
ಕಾಣಾದ ಸೂತ್ರ ಮತ್ತು ಅದರ ವ್ಯಾಖ್ಯಾನಗಳಲ್ಲಿ ಆತ್ಮೈಕ್ಯತ್ವವು ವೇದಾಂತ ಶಾಸ್ತ್ರಸಮ್ಮತ
ವೆಂದು ತಿಳಿದು ಅದನ್ನು ನಿರಾಕರಿಸಿದ್ದಾರೆ. ವೇದಾಂತಶಾಸ್ತ್ರದಲ್ಲಿ ಹೇಗೆ " ತರ್ಕಾಪ್ರತಿಷ್ಠಾನಾತ್
ಎಂಬ ಅಧಿಕರಣದಲ್ಲಿ ವ್ಯಾಸರು ಗೌತಮ ಮತವನ್ನು ಖಂಡಿಸಿರುವರೋ ಹಾಗೆ ನ್ಯಾಯ
ಶಾಸ್ತ್ರದಲ್ಲಿಯೂ ಕೇವಲಾದ್ವೈತವೇ ವೇದಾಂತ ಶಾಸ್ತ್ರಸಮ್ಮತವೆಂದು ಅದನ್ನು ನಿರಕರಿಸಿದ್ದಾರೆ.
ವೇದಾಂತಶಾಸ್ತ್ರದಲ್ಲಿ " ಏತೇನ ಯೋಗಃ ಪ್ರತ್ಯುಕ್ತಃ " ಎಂಬ ಸೂತ್ರದಿಂದ ವ್ಯಾಸರು
ಪತಂಜಲಿ ಮತವನ್ನು ನಿರಾಕರಿಸಿದಂತೆ ಯೋಗಶಾಸ್ತ್ರದಲ್ಲಿಯೂ ಕೇವಲಾದ್ವೈತವೇ ವೇದಾಂತ
ಮತವೆಂದು ತಿಳಿದು ಅದನ್ನು ದೂಷಿಸಿದ್ದಾರೆ ಇದೋ ನೋಡಿರಿ. " ಸ್ವರೂಪ ಪ್ರತಿಷ್ಠಾವಾ
ಚಿತಿಶಕ್ತಿಃ " ಎಂಬ ಯೋಗಸೂತ್ರವನ್ನು ವ್ಯಾಖ್ಯಾನಮಾಡುತ್ತ " ವೇದಾಂತಿಗಳು ಆತ್ಮನು
ತನ್ನ ಚಿದಾನಂದಮಯರೂಪವನ್ನು ಹೊಂದುವದೇ ಮೋಕ್ಷವೆಂದು ಹೇಳುವರು. ಅದು ಯುಕ್ತ
ವಲ್ಲ. ಏಕೆಂದರೆ ಆನಂದವು (ಸುಖವು) ಯಾವಾಗಲೂ ತಿಳಿಯಲ್ಪಡುವದಾದ್ದರಿಂದ ತಿಳಿಯಲ್ಪ
ಡುವ ವಸ್ತುವಿಗಿಂತ ತಿಳಿವು ಬೇರೆಯಾಗಿರಬೇಕಾದ್ದರಿಂದ ಹೀಗೆ ತಿಳಿವು ತಿಳಿಯಲ್ಪಡುವದು
ಎಂದು ವಸ್ತುಗಳು ಸಿದ್ಧವಾಗಿ ಅದ್ವೈತ ಹಾನಿಯಾಗುವದು; ಎಂದು ಮುಂತಾಗಿ

ಭೋಜವೃತ್ತಿಯಲ್ಲಿ ಕೇವಲಾದ್ವೈತವೇ ವೇದಾಂತಮತವೆಂದು ಅದನ್ನು ದೂಶಿಸಿದ್ದಾರೆ; ಮತ್ತು
ವ್ಯಾಸರು ತಮ್ಮ ಸೂತ್ರದಲ್ಲಿ " ಫಲಮತ ಉಪಪತ್ತೇಃ " ಎಂಬ ಅಧಿಕರಣದಲ್ಲಿ ಜೈಮಿನಿ
ಮತವನ್ನು ದೂಷಿಸಿದಂತೆ ಪೂರ್ವಮೀಮಾಂಸಾಶಾಸ್ತ್ರದಲ್ಲಿಯೂ ಕೇವಲಾದ್ವೈತವನ್ನೇ ವೇದಾಂತ
ಶಾಸ್ತ್ರಸಮ್ಮತವೆಂದು ಅನುವಾದಮಾಡಿ ನಿರಾಕರಿಸಿದ್ದಾರೆ. ಇದಕ್ಕೆ ಉದಾಹರಣೆ:- ಮೀಮಾಂ
ಸಾಶಾಸ್ತ್ರದ ತರ್ಕಪಾದದಲ್ಲಿ ಭಟ್ಟಪಾದರ ವಾರ್ತಿಕವು ಇಂತಿದೆ. " ಆತ್ಮನು ಶುದ್ಧನಾದ್ದರಿಂದ,
ಬೇರೆ ವಸ್ತುಗಳಲ್ಲವಾದ್ದರಿಂದ ಅವಿದ್ಯೆಯು ಸ್ವಪ್ನದಂತೆ ಈ ಜಗತ್ತನ್ನು ಸೃಷ್ಟಿಸುತ್ತದೆ ಎನ್ನು
ವದು ಹೇಗೆ ? ಆ ಅವಿದ್ಯೆಯು ಬೇರೆಕಾರಣದಿಂದ ಈ ಜಗತ್ತನ್ನು ಹುಟ್ಟಿಸುತ್ತಿದ್ದರೆ ಆ ಕಾ
ರಣ ಒಂದು ಆತ್ಮ ಒಂದು, ಹೀಗೆ ದ್ವೈತಪ್ರಾಪ್ತಿಯಾಗಿ ಅದ್ವೈತಹಾನಿಯಾಗುವದು.
ಆ ಅವಿದ್ಯೆಯು ಸ್ವಾಭಾವಿಕವಾಗಿಯೇ ಸೃಷ್ಟಿಸುತ್ತಿದ್ದರೆ ಅದನ್ನು ಕಳೆಯಲು ಶಕ್ಯವಾಗದು.
ಆಸ್ವಭಾವವು ಹೋಗಲಾರದು. ವಿಲಕ್ಷಣ ಕಾರಣವಿಲ್ಲದ್ದರೆ ಅವಿದ್ಯೆಯು ನಾಶವಾಗಲಾರದು.
ಈ ಏಕಾತ್ಮವಾದದಲ್ಲ ಆ ವಿಲಕ್ಷಣ ವಸ್ತುವಿಗೆ ಅವಕಾಶವೆಲ್ಲಿ ? " ಹೀಗೆ ಕೇವಲಾದ್ವೈ
ತವನ್ನೇ ಅನುವಾದಮಾಡಿ ಖಂಡಿಸಿದೆ. ಅದೇ ತರ್ಕಪಾದದ ಶಾಸ್ತ್ರದೀಪಿಕೆಯಲ್ಲಿ " ಒಬ್ಬ
ಆತ್ಮನು ಈ ಜಗತ್ತಿಗಿಂತಮೊದಲಿದ್ದು ಸ್ವೇಚ್ಛೆಯಿಂದಲೇ ಆಕಾಶಾದಿರೂಪದಿಂದ ಬೀಜವು
ಅಂಕುರವಾದಂತೆ ಪರಿಣಮಿಸುತ್ತಾನೆ. ಜ್ಞಾನ ಘನವಾದ ಆತ್ಮನು ಈ ಜಡರೂಪವಾಗುವದು
ಹೇಗೆ ? ಎಂದು ಕೇಳಬೇಡಿ. ನಿಜವಾದ ಪರಿಣಾಮವೆಂದು ನಾವನ್ನುವದಿಲ್ಲ. ಪರಿಣಾಮ
ಹೊಂದದಿದ್ದರೂ ಪರಿಣಾಮಹೊಂದಿದಂತೆ, ಏಕನಾದರೂ ಅನೇಕರಂತೆ. ಅನೇಕ ಕನ್ನಡಿಗಳಲ್ಲಿ
ಒಂದೇ ಮುಖವು ಅನೇಕವಾಗಿ ತೋರುವಂತೆ ಅವಿದ್ಯಾ ಮೂಲಕವಾಗಿ ಹಾಗೆ ತೋರುತ್ತಾನೆ.
ಆತ್ಮನು ಜ್ಞಾನರೂಪನಾದರೂ ಜಡದಂತೆ, ಅದ್ವಿತೀಯನಾದರೂ ಅನೇಕತೆಯನ್ನು ಪಡೆದಂತೆ
ತನನ್ನನ್ನುತಾನೇ ಕಾಣುತ್ತಾನೆ. ಆ ಅವಿದ್ಯೆಯು ಸ್ವಪ್ನಪ್ರಪಂಚದಂತೆ ಈ ಜಾಗ್ರತ್ ಪ್ರಪಂಚಕ್ಕೂ
ಮೂಲವಾಗಿರುವದು. ಇದನ್ನೇ " ಈ ಜಗತ್ತೆಲ್ಲವೂ ಆತ್ಮನು " " ಆತ್ಮನಹೊರತು ಬೇರೆ
ಏನೂ ಇಲ್ಲ " " ಈ ಜಗತ್ತೆಲ್ಲವೂ ಬ್ರಹ್ಮವು " ಮುಂತಾದ ಶ್ರುತಿಗಳು ಹೇಳುತ್ತವೆ;
ಮತ್ತು " ಜಗದೀಶನು ಮಾಯಾಶಕ್ತಿಗಳಿಂದ ನಾನಾರೂಪನಾಗುವನು " ಎಂಬ ಶ್ರುತಿಯು
ಆತ್ಮಭೇದವು ಮಾಯೆಯಿಂದಾಗುವದೆಂಬುದನ್ನು ಹೇಳುತ್ತದೆ. " ಯಾರು ಈ ಜಗತ್ತನ್ನು
ಅನಾತ್ಮವಾಗಿ--ಆತ್ಮನಿಗೆ ಭಿನ್ನವಾಗಿ ಕಾಣುವರೋ ಅವರನ್ನು ಜಗತ್ತು ಹಾಳುಮಾಡುವದು;
ಎಂಬಶ್ರುತಿಯು ಅನಾತ್ಮದೃಷ್ಟಿಯನ್ನು ನಿಂದಿಸುತ್ತದೆ. " ಯಾರಲ್ಲಿ ಅನೇಕತ್ವವನ್ನು ಕಾಣು-
ವರೋ ಅವರು ಮೃತ್ಯುವಿನ ಬಂಧನಕ್ಕೊಳಗಾಗುವರು " ಎಂದು ಭೇದ ದೃಷ್ಟಿಯನ್ನು
ನಿಂದಿಸಿದೆ. ಒಟ್ಟಿನಲ್ಲಿ ಇವೆಲ್ಲವೂ ಅದ್ವಿತೀಯ ಬ್ರಹ್ಮವು; ಭೇದಭಾವನೆಯು ಅನರ್ಥಕರವಾದದ್ದು.
ಈ ಸೃಷ್ಟಿಯು ಮಾಯಕವಾದದ್ದು, ಎಂಬ ಅರ್ಥವನ್ನು ಸೃಷ್ಟಿಪಡಿಸುತ್ತದೆ " ಹೀಗೆ ಪಾರ್ಥ
ಸಾರಥಿಮಿಶ್ರರೂ ಕೇವಲಾದ್ವೈತವೇ ವೇದಾಂತಮತದನುವಾದಮಾಡಿ ದೂಷಿಸಿದ್ದಾರೆ
ಪಾಣಿನೀ ಮಹರ್ಷಿಗಳ ವ್ಯಾಕರಣ ಶಾಸ್ತ್ರದಲ್ಲಿಯೂ ಭರ್ತಹರಿಯು " ಯಾವುದರಲ್ಲಿ ಪ್ರಷ್ಟೃ,
ದೃಶ್ಯ, ಮತ್ತು ದರ್ಶನ ಇವು ಕಲ್ಪಿತವೋ ಅದೊಂದೇವಸ್ತುವು ಸತ್ಯವಾಗಿದೆ " ಎಂದುವೇದಾಂತಿ
ಗಳು ಹೇಳುವರು; ಎಂದಿದ್ದಾನೆ. ವೇದಾಂತಶಾಸ್ತ್ರದ " ಪತ್ಯುರಸಾಮಂಜಸ್ಯಾತ್ " ಎಂಬ
ಅಧಿಕರಣದಲ್ಲಿ ಪೂಜ್ಯವ್ಯಾಸರು ಪಾಶುಪತ ಮತವನ್ನು ನಿರಾಕರಿಸಿದಂತೆ ಶೈವಾಗಮದಲ್ಲಿಯೂ
ಕೇವಲಾದ್ವೈತವೇ ವೇದಾಂತಶಾಸ್ತ್ರಸಮ್ಮತವೆಂದು ತಿಳಿದು ಅನುವಾದಮಾಡಿ ಖಂಡಿಸಿದೆ.
ಉದಾಹರಣೆ:- ಮೃಗೇಂದ್ರ ಸಂಹಿತೆಯ ಜ್ಞಾನಪಾದದ ಎರಡನೆಯ ಪಟಲದಲ್ಲಿ " ಭಾರದ್ವಜ
ಉವಾಚ ಎಂದು ಆರಂಭಿಸಿ ವೇದಾಂತ, ಸಾಂಖ್ಯ, ಸದ್ವಾದ, ಅಸದ್ವಾದ ಮುಂತಾದ ಮತ
ಗಳಲ್ಲಿಯೂ ಮುಕ್ತಿಯೂ ಹೇಳಲ್ಪಟ್ಟಿರುವಾಗ ಈ ಶೈವಾಗಮದಲ್ಲೇನು ವಿಶೇಷ ? ಎಂಬಪ್ರಶ್ನೆಗೆ

ಶುಕ್ರಉವಾಚ ಆ ಯಾ ವಾದಿಗಳು ಸರ್ವಜ್ಞರಲ್ಲದ್ದರಿಂದ ಅಲ್ಲಿ ಸ್ವಷ್ಟವಾಗಿ ಆ ವಿಷಯವು ಹೇಳಲ್ಪಟ್ಟಿಲ್ಲ. ಶೈವಾಗಮದಲ್ಲಿ ಸರ್ವಜ್ಞನಾದ ಶಿವನಿಂದ ಸಫಲವಾದ ಎಲ್ಲಸಾಧನೆಗಳೂ ಹೇಳಲ್ಪಟ್ಟಿವೆ. ವೇದಾಂತಗಳಲ್ಲಿ ಒಬ್ಬನೇ ಆತ್ಮನು, ಅವನು ಚಿತ್--ಅಚಿತ್ ಎಂದು ಭಿನ್ನವಾಗಿ ತೋರುವನು. ಈ ಜಗತ್ತೆಲ್ಲವೂ ಆತ್ಮರೂಪವೇ, ಬೇರೊಂದಿಲ್ಲ. ಎಂದು ಹೇಳಿದೆ. ಆದರೆ ಇದು ಬರೆಪ್ರತಿ ಪ್ರತಿಜ್ಞಾನಮಾತ್ರ ಇದಕ್ಕೆ ಸರಿಯಾದ ಯುಕ್ತಿಯಿಲ್ಲ ವೇದಾಂತವು ಪ್ರಮಾಣವಾಗಲಾರದು. ಏಕೆಂದರೆ ಆತ್ಮನು ಪ್ರಮೇಯ (ಪ್ರಮಾಣದಿಂದ ತಿಳಿಯಲ್ಪಡುವವು) ನಾಗಿರುವನು ಎಲ್ಲಿ ಪ್ರಮಾಣ ಪ್ರಮೇಯ ಗಳಿರುವವೋ ಅಲ್ಲಿ ಪ್ರಮಾತೃ, ಪ್ರಮಿತಿ ಗಳೆರಡೂ ಇರಬೇಕಾಗುತ್ತದೆ. ಹೀಗೆ ನಾಲ್ಕುಇರುವಾಗ ಅದ್ವೈತಹಾನಿಯಾಗುವದು. ಇಲ್ಲದಿದ್ದರೆ ವೇದಾಂವು ಪ್ರಮಾಣವಾಗುವದಿಲ್ಲ; ಮತ್ತು ಆತ್ಮನೊಬ್ಬನಾದರೆ ಎಲ್ಲರಿಗೂ ಸುಖದುಃಖಗಳು ಒಂದೇ ನಮೂನಿಯಾಗಿರಬೇಕಿತ್ತು. ಮೋಕ್ಷವೇ ಇನ್ನೂ ಯಾರಿಗೂ ಆಗಿಲ್ಲ; ಆಗುವಂತೆಯೂ ಇಲ್ಲ, ಎನ್ನಬೇಕಾಯ್ತು. ಇವೆಲ್ಲ ಆತ್ಮವಾದಿಗಳಿಗಿಷ್ಟವಲ್ಲ. ಪರಮಾತ್ಮನು ಯಾರಪಾಪ ಪುಣ್ಯಗಳನ್ನು ತೆಗೆದುಕೊಳ್ಳುವದಿಲ್ಲ. ಎಂದು ಹೇಳಿದೆ. ಇಲ್ಲಿ ವೇದಾಂತ, ಸಾಂಖ್ಯ, ಜೈನ, ಕಾಣಾದ ಮುಂತಾದ ಮತಗಳಲ್ಲಿ ಸರ್ವಜ್ಞರಿಂದ ರಚಿಸಲ್ಪಡದಿರುವದರಿಂದ ಅವುಗಳಲ್ಲಿ ಸರಿಯಾದ ಅರ್ಥನಿರ್ಣಯವಾಗುವದಿಲ್ಲವೆಂದು ಸಾಮಾನ್ಯವಾಗಿ ದೂಷಿಸಿ, ಪುನಃ ಪ್ರತ್ಯೇಕವಾಗಿ ಎಲ್ಲಮತಗಳನ್ನೂ ದೂಷಿಸಲು ಉಪಕ್ರಮಿಸಿ ಮೊದಲು ವೇದಾಂತಮತವನ್ನು ಎತ್ತಿ " ವೇದಾಂತೇಷು " ಎಂಬಿವೇಮುಂತಾದ ಶ್ಲೋಕಗಳಿಂದ ಈ ರೀತಿ ದೂಷಿಸಿದೆ. " ವೇದಾಂತಗಳು ಪ್ರಮಾಣವೋ ! ಅಪ್ರಮಾಣವೋ ಪ್ರಮಾಣವೆಂದಾದರೆ ಆತ್ಮನೇ ಅಲ್ಲಿ ಪ್ರಮೇಯನಾದ್ದರಿಂದ, ಎಲ್ಲಿಪ್ರಮಾಣ ಪ್ರಮೇಯ ಗಳಿರುವವೋ ಅಲ್ಲಿ ಪ್ರಮಿತಿ, ಪ್ರಮಾತೃ ಎಂಬ ಮತ್ತೆರಡು ವಸ್ತುಗಳೂ ಇರಬೇಕಾದ್ದರಿಂದ ಆಗ ನಾಲ್ಕುವಸ್ತುಗಳಾದಂತಾಗಿ ಅದ್ವೈತಹಾನಿಯಾಯಿತು. ವೇದಾಂತವು ಪ್ರಮಾಣವಲ್ಲದಿರೆ ವೇದಾಂತಮತವೇ ಅಪ್ರಮಾಣಿಕವೆಂದಾಯಿತು; ಮತ್ತು ಆತ್ಮನೊಬ್ಬನಾದರೆ ಎಲ್ಲರಿಗೂ ಸುಖದುಃಖಗಳ ಅನುಭವವು ಒಂದೇರೀತಿಯಿರಬೇಕಿತ್ತು; ಮೋಕ್ಷವಿಲ್ಲದಿರಬೇಕಾಯ್ತು; ಮುಂತಾಗಿ ದೂಷಿಸಿದೆ. ಇದರಂತೆ ಮೃಗೇಂದ್ರ ಸಂಯಿತೆಯನ್ನು ವ್ಯಾಖ್ಯಾನಮಾಡಿದ ಭಟ್ಟನಾರಯಣ ಪಂಡಿತರೂ; ಶ್ರೀ ಕಠಠಾಚಾರ್ಯರೂ ಇವರ ವ್ಯಾಖ್ಯಾನವನ್ನೂ ವ್ಯಾಖ್ಯಾನಮಾಡಿದ ಅಘೋರ ಶಿವಾಚಾರ್ಯರೂ ಈ ಪರಿಯಿಂದಲೇ ವೇದಾಂತಮತವನ್ನು ಅನುವಾದ ಮತ್ತು ನಿರಾಕರಣ ಪೂರ್ವಕ ವಿಸ್ತರಿಸಿದ್ದಾರೆ ಬಹಳ ದೀರ್ಘವಾಗುವದರಿಂದ ನಾವಿಲ್ಲಿ ಸ್ವಲ್ಪಮಾತ್ರ ದಿಗ್ದರ್ಶನಮಾಡುತ್ತೇವೆ, ಭಟ್ಟನಾರಾಯಣ, ಶ್ರೀಕಂಠಾಚಾರ್ಯರ ವೃತ್ತಿಗ್ರಂಥಗಳಲ್ಲಿ " ವೇದಾಂತವು ಒಬ್ಬನೇ ಆದ ಆತ್ಮನನ್ನು ಹೇಳುತ್ತಿದೆ. ಏಕೋವಶೀ ಸರ್ವಭೂತಾಂತರಾತ್ಮ ಎಂಬವೇ ಮುಂತಾದ ಶ್ರುತಿಗಳು ಪರಮಾತ್ಮನೇ ಎಲ್ಲ ಚಿತ್--ಅಚಿತ್ ಆವಿರ್ಭಾವ. ತಿರೋಭಾವ ಗಳಿಗೆ ಮೂಲಕಾರಣನಾಗಿರುತ್ತಾನೆಂದು ಹೇಳುತ್ತೇವೆ, ಪರಿಪೂರ್ಣ ಸ್ವತಂತ್ರನಾಗಿ ತಾನೊಬ್ಬನೇ ಆದರೂ ಸಂಸಾರಕ್ಕಾಗಿ ನಾನಾಮನಸ್ಸೆಂಬ ಉಪಾಧಿಗಳಿಂದ ಭಿನ್ನವಾಗಿ ಬೇರೆ ಬೇರೆ ಸ್ವಭಾವಗಳನ್ನನುಸರಿಸುತ್ತಾನೆ. ಆತನನ್ನು ಸರಿಯಾಗಿ ತಿಳಕೊಂಡರೆ ಮೋಕ್ಷವಾಗುವದು ಅದ್ವೈತಭಾನವು ಸತ್ಯವಾದದ್ದು ದ್ವೈತಭಾನವು ಎರಡುಚಂದ್ರನ ಭಾನನಂತೆ ಅಸತ್ಯವಾದದ್ದು. ಇದಕ್ಕೆ ಆಧಾರವಾಗಿ ಬೃತೃಹರಿಯು "ಶುದ್ಧವಾದಆಕಾಶವನ್ನು ಕಣ್ಣಿನದೋಷದಿಂದ ನಾನಾಬಣ್ಣವುಳ್ಳದ್ದನ್ನಾಗಿ ಜನರು ಕಾಣುವಂತೆ ನಿತ್ಯವಾಗಿಯೂ, ವಿಕಾರವಿಲ್ಲದವನಾಗಿಯೂ ಇರುವ ಆತ್ಮನನ್ನು ಮಾಯೆಯಿಂದ ಅನಿತ್ಯನೆಂದೂ ಕಲುಷಿತನೆಂದೂ ವಿಭಿನ್ನನೆಂದೂ ತಿಳಿಯುತ್ತಾರೆ; ಎಂದಿದ್ದಾನೆ. ಅಂತೂ ಬ್ರಹ್ಮ ಆತ್ಮಾ ಮುಂತಾದ ಹೆಸರುಳ್ಳ ಒಂದು ವಸ್ತುವಿಗೆ ಮನಸ್ಸಿನ ಸಂಸಾರಧರ್ಮಗಳಾದ ಸುಖದುಃಖಗಳ ಯೋಗದಿಂದ, ನೀರಿನಯೋಗದಿಂದ ಸೂರ್ಯನಿಗೆ ನಾನಾತ್ವವು ತೋರಿದಂತೆ ಅನೇಕತ್ವವು ಭಾಸವಾಗುವದು. ಇದು " ಯಥಾಹ್ಯಯಂ ಜ್ಯೋತಿರಾತ್ಮಾ " ಎಂಬ ಶ್ರುತಿ

ಅಭಿಪ್ರಾಯವಾಗಿದೆ, ಆದರೆ ಇದು ಹೊಂದುವದಿಲ್ಲ ಎಂದು ಮುಂತಾಗಿ ಖಂಡಿಸಿದೆ ಅಘೋರ ಶಿವಾಚಾರ್ಯರ ವಾಖ್ಯಾನದಲ್ಲಿಯೂ " ಈಗ ಉಳಿದಮತಗಳ ಅಸ್ಪಷ್ಟತೆಯನ್ನು ತೋರಿಸಲು ಉಪಕ್ರಮಿಸಿ ಮೊದಲು ವೇದಾಂತಮತದ ಅಸ್ಫುಟತೆಯನ್ನು ಸೂಚಿಸಿ ಬರೆಯುತ್ತಾರೆ. ವೇದಾಂತೇಷು; ಎಂಬ ಶ್ಲೋಕದಿಂದ ಆಮೇಲೆ " ಆತ್ಮೈವೇದಂ ಎಂಬ ಶ್ಲೋಕದಿಂದ ವಿವರಿಸುತ್ತಾರೆ. " ಆ ವಿದ್ಯೆಯ ಮಹಿಮೆಯಿಂದ ಜೀವಿಗಳು ಪಶು, ಮೃಗಾದಿ ಶರೀರಗಳನ್ನು ವಿಭಿನ್ನವಾಗಿಯೂ, ಆ ಮೂಲಕ ತಾವು ಅನೇಕರೆಂದೂ, ಇವೆಲ್ಲವೂ ಸತ್ಯವಾಗಿವೆಯೆಂದು ತಿಳಿಯುತ್ತಿದ್ದಾರೆ. ಹೇಗ ಸ್ವಪ್ನದಲ್ಲಿ ಅನೇಕಪುರುಷರು ಅನೇಕಪ್ರಕಾಶಗಳು—ಅನೇಕವಿಭಾಗಗಳು ಕಾಣುವವೋ ಹಾಗೆ, ಮತ್ತು ಎರಡು ಚಂದ್ರನನ್ನು ಕಾಣುವದು ಸುಳ್ಳಾದಂತೆ ಆತ್ಮನು ಅನೇಕತೆಯ ಆ ಭಾನವು ಸುಳ್ಳಾದದ್ದು ಇರುತ್ತದೆ. ಶ್ರುತಿಗಳಿಂದಲೂ ಯುಕ್ತಿಗಳಿಂದಲೂ ಆತ್ಮನೂ ಒಬ್ಬನೆಂಬುವದೇ ಸಿದ್ಧವಾಗುತ್ತದೆ--ಎಂದುಹೇಳಿದ್ದಾರೆ. ಆದ್ದರಿಂದ ಮೃಗೇಂದ್ರ, ಸಂಹಿತೆ, ಅದರವೃತ್ತಿ, ಅದರವಾಖ್ಯಾನ ಇವುಗಳಿಂದ ಕೇವಲಾದ್ವೈತವೇ ವೇದಾಂತಶಾಸ್ತ್ರಸಮ್ಮತವೆಂದು ಸಿದ್ಧವಾಗುವದು. ಅಗಸ್ತ್ಯ ಮಹರ್ಷಿಗಳಿಂದ ರಚಿತವಾದ ಶಿವರಹಸ್ಯದಲ್ಲಿಯೂ ಮೂರನೆಯ ಅಂಶದ ಮೂವತ್ತಾರನೆಯ ಅಧ್ಯಾಯದಲ್ಲಿ " ಎಲೈ ದೇವನೇ; ನಿನ್ನಲ್ಲಿ ಗೌತಮರು ಕಲ್ಪಿಸಿದ ಆಕಾಶ ನಿತ್ಯತ್ವವಾದವೂ ಇಲ್ಲ; ಜೈಮಿನಿಯ ಶಬ್ದನಿತ್ಯತ್ವವಾದವೂ ಇಲ್ಲ; ವೇದಾಂತಿಗಳ ಜಗನ್ಮಿಥ್ಯಾತ್ವವಾದವೂ ಇಲ್ಲ; ಬಂಧ ಮೋಕ್ಷಗಳಿಲ್ಲ. ವೇದಾಂತ ಶಾಸ್ತ್ರಗಳಲ್ಲಿ ಕಾಣುವ ಸೃಷ್ಟಿದೃಷ್ಟಿವಾದವೂ ಇಲ್ಲ; ಅವಿದ್ಯಾವಿಲಾಸವೂ ಇಲ್ಲ; ಇವೆಲ್ಲವೂ ನಿನ್ನಾಟ. ಅನಂತವಾದ ವೇದಾಂತಗಳಲ್ಲಿ ಹರನನ್ನು ಆರಾಧಿಸುವ ಮಾರ್ಗವಿಲ್ಲ ವೆಂಬಭ್ರಮದಿಂದ ಕರ್ಮಮಾರ್ಗವೂ ಶಿವಾರಾಧನೆಯ ಮಾರ್ಗವೂ ವಿನಷ್ಟವಾಗಿಹೋಗಿದೆ..ಇಲ್ಲಿಯೂ " ಗೌತಮರ ಆಕಾರನಿತ್ಯತ್ವ, ಜೈಮಿನಿಗಳ ಶಬ್ದನಿತ್ಯತ್ವ; ಇವುಗಳೊಂದಿಗೆ ನಿರಾಕರಿಸಲ್ಪಟ್ಟ ವೇದಾಂತಿಗಳ ಪ್ರಪಂಚಮಿಥ್ಯಾತ. ಬಂಧಮೋಕ್ಷಗಳು ದೃಷ್ಟಿ--ಸೃಷ್ಟಿವಾದ ಮುಂತಾದವುಗಳು ವ್ಯಾಸಾಭಿಮತವಾದ್ದರಿಂದಲೂ ಗೌತಮ ಜೈಮಿನಿಗಳು ಒಂದೊಂದು ಶಾಸ್ತ್ರದ ಸೂತ್ರಗಳನ್ನು ರಚಿಸಿದವರಿದ್ದು ಅವರೊಂದಿಗೆ ಸೇರಿಸಲ್ಪಟ್ಟ ವೇದಾಂತಿ ಶಬ್ದವು ಬ್ರಹ್ಮಸೂತ್ರಗಳನ್ನು ರಚಿಸಿದ ವ್ಯಾಸರನ್ನೇ ಗುರಿಪಡಿಸುತ್ತದೆ. ಆದ್ದರಿಂದ ಕೇವಲಾದ್ವೈತವೇ ವ್ಯಾಸಾನುಮತವೆಂದು ನಿಶ್ಚಿತವಾಗುತ್ತದೆ. ವೇದಾಂತ ಶಾಸ್ತ್ರದಲ್ಲಿ ವ್ಯಾಸರು " ಉತ್ಪತ್ತ್ಯಸಂಭವಾತ್, ಸಮುದಾಯ ಉಭಯ ಹೇತುಕೇಪಿ ತದಪ್ರಾಪ್ತಿ:, ನೈಕಸ್ಮಿನ್ನಸಂ--ಭಾವಾತ್, ಏಕ ಆತ್ಮನಃ ಶರೀರೇಭಾವಾತ್ " ಎಂಬ ನಾಲ್ಕು ಅಧಿಕರಣಗಳಲ್ಲಿ ಪಾಂಚರಾತ್ರಿ, ಬೌದ್ಧ, ಜೈನ, ಚಾರ್ವಾಕ ಮತಗಳನ್ನು ಹೇಗೆ ದೂಷಿಸಿರುವರೋ ಹಾಗೆ ಅವರೆಲ್ಲರೂ ತಮ್ಮ ಗ್ರಂಥಗಳಲ್ಲಿ ಕೇವಲಾದ್ವೈತವೇ ವೇದಾಂತ ಶಾಸ್ತ್ರಸಮ್ಮತವೆಂದೇ ಅದನ್ನು ದೂಷಿಸಿದ್ದಾರೆ.

ಒಟ್ಟಿನಲ್ಲಿ ಹಿಂದೆಹೇಳಿದಂತೆ ಎಲ್ಲ ಶಾಸ್ತ್ರಗಳಲ್ಲಿಯೂ ಪರಮತವನ್ನು ನಿರಾಕರಣ ಮಾಡುವ ಸ್ಥಳದಲ್ಲಿ ಕೇವಲಾದ್ವೈತವನ್ನೇ ವೇದಾಂತಮತವೆಂದು ಅನುವಾದಮಾಡಿ ಖಂಡಿಸಿರುವದರಿಂದ ವ್ಯಾಸರು ವೇದಾಂತಶಾಸ್ತ್ರ ಪ್ರವರ್ತಕರಾದ್ದರಿಂದ ಕೇವಲಾದ್ವೈತವೆ ವ್ಯಾಸತಾತ್ಪರ್ಯ ವಿಷಯವೆಂದು ನಿರ್ಣಯವಾಗುತ್ತದೆ. ಆದ್ದರಿಂದ ಎಲ್ಲ ವಾದಿಗಳಿಂದಲೂ ಮನ್ನಣೆ ಪಡೆದ ಕಪಿಲ, ಕಣಾದ, ಗೌತಮ, ಪತಂಜಲಿ, ಜೈಮಿನಿ, ಸೂತ್ರಗಳಲ್ಲಿಯೂ ಆ ಭಾಷ್ಯವೃತ್ತಿ, ವ್ಯಾಖ್ಯಾನಗಳಲ್ಲಿಯೂ, ಪಾಶುಪತ, ಪಾಂಚರಾತ್ರಿ, ಬೌದ್ಧ, ಜೈನ, ಚಾರ್ವಾಕ, ತಂತ್ರಗಳಲ್ಲಿಯೂ, ಹೀಗೆ ಹತ್ತು ತಂತ್ರಗಳಲ್ಲಿ ವೇದಾಂತಮತವನ್ನೂ ನಿರಾಕರಣೆ ಮಾಡುವಾಗ ಕೇವಲಾದ್ವೈತವೇ ಅನುವಾದ ಮಾಡಲ್ಪಟ್ಟಿರುವದರಿಂದ ಪ್ರತಿವಾದಿಗಳ ಮೂಕತೆಯ ಮೂಲಕ ಅದ

ಮನೋಹರವಾಗಿರುವದರಿಂದ ಅದೇ ಅದ್ವೈತವೇ ವ್ಯಾಸ ತಾತ್ಪರ್ಯವಿಷಯವೆಂದು ನಾವು ತಿಳಿಯುತ್ತೇವೆ.

ಹೀಗಿರುವಲ್ಲಿ ಎಲ್ಲ ವೇದಾಂತವಾಕ್ಯಗಳ ಅರ್ಥವನ್ನು ಸೂಚಿಸುವ ವ್ಯಾಸರ ಬ್ರಹ್ಮಸೂತ್ರಗಳಿಗೆ ಅದ್ವಿತೀಯ ಬ್ರಹ್ಮನಲ್ಲಿ ಗುರಿಯಿದೆಯೆಂದು ಸಿದ್ಧಿಕವಾದಮೇಲೆ ಆ ವ್ಯಾಸ ಸೂತ್ರಗಳಿಗೆ ಮೂಲಭೂತವಾದ ಎಲ್ಲ ಉಪನಿಷತ್ತುಗಳಿಗೂ ಅದ್ವಿತಿಯ ಬ್ರಹ್ಮನೇ ಅರ್ಥ-ವೆಂದು ಸಿದ್ಧವಾಗುವದು. ಇದನ್ನು ಸೂತಸಂಹಿತೆಯ ಯಜ್ಞವೈಭವಖಂಡದಲ್ಲಿ ಹತ್ತನೆಯ ಅಧ್ಯಾಯದಲ್ಲ ಸ್ಪಷ್ಟವಾಗಿಹೇಳಿದೆ. " ಶ್ರುತಿಯು ಆದರದಿಂದ ಏಕಮೇವಾದ್ವಿತಿಯಂ ಎಂದು ಹೇಳುತ್ತದೆ. ಈ ದ್ವೈತವೆಲ್ಲವೂ ಮಾಯಿಕವಾದದ್ದು. ಏಕಾತ್ಮದರ್ಶನವನ್ನು ಮಾಡುವವನಿಗೆ ಶೋಕಮೋಹಗಳಿಲ್ಲ. ದ್ವಿತಿಯ ವಸ್ತುವಿನಿಂದಲೇ ಭಯಬರುತ್ತದೆ. ಸಣ್ಣತನದಲ್ಲಿ ಸುಖವಿಲ್ಲ; ಆದ್ದರಿಂದ ತರ್ಕಪ್ರಮಾಣಗಳ ಬಲದಿಂದ ಒಂದೇ ವಸ್ತುವೆಂದು ಸಿದ್ಧವಾಗುವದು. ವಿದ್ವಾಂ-ಸರ ಅನುಭವವೂ ಅದನ್ನೇ ಹೇಳುತ್ತಿದೆ. ಮಹಾವಾಕ್ಯಗಳಿಂದ ಯಾರು ಆ ಏಕರೂಪ ಆತ್ಮನನ್ನು ಕಾಣುವರೋ ಅವರು ಸ್ವಪ್ನದಿಂದೆಚ್ಚತ್ತಂತೆ ಮುಕ್ತರಾಗುವರು. ಭೇದದರ್ಶನದಿಂದ ಮುಕ್ತಿಯನ್ನು ಪಡೆಯಲು ಇಚ್ಛಿಸುವರು ಈ ಮಾಹಾಘೋರ ಸಂಸಾರದಲ್ಲಿ ಬಿದ್ದು ಒದ್ದಾ-ಡುವರು." ಎಂದು ಹೇಳಿದೆ. ಅಲ್ಲಿಯೇ ಮೂವತ್ತೊಂಬತ್ತನೆಯ ಅಧ್ಯಾಯದಲ್ಲಿ " ಎಲೈ ಮುನಿವರ್ಯರೆ: ಎಲ್ಲ ವೇದಗಳಿಗೂ ಅವಿರೋಧವನ್ನು ಸಂಕ್ಷೇಪವಾಗಿ ಹೇಳುವನು ವೇದರಾಶಿಗಳು ಎರಡು ಭಾಗಗಳಾಗಿವೆ. ಒಂದು ಭಾಗವು ಸತ್ಯವಾದ ಅದ್ವೈತವನ್ನೇ ಹೇಳುತ್ತಿದ್ದರೆ ಮತ್ತೊಂದು ಭಾಗವು ಕಲ್ಪಿತ ದ್ವೈತವನ್ನು ಸಾರುತ್ತಿದೆ. ಎಲೈ ಆಸ್ತಿಕರಾದ ದ್ವಿಜರೇ; ಯಾವಾಗಲೂ ಅದ್ವೈತವು ಸತ್ಯವೇ ದ್ವೈತವು ಅಸತ್ಯವೇ ಅದ್ವೈತ ತತ್ವವು ಪ್ರತ್ಯಕ್ಷಾದಿ ಇತರ ಪ್ರಮಾಣಗಳಿಗೆ ನಿಲುಕದಾದ್ದರಿಂದ ಆ ವಿಷಯದಲ್ಲಿ ಶ್ರುತಿಗಳೇ ಪ್ರಮಾಣವಾಗಿರುವವು. ವೇದವು ಹೇಳ-ದಿದ್ದರೂ ದ್ವೈತವು ಪ್ರತ್ಯಕ್ಷ ಮುಂತಾದ ಪ್ರಮಾಣಗಳಿಂದ ಸಿದ್ಧವಾದ್ದರಿಂದ ಆ ಭಾಗದಲ್ಲಿ ಶ್ರುತಿಗಳು ಇತರ ಪ್ರಮಾಣಗಳನ್ನು ಅನುವಾದಮಾಡುತ್ತವೆ." ಅಲ್ಲಿಯೇ ಬ್ರಹ್ಮಗೀತೆಯ ಐದನೆಯ ಅಧ್ಯಾಯದಲ್ಲಿ "ತ್ವಂ" ಶಬ್ದಕ್ಕೆ ಅರ್ಥವಾದದ್ದೇ "ಅಹಂ" ಶಬ್ದಕ್ಕೂ ಅರ್ಥವಾಗಿದೆ "ಅಹಂ" ಶಬ್ದಾರ್ಥವೇ "ತ್ವಂ" ಶಬ್ದಕ್ಕೂ ಅರ್ಥ. "ಅಹಂ" "ತ್ವಂ" ಶಬ್ದಗಳಿಂದ ಸೂಚಿಸಲ್ಪಡುವದು ಸರ್ವಾಂತರ್ಯವಾದ ಚಿದ್ರೂಪ. "ತತ್" ಪದದಿಂದ ಸೂಚಿಸಲ್ಪಡು-ವದೂ ಅದೇ. ಇದಕ್ಕೆ ಸಂಶಯವಿಲ್ಲ. "ತತ್ವಮಸಿ" ಎಂಬ ಶ್ರುತಿಯು ಜೀವ ಪರಮಾತ್ಮ-ರೊಳಗೆ ಐಕ್ಯವನ್ನೂ ಸೂಚಿಸುವಾಗ ತತ್ ಮತ್ತು ತ್ವಂ ಪದಗಳ ವಾಚ್ಯಾರ್ಥವಾದ ದೇಹೇಂದ್ರಿಯಾದಿಗಳನ್ನೂ ಜಗತ್ಕಾರಣತ್ವಾದಿಗಳನ್ನು ಬಿಟ್ಟು ಕೇವಲ ಸ್ವರೂಪವನ್ನಷ್ಟೇ ಸೂಚಿಸುತ್ತದೆ. ಆಸೂಚ್ಯಾರ್ಥವು ಜೀವ ಪರಮಾತ್ಮರ ಅವಿರುದ್ಧ ಕೇವಲ ಚಿದಾಕಾರವು. ಹೀಗೆ ಚಿನ್ಮಾತ್ರ-ನಾದ ಪರಮಾತ್ಮನ ಐಕ್ಯವೇ ತತ್ವಮಸಿ ವಾಕ್ಯದ ಅರ್ಥವಾಗಿದೆ. ಇದಕ್ಕೆ ಬೇರೆಯಾಗಿ ಅರ್ಥ ಹೇಳಿದರೆ ಅದು ವಾಕ್ಯಾರ್ಥವಾಗದು," ಅಲ್ಲಿಯೇ ಹನ್ನೆರಡನೆಯ ಅಧ್ಯಾಯದಲ್ಲಿ: " ಈ ರೀತಿಯಾಗಿ ನಾನು ಹೇಳಿದ್ದಕ್ಕೆ ಭಿನ್ನವಾಗಿ ಯಾರು ವೇದಾರ್ಥವನ್ನು ಹೇಳುವರೋ ಮಹಾಸಾಹಸಿಕರಾದ ಆ ಅಜ್ಞಾನಿಗಳು ಆಧಾರವಿಲ್ಲದ ಕುರುಡು ಬಾವಿಯಲ್ಲಿ ಬೀಳುವರು. ಎಲೈ ದೇವತೆಗಳಿರಾ; ಅದ್ವೈತವೇ ವೇದಾರ್ಥವೆಂದು ಚೆನ್ನಾಗಿ ತಿಳಿಯಿರಿ. ನಾನು ಹೇಳಿದ್ದು ಸುಳ್ಳಾದರೆ ನನ್ನ ತಲೆಯು ಇಲ್ಲಿಯೇ ಕಳಚಿಬೀಳಲಿ. ನೀವು ಈ ವೇದಾರ್ಥಗಳ ಬಗ್ಗೆ ಸಂಶಯಪಟ್ಟರೆ ನಿಮ್ಮ ತಲೆಯೂ ಕೆಳಗೆಬೀಳುವದು. ಇನ್ನು ಹೇಳಲು ಏನೂ ಉಳಿಯಲಿಲ್ಲ ಶಂಭುವಿನ ಪಾದವನ್ನು ಮುಟ್ಟಿ ಹೇಳುವೆನು." ಎಂದು ಹೇಳಿದೆ. ಶ್ರೀ ಮದ್ಭಗವದ್ಗೀತೆಯಲ್ಲಿಯೂ ಕೇವಲಾದ್ವೈತವೇ ಹೇಳಲ್ಪಟ್ಟಿದೆ; ಹದಿಮೂರನೆಯ ಅಧ್ಯಾಯದಲ್ಲಿ " ಎಲ್ಲಾ ದೇಹ

ಗಳಲ್ಲಿಯೂ ಇರುವ ಕ್ಷೇತ್ರಜ್ಞನಾದ ನನ್ನನ್ನುತಿಳಿ. ಕ್ಷೇತ್ರ ಕ್ಷೇತ್ರಜ್ಞರ ಜ್ಞಾನವು ನಿಜವಾದ ಜ್ಞಾನವೆಂದೆನಿಸುವದು. ಆ ಕ್ಷೇತ್ರವು ಯಾವುದು, ಎಂತಹದು, ಎಂತಹ ವಿಕಾರಹೊಂದುತ್ತದೆ ಎಲ್ಲಿಂದಬಂತು; ಕ್ಷೇತ್ರಜ್ಞನು ಎಂತಹ ಪ್ರಭಾವಶಾಲಿಯು, ಇವೆಲ್ಲವನ್ನೂ ಸಂಕ್ಷಿಪ್ತವಾಗಿ ಹೇಳುತ್ತೇನೆ. ಕೇಳು. ಅನೇಕಋಷಿಗಳೂ ವೇದಗಳೂ ಬ್ರಹ್ಮಸೂತ್ರಗಳೂ ಸರಿಯಾದ ಯುಕ್ತಿಗಳೂ ಈ ವಿಷಯವನ್ನು ಚೆನ್ನಾಗಿ ಹೇಳಿದ್ದಾರೆ." ಮುಂತಾದ ಭಗವಂತನ ವಚನಗಳು ಕ್ಷೇತ್ರಜ್ಞನಾದ ಜೀವನಿಗೆ "ಮಾಂ" ಎಂದು ಬ್ರಹ್ಮಾಭೇದವನ್ನು ಹೇಳಿ ಆ ಅರ್ಥವರ್ಥನ್ನೇ ಬ್ರಹ್ಮಸೂತ್ರಗಳೂ ಹೇಳುತ್ತವೆ, ಎಂದುಹೇಳುತ್ತ ಬ್ರಹ್ಮಸೂತ್ರಗಳಿಗೂ ಕೇವಲಾದ್ವೈತ ಪರತ್ವವನ್ನು ಸಾಧಿಸಿ ಅವರ ಸಮಾನಾರ್ಥವಾದ ಗೀತೆಯೂ ಕೇವಲಾದ್ವೈತ ವಾದದ್ದೆಂದು ಸಿದ್ಧಪಡಿಸುತ್ತವೆ. ಪಾಂಚರಾತ್ರದ ಪಾದ್ಮಸಂಹಿತೆಯಲ್ಲಿ " ಪರಮಾತ್ಮ ಕ್ಷೇತ್ರಜ್ಞರೊಳಗೆ ಐಕ್ಯವನ್ನು ಶ್ರುತಿಯೂ ಹೇಳುತ್ತದೆ. ಕ್ಷೇತ್ರಜ್ಞರನಾನಾತ್ವವು ದೇಹಭೇದದಿಂದ ಭಾಸವಾಗುತ್ತದೆ. ಒಂದೇಮುಖವು ಅನೇಕ ಕನ್ನಡಿಗಳಲ್ಲಿ ನಾನಾರೂಪವನ್ನು ತಳಿಯುವಂತೆ ಈ ಪಾಂಚ--ಭೌತಿಕವಾದ ದೇಹೇಂದ್ರಿಯಗಳ ವಿಭಿನ್ನತೆಯ ಮೂಲಕ ಜೀವನೂ ನಾನಾರೀತಿಯಿಂದ ತೋರುವನು. ಇಂಥ ಕ್ಷೇತ್ರಜ್ಞನ ನಿಜ-ತತ್ವವನ್ನು ಪ್ರಾಜ್ಞರು ತಿಳಿಯುತ್ತಾರೆ." ಇವೇ ಮುಂತಾದ ವಚನಗಳಿಂದ ಕ್ಷೇತ್ರಜ್ಞ ಪರಮಾತ್ಮರ ಐಕ್ಯವನ್ನು ಹೇಳಿರುತ್ತದೆ. ರಾಮಭಕ್ತ ಹನುಮಂತನು ರಚಿಸಿದ ಭಗವದ್ಗೀತೆಯ ಪೈಶಾಚಭಾಷ್ಯದಲ್ಲಿ (ಹನುಮಂತನು ಅರ್ಜುನನಿಗೆ ಗೀತೋಪದೇಶ ವಾಗುವಾಗ ರಥದ ಧ್ವಜ-ದಲ್ಲಿನಿಂತು ಕೇಳಿರುವದರಿಂದ ಅದನ್ನರಿತ ಪರಮಾತ್ಮನು ಹನುಮಂತನಿಗೆ ನೀನು ವೇದಾಂತ-ತತ್ವವನ್ನು ಹೇಳುವ ಗುರುಗಳಿಗಿಂತ ಉಚ್ಚಾಸನದಲ್ಲಿ ಕುಳಿತು ಕೇಳಿದ್ದರಿಂದ ನಿನಗೆ ಧರ್ಮ-ಶಾಸ್ತ್ರದ ಪ್ರಕಾರ ಪಿಶಾಚ ಜನ್ಮಬರುವದೆಂದೂ ಆ ಜನ್ಮವನ್ನು ನೀನು ಕಳೆಕೊಳ್ಳಬೇಕಾದರೆ ಈ ಗೀತೆಗೆ ಭಾಷ್ಯವನ್ನು ಬರೆಯಬೇಕೆಂದೂ ಆಜ್ಞೆಮಾಡಿದ್ದರಿಂದ ಆತನು ಪೈಶಾಚಭಾಷ್ಯ ವೆಂಬ ಹೆಸರಿನ ಭಾಷ್ಯವನ್ನು ಬರೆದು ಆ ಜನ್ಮದಿಂದ ಮುಕ್ತನಾದನೆಂದೂ ವಿದ್ವತ್ಪರಂಪರಾಗತವಾದ ಚರಿತ್ರೆಯಿರುತ್ತದೆ) ಎರಡನೆಯ ಅಧ್ಯಾಯದಲ್ಲಿ " ನಾಸತೋ ವಿದ್ಯತೇ ಭಾವಃ " ಎಂಬ ಶ್ಲೋಕವನ್ನು ವ್ಯಾಖ್ಯಾನ ಮಾಡುವಾಗ " ಇಲ್ಲದ ವಸ್ತುವಿಗೆ--ಹಗ್ಗದಲ್ಲಿ ಕಂಡಹಾವಿನಂತೆ ತೋರಿ ಇಲ್ಲದ ತಾಗುವ ಸ್ವಭಾವವುಳ್ಳ ವಸ್ತುವಿಗೆ--ಭಾವವು--ಇರುವಿಕೆಯು ಇಲ್ಲ; ಮತ್ತು ಪರಮಾರ್ಥವಾಗಿ ಸದ್ರೂಪ ವಸ್ತುವಿಗೆ ಅಭಾವವು ಬರುವದಿಲ್ಲ. ಎಲ್ಲೆಡೆಯಲ್ಲಿಯೂ ಆ ಸದ್ರೂ-ಪಕ್ಕೆ ಚ್ಯೂತಿಯಿಲ್ಲದಿರುವಿಕೆಯೇ ಇದಕ್ಕೆ ಕಾರಣವಾಗಿದೆ. ಹೀಗೆ ಈ ಸತ್--ಅಸತ್ ವಸ್ತು-ಗಳ ನಿರ್ಣಯವನ್ನು ತತ್ವದರ್ಶಿಗಳು ಮಾಡಿದ್ದಾರೆ. ಆದ್ದರಿಂದ ಹೇ ಅರ್ಜುನ ತತ್ವಜ್ಞಾನಿಗಳ ದೃಷ್ಟಿಯನ್ನು ಅನುಸರಿಸಿ ಶೋಕಮೋಹಗಳನ್ನು ಬಿಟ್ಟು ಶೀತ ಉಷ್ಣಗಳನ್ನು ಸೈರಿಸು" ಎಂದು ಹೇಳಿದೆ. ಅಲ್ಲಿಯೇ ಹದಿನೆಂಟನೆಯ ಅಧ್ಯಾಯದಲ್ಲಿ. ಭಕ್ತ್ಯಾ ಮಾಮಭಿಜಾನಾತಿ ಎಂಬ ಶ್ಲೋ-ಕದಲ್ಲಿ ಭಜನೆಯ ಸಾಧನದಿಂದ ಸರ್ವೇಶ್ವರನಾದ ನನ್ನನ್ನು ತಿಳಿಯುತ್ತಾನೆ. ನಾನು ಉಪಾ-ಧಿಯಿಂದ ತೋರುವ ನಾನಾರೂಪದಿಂದಿರುವದನ್ನೂ, ಉಪಾಧಿ ಲಯದಿಂದ ಕೇವಲ ಅದ್ವಿತೀಯನಾಗಿರುವದನ್ನೂ ನಿಜವಾಗಿ ತಿಳಿದರೆ ನನ್ನ ಅಂತರವನ್ನು ಪ್ರವೇಶಿಸಿ ಆತನು ನಾನೇ ಆಗುತ್ತಾನೆ" ಎಂಬುದಾಗಿ ಪ್ರಪಂಚವು ಸುಳ್ಳೆಂದು ಹೇಳುತ್ತ ಜೀವಬ್ರಹ್ಮೈಕ್ಯವನ್ನು ಹೇಳಿದ್ದಾನೆ.

ಯಾಜ್ಞವಲ್ಕ್ಯಸ್ಮೃತಿಯಲ್ಲಿ: ಹೇಗೆ ಒಂದಾದ ಆಕಾಶವು ಘಟಮಠಗಳ ಮೂಲಕ ವಿಭಿನ್ನವಾಗಿ ತೋರುವದೋ, ಸೂರ್ಯನು ಜಲಧಾರೆಗಳಲ್ಲಿ ಹೇಗೆ ಭಿನ್ನವಾಗಿ ತೋರುವನೂ ಹಾಗೆ ಆತ್ಮನು ಒಬ್ಬನಾದರೂ ವಿಭಿನ್ನನಾಗಿ ಕಾಣುವನು." ಮುಂತಾದ ವಚನಗಳಿಂದ ಕೇವಲಾದ್ವೈತವನ್ನೇ ಹೇಳಿದ್ದಾರೆ. ವಿಷ್ಣುಪುರಾಣದ ಆರನೆಯ ಅಂಶದಲ್ಲಿ: ಜೀವನು ಪರಮಾತ್ಮ

ಭಾವವನ್ನು ಪಡೆದು ನಿಜವಾಗಿ ಆತನಿಂದ ಅಭಿನ್ನನಾಗಿರುವನು. ಭೇದವು ಅಜ್ಞಾನದಿಂದ ಬರುವದು. ಈ ಭೇದವನ್ನು ತೋರಿಸುವ ಅಜ್ಞಾನವು ಅತ್ಯಂತನಾಶವನ್ನು ಹೊಂದಿದರೆ ಜೀವ ಬ್ರಹ್ಮರೊಳಗೆ ಭೇದವನ್ನು ಕಲ್ಪಿಸಲು ಶಕ್ಯವಿಲ್ಲ. ನಿರ್ಮಲವಾದ ಜ್ಞಾನರೂಪೀ ಪರಮಾತ್ಮನು ಭ್ರಾಂತಿಯಿಂದಲೇ ವಿಷಯ ರೂಪದಿಂದಲೂ ಕಾಣಿಸಿಕೊಳ್ಳುವನು. ಭೇದವು ಲಯವಾಗಿ ಕೇವಲ ಸತ್ತಾರೂಪವು ಉಳಿದಾಗ ಇಂದ್ರಿಯಗಳಿಗೆ ಗೋಚರಿಸಿದ ಆ ರೂಪವನ್ನು ವೇದ–ಪ್ರಮಾಣದಿಂದಲೇ ತಿಳಿದರೆ ಆ ತಿಳಿವೇ ಬ್ರಹ್ಮಜ್ಞಾನ ವೆಂದೆನಿಸುವದು. ನಾನು ನನದು ಎಂಬುವದೇ ಅವಿದ್ಯೆ ಅದರಿಂದಲೇ ವ್ಯವಹಾರ. ನಾಲಿಗೆಗೂ ಅಗೋಚರವಾದ ಪರಮಾರ್ಥವು ಕೇವಲ ಅನುಭವ ವೇದ್ಯವಾಗಿದೆ," ಮತ್ತು ಮೊದಲನೆಯ ಅಂಶದಲ್ಲಿ. ನಾನು (ಶಿವ) ಹರಿ, ಈ ಜಗತ್ತು, ಕಾರಣ ಕಾರ್ಯಗಳ ಗುಂಪು ಇವೆಲ್ಲವೂ ಒಂದೇ ಎಂಬ ಮನಸ್ಸು ಯಾರಿಗಿರುವದೋ ಅವರು ಪುನಃ ಈ ಸಂಸಾರದ ಸುಖದುಃಖಗಳಿಗೆ ತುತ್ತಾಗರು." ಎಂಬಿವೇ ಮುಂ-ತಾದ ವಚನಗಳಿಂದ ಕೇವಲಾದ್ವೈತವನ್ನೇ ಹೇಳಿದ್ದಾರೆ. ಶ್ರೀ ಮದ್ಭಾಗವತದ ಹನ್ನೊಂದನೆಯ ಸ್ಕಂಧದ ಹನ್ನೊಂದನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣನು ಉದ್ಧವನಿಗೆ ಹೇಳಿದ್ದು :- ಬಂಧ ಮೋ-ಕ್ಷಗಳೆಂಬ ಭೇದವು ವಸ್ತುತಃ ನನಗಿಲ್ಲ. ಮಾಯಾಗುಣಗಳಿಂದ ತೋರುತ್ತಿವೆ. ಆ ಗುಣಗಳೆಲ್ಲವೂ ಸುಳ್ಳಾದ್ದರಿಂದ ನಿಜವಾಗಿಯೂ ನನಗೆ ಬಂಧ ಮೋಕ್ಷಗಳಿಲ್ಲ. ಸ್ವಪ್ನದಲ್ಲಿ ತೋರಿದಂತೆ ಮಾಯೆಯಿಂದ ಆತ್ಮನಲ್ಲಿ ಸುಖ, ದುಃಖ, ಶೋಕ ಮೋಹ, ದೇಹಧಾರಣೆ ಇವೆಲ್ಲವೂಗಳೂ ಭಾಸವಾಗುವವು. ಒಂದೂ ಸತ್ಯವಲ್ಲ. ಎಲೈ ಉದ್ಧವನೇ; ನನ್ನ ಅಂಶನಾದ ಜೀವಿಗೆ ನನ್ನ ಶರೀರದಂತಿ-ರುವ ವಿದ್ಯೆ--ಅವಿದ್ಯೆಗಳಿಂದ ಕ್ರಮವಾಗಿ ಮೋಕ್ಷ--ಬಂಧಗಳು ಕಾಣುವವು; ಎಂದಿದ್ದಾನೆ. ಮೂರನೆಯ ಸ್ಕಂಧದಲ್ಲಿ ಕಪಿಲ ದೇವ ಹೂತಿಯರ ಸಂವಾದದಲ್ಲಿ. ಇಪ್ಪತ್ತೆಂಟನೆಯ ಅಧ್ಯಾ-ಯದಲ್ಲಿ. "ಸರ್ವ ಭೂತಗಳಲ್ಲಿ ಆತ್ಮನನ್ನೂ, ಆತ್ಮನಲ್ಲಿ ಸರ್ವಭೂತಗಳನ್ನೂ ಅಭೇದ ಭಾವನೆಯಿಂದ ಕಾಣಬೇಕು. ಒಂದೇ ದೀಪವು ನಾನಾವರ್ಣದ ಗ್ಲಾಸುಗಳಲ್ಲಿ ನಾನಾಬಣ್ಣದಿಂದ ತೋರುವಂತೆ ಆತ್ಮನು ಪ್ರಕೃತಿಯ ಭಿನ್ನ ಗುಣಗಳಿಂದ ನಾನಾ ರೀತಿಯಲ್ಲಿ ತೋರುತ್ತಾನೆ. ಆದ್ದರಿಂದ ಸದಸದ್ರೂಪವಾದ, ಹೇಳಲು ಬಾರದ ರೂಪವುಳ್ಳ, ಆತ್ಮಾಭಿನ್ನವಾದ ಈ ಪ್ರಕೃತಿಯನ್ನು ಜಯಿಸಿದರೆ ತನ್ನ ನಿಜವಾದ ಸ್ವರೂಪದಿಂದಿರಲುಬಹುದು." ಎಂದು ಹೇಳಿದೆ. ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿ " ಮೂರ್ತಿಗಳಲ್ಲಿ ಭಕ್ತನು ಈಶ್ವರನಾದ ನನ್ನನ್ನು ಪೂಜಿಸಬೇಕು. ಎಲ್ಲಿಯ ತನಕ ನನ್ನನ್ನು ತನ್ನ ಅಂತರ್ಯದಲ್ಲಿ ಕಾಣಲಾರನೋ ಅಲ್ಲಿಯ ತನಕ ಹಾಗೆ ಪೂಜಿಸುತ್ತಿರಬೇಕು. ಸ್ವ--ಪರರಲ್ಲಿ ಭೇದ ದೃಷ್ಟಿಯನ್ನು ಮಾಡಿದರೆ ಮೃತ್ಯು ಭಯವು ತಪ್ಪದು " ಎಂದಿದೆ. ಮೂವತ್ತೆರಡನೆಯ ಅಧ್ಯಾಯದಲ್ಲಿಃ- "ಜ್ಞಾನರೂಪಿಯಾದ ಬ್ರಹ್ಮನಿಗೆ ಪರಮಾತ್ಮಾ, ಈಶ್ವರ, ಪ್ರಮಾನ್, ಮುಂತಾದ ಹೆಸರುಗಳುಂಟು. ಆತನು ಕಾಣು-ತ್ತಿರುವ ಈ ನಾನಾ ರೂಪದ ವಸ್ತುಗಳಂತೆ ತೋರುವನು. ಇದನ್ನರಿತು ಎಲ್ಲ ವಿಷಯಗಳಿಂದಲೂ ಅನಾಸಕ್ತನಾಗುವದೇ ಪೂರ್ಣಯೋಗ" ವೆಂದು ಹೇಳಿದೆ. ಅದರಿಂದಲೇ ಆತನ ಇಷ್ಟಾರ್ಥವು ಲಭಿಸುವದು. ಜ್ಞಾನಸ್ವರೂಪದ--ಒಂದೇಒಂದಾದ ನಿರ್ಗುಣ ಬ್ರಹ್ಮನು ಬಹಿರ್ಮುಖವಾದ ಇಂದ್ರಿಯಗಳಿಂದ ಶಬ್ದಸ್ಪರ್ಶಾದಿ ಗುಣಗಳುಳ್ಳ ವಿಷಯಗಳ ರೂಪದಿಂಡ ತೋರು-ತ್ತಾನೆ. " ಎಂದು ಹೇಳಿದೆ. ಮೂವತ್ಮೂರನೆಯ ಅಧ್ಯಾಯದಲ್ಲಿ. " ಯುಕ್ತವಾದ ಅನುಷ್ಠಾನದಿಂದಲೂ, ಭಕ್ತಿ ಪ್ರವಾಹದಿಂದಲೂ, ಬಲವಾದ ವೈರಾಗ್ಯದಿಂದಲೂ, ಬ್ರಹ್ಮ ತತ್ವಜ್ಞಾನದಿಂದಲೂ, ಪರಿಶುದ್ಧವಾದ ಬುದ್ಧಿಯುಳ್ಳವನಾಗಿ, ಸರ್ವಭೂತಗಳ ಆಧಾರನಾದ ಆತ್ಮನನ್ನು ಆತನ ಜೀವಭಾವವನ್ನೇ, ಮರೆತು ಸಮಾಧಿಯಲ್ಲಿ ಮಾಯಗುಣಗಳನ್ನು ಲಯಮಾಡಿ, ಸ್ವಪ್ನವನ್ನು ಕಂಡವನು ಎಚ್ಚತ್ತಂತೆ ನೋಡಬೇಕು. " ಎಂದು ಹೇಳಿದೆ. ಈ ಮುಂತಾದ ಅನೇಕ ವಚನಗಳಿಂದ ಅಲ್ಲಿಯೂ ಕೇವಲ ಅದ್ವೈತವೇ ಪ್ರತಿಪಾದಿತ ವಾಗಿದೆ.

ಹೀಗೆ ಹಿಂದೆ ಆದಂತೆ ಕಪಿಲನೇ ಮುಂತಾದ ಮಹರ್ಷಿಗಳ ಸೂತ್ರಗಳ ಆಧಾ-ರದ ಮೇಲಿಂದಲೂ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳ ಪ್ರಮಾಣದಿಂದಲೂ ಕೇವಲಾ-ದ್ವೈತವೇ ವ್ಯಾಸ ಸಮ್ಮತವೆಂದು ನಿರ್ಣಯವಾಗುವದರಿಂದ " ಕೆಲವು ವೇದಭಾಗಗಳು ಸತ್ಯಾದ್ವೈತವನ್ನೂ, ಕೆಲವು ವೇದಭಾಗಗಳು ಕಲ್ಪಿತ ದ್ವೈತವನ್ನೂ ಹೇಳುತ್ತಿವೆ " ಎಂಬ ಸೂತಸಂಹಿತಾವಚನದಂತೆ ಕಾಣುವ ಭೇದವನ್ನೂ ಹೇಳುತ್ತಿರುವ ಶ್ರುತಿ, ಸ್ಮೃತಿ, ಸೂತ್ರ ಇತಿಹಾಸ, ಪುರಾಣಗಳಿಗೆ ಕಪಿಲ ಅದ್ವೈತ ವಿಷಯವನ್ನು ವ್ಯವಸ್ಥಾಪಿಸುವದು ಯುಕ್ತವಾಗಿದೆ. ಆದ್ದರಿಂದಲೇ ಸಾಕ್ಷಾತ್ ಪರಮೇಶ್ವರನ ಅವತಾರರೂಪರಾದ ಸರ್ವಜ್ಞರಾದ ಶ್ರೀ ಶಂಕರ ಭಗವತ್ಪಾದರಿಂದ ಶ್ರುತಿ, ಸೂತ್ರ, ಸನತ್ಸುಜಾತೀಯ, ವಿಷ್ಣು ಸಹಸ್ರನಾಮಾದಿ ಭಾಷ್ಯಗಳಲ್ಲಿ ಕೇವಲಾದ್ವೈತವೇ ಉಕ್ತವಾಣೆ ಎಂದು ಹೇಳಲ್ಪಟ್ಟಿದೆ. ಈ ಮಾತನ್ನು ಆದಿತ್ಯ ಪುರಾಣದಲ್ಲಿ " ಶಂಕರನು ವ್ಯಾಸಸೂತ್ರಗಳನ್ನು ವ್ಯಾಖ್ಯಾನಮಾಡುತ್ತ ಯಾವಅರ್ಥವನ್ನು ಹೇಳುವನೋ ಅದೇ ಶ್ರುತಿಗಳಿಗೆ ಅರ್ಥವಾಗಿರುತ್ತದೆ" ಎಂದು ಸ್ಪಷ್ಟವಾಗಿಯೇ ಹೇಳಿದೆ; ಮತ್ತು ಕೂರ್ಮ ಪುರಾಣದಲ್ಲಿ " ಭಕ್ತರ ಹಿತಕ್ಕಾಗಿ ನೀಲಲೋಹಿತನಾದ ಶಂಕರನು ಅವತಾರಮಾಡಿ ಶ್ರೌತ-ಸ್ಮಾರ್ತ ಮಾರ್ಗವನ್ನು ಸ್ಥಾಪಿಸುತ್ತ ಬ್ರಹ್ಮತತ್ವವನ್ನು ಬೋಧಿಸುವ ಶಾಸ್ತ್ರವನ್ನು ಉಪದೇಶಿ-ಸುವನು " ಎಂದು ಹೇಳಿದೆ.

ಆದ್ದರಿಂದ ಸಕಲ ಶ್ರುತಿ, ಸ್ಮೃತಿ, ಸೂತ್ರ, ಇತಿಹಾಸ, ಪುರಾಣಗಳ ತಾತ್ಪರ್ಯಕ್ಕೆ ವಿಷಯವಾದ ಸಜಾತೀಯ, ವಿಜಾತೀಯ, ಸ್ವಗತ ಭೇದವಿಲ್ಲದೆ (ಸಜಾತಿಯ ಭೇದವೆಂದರೆ ಒಬ್ಬ ಮಾನವನಿಗೆ ಮತ್ತೊಬ್ಬ ಮಾನವನಿಂದ ಇರುವ ಭೇದ. ವಿಜಾತೀಯ ಭೇದವೆಂದರೆ ಮಾನವನಿಗೆ ಪಶುಗಳಿಂದ ಇರುವಭೇದ. ಸ್ವಗತ ಭೇದವೆಂದರೆ ಮಾನವನಿಗೆ ತನ್ನ ಕೈ, ಕಾಲು, ಕಣ್ಣು, ಮೂಗು ಮುಂತಾದವುಗಳಿಂದ ಇರುವ ಭೇದ. ಈ ಮೂರೂ ತರಹದ ಭೇದಗಳು ಬ್ರಹ್ಮನಲ್ಲಿ ಇಲ್ಲ) ನಿತ್ಯನೂ, ಶುದ್ಧನೂ, ಮುಕ್ತನೂ ಆದ ಸಚ್ಚಿದಾನಂದ ಘನರಸವೇ ಪರ-ಬ್ರಹ್ಮ ಎಂದು ಸಿದ್ಧವಾಗುವದು.

ಆದರೆ ಕೇವಲಾದ್ವೈತವು ವ್ಯಾಸಾಭಿಮತವೆಂದು ಸಿದ್ಧವಾದಾಗ ರಾಮಾನುಜ, ಮಧ್ವಾದಿ ಮತಗಳ ಖಂಡನೆಯಾದರೂ ಕಪಿಲ ಕಣಾದಾದಿ ಮತಗಳನ್ನು ನಿರಾಕರಿಸಿದ ಹೊರತು ಕೇವಲಾದ್ವೈತವು ಸಿದ್ಧಿಸುವಬಗೆ ಹೇಗೆ ? ಕಪಿಲಾದಿಗಳು ತಮ್ಮ ಶಾಸ್ತ್ರಗಳಲ್ಲಿ ಕೇವಲಾದ್ವೈತವನ್ನು ಅನುವಾದಮಾಡಿ ಖಂಡಿಸಿಲ್ಲವೇ ?

ನಿಜ. ಈಗ ನಾವು ಹೊರಟಿರುವದು ವ್ಯಾಸರ ಪ್ರತಿವಾದಿಗಳಾದ ಕಪಿಲಾದಿಗಳನ್ನು ದೂಷಿಸಲಿಕ್ಕಿಲ್ಲ. ಅವರುಮಾಡಿದ ಅನುವಾದದ ಪ್ರಾಮಾಣ್ಯದಿಂದ ವ್ಯಾಸರ ಅಭಿಪ್ರಾಯವನ್ನು ನಿರ್ಧರಿಸಲೋಸುಗ. ಅದು ನಿಶ್ಚಿತವಾದಮೇಲೆ ವ್ಯಾಸಶಿಷ್ಯರಾಗಿ ಅವರ ಮತವನ್ನು ಪ್ರಚಾರ ಮಾಡಲು ಹೊರಟ ಎಲ್ಲರೂ ಕಪಿಲಾದಿ ಮತಗಳನ್ನು ನಿರಾಕರಿಸಿ ಕೇವಲಾದ್ವೈತವನ್ನು ಸ್ಥಾಪಿ-ಸಲು ಪ್ರಯತ್ನಿಸಬೇಕಾಗಿರುವದರಿಂದ ಆ ಭಾರವು ನಮ್ಮೊಬ್ಬರ ಮೇಲೆಯೇ ಇರುವದಿಲ್ಲ; ಮತ್ತು ಶಾಂಕರಭಾಷ್ಯ, ವಿವರಣ, ಭಾಮತೀ, ಪರಿಮಲ, ಪಂಚದಶೀ, ಮುಂತಾದ ಅನೇಕ ಗ್ರಂಥಗಳಲ್ಲಿ ಕಪಿಲಾದಿ ಮತಗಳನ್ನು ಖಂಡಿಸಿ ಕೇವಲಾದ್ವೈತವನ್ನು ಸ್ಥಾಪಿಸಿದ್ದಾರೆ.

ಅಭೇದ ಶ್ರುತಿ--ಯುಕ್ತಿ. ಅನುಭವಗಳಿರುವಂತೆ ಭೇದ ಶ್ರುತಿ--ಯುಕ್ತಿ ಅನುಭವಗಳೂ ಇರುವಾಗ ಸೂತ್ರಭಾಷ್ಯಾದಿಗಳಲ್ಲಿ ಕೇವಲಾದ್ವೈತವನ್ನೇ ಹೇಗೆ ಸ್ಥಾಪಿಸಿದರು ?

" ಏಕತ್ವವನ್ನು ಕಂಡವನಿಗೆ ಶೋಕ ಮೋಹಗಳಿಲ್ಲ, ಎರಡನೆಯ ವಸ್ತುವಿನಿಂದ ಭಯ, ಎಂದು ಮುಂತಾಗಿ ಶ್ರುತಿಗಳು ಅದ್ವೈತವನ್ನು ಹೇಳುತ್ತಿವೆಯಾದ್ದರಿಂದ ಏಕತ್ವವೇ ಸತ್ಯವಾದ ಅರ್ಥ. ಸ್ತುತಿ ನಿಂದೆಗಳು ಭೇದವನ್ನೊಪ್ಪಿದರೆ ಕೂಡುವದಿಲ್ಲ. " ಎಂಬ ಸೂತ-ಸಂಹಿತಾ ವಚನದಂತೆ ಶ್ರುತಿಗಳಲ್ಲಿ ಭೇದವನ್ನು ನಿಂದಿಸಿ ಅಭೇದವನ್ನು ಸ್ತುತಿಸಲು ಭೇದವಾದಿಗಳು ಹೇಳಲ್ಪಟ್ಟಿವೆ. ಅಭೇದ ಶ್ರುತಿಗಳು ಉಪಕ್ರಮವೇ ಮುಂತಾದ ಆ ವಿರುದ್ಧವಾದ ತಾತ್ಪರ್ಯನಿರ್ಣಯ ಪ್ರಮಾಣಗಳಿಂದ ಪ್ರಬಲವಾಗಿವೆ. ಭೇದಶ್ರುತಿಗಳು ದುರ್ಬಲವಾಗಿವೆ. ಅಂತೂ " ನಾರಾಯಣನ ಅಂಶಾವತಾರವೆಂದೆಣಿಸಿದ ಆ ಬಾದರಾಯಣರು ಶಂಕರನ ಆಜ್ಞೆಯ ಮೇರೆಗೆ ಆ ವೇದಾಂತ ವಾಕ್ಯಗಳನ್ನು ಅರ್ಥಮಾಡಿ ಸೂತ್ರರೂಪದಿಂದ ಬರೆದರು " ಎಂಬ ಸೂತಸಂಹಿತಾ ವಚನದಂತೆ ವ್ಯಾಸಸೂತ್ರಗಳು ವೇದಾಂತಗಳ ಅರ್ಥವನ್ನು ಹೇಳಲು ಸರ್ವಥಾ ತೊಡಗಿರುವದರಿಂದ ವ್ಯಾಸಾಭಿಮತವಾದ ಕೇವಲಾದ್ವೈತವು ಸಕಲ ಶ್ರುತಿಗಳಿಗೂ ಒಪ್ಪಿದ ವಿಷಯವೆಂದು ಮನಸ್ಸಿಲ್ಲದಿದ್ದರೂ ಹೇಳಬೇಕಾಗುತ್ತದೆ.

ಕಪಿಲ, ಕಣಾದ, ಗೌತಮ, ಪತಂಜಲಿ, ಜೈಮಿನಿ ಇವರೆಲ್ಲರೂ ಸರ್ವಜ್ಞರು ಇವರೆಲ್ಲರೂ ದ್ವೈತವಾದಿಗಳು. ಆದ್ದರಿಂದ ದ್ವೈತವಾದಕ್ಕೆ ಬಹುಮತವಿದೆಯೆಂದಾಯಿತು ಹೀಗಿರಲು ವ್ಯಾಸರೊಬ್ಬರು ಅದ್ವೈತವಾದವನ್ನು ಹೇಳಿದರೆ ಕೂಡಲಾರದು. " ನೂರೂಜನ ಕುರುಡರು ವಸ್ತ್ರವನ್ನು ಕಾಣರು " ಎಂಬ ನಾಣ್ಣುಡಿಯು ಸರ್ವಜ್ಞರಾದ ಕಪಿಲಾದಿಗಳಲ್ಲಿ ಹೊಂದದು. ಎಂಬ ಶಂಕೆಗೆ ಏನು ಉತ್ತರ ?

ನಿಜ: ಕಪಿಲರೂ ಸರ್ವಜ್ಞರು, ಕಣಾದರೂ ಸರ್ವಜ್ಞರು. ಆದರೆ ಒಬ್ಬರು ಪ್ರಕೃತಿಯೇ ಜಗತ್ಕಾರಣವೆಂದರೆ ಮತ್ತೊಬ್ಬರು ಪರಮಾಣುಗಳೇ ಜಗನ್ನಿಧಾನ ವೆನ್ನುವರು. ಹೀಗೆ ಆ ಎಲ್ಲಾ ಸರ್ವಜ್ಞರೂ ಭಿನ್ನಮತದವರು. ಇದು ಹೊಂದುವದು ಹೇಗೆ ? ಇದರಿಂದ ಬಹುಮತವು ಸಿಕ್ಕಂತಾಯಿತೇ ? " ಕಪಿಲರು ಸರ್ವಜ್ಞರಾದರೆ ಕಣಾದರು ಸರ್ವಜ್ಞರಲ್ಲ ಎನ್ನುವಂತೆಯೂ ಇಲ್ಲ; ಅವರಿಬ್ಬರೂ ಸರ್ವಜ್ಞರಾದರೆ ಮತಭೇದವೇಕೆ ? " ಎಂಬ ಮಹಾತ್ಮರ ವಚನವು ನಮ್ಮ ಮಾತನ್ನೇ ಪೋಷಿಸುವದು.

ಕಪಿಲ, ಕಣಾದ, ಗೌತಮ, ಪತಂಜಲಿ, ಜೈಮಿನಿ, ವ್ಯಾಸರು, ಇವರ ದರ್ಶನಗಳಾರು ಎಂಬ ಮಾತಿನಂತೆ ಆರು ದರ್ಶನಗಳಲ್ಲಿ ಯಾವದೋ ಒಂದರ್ಥ ಅವರೆಲ್ಲರಿಗೂ ಒಮ್ಮತವಾದದ್ದೆಂದು ಸ್ವೀಕರಿಸಲೇಬೇಕು. ಅಲ್ಲದಿದ್ದರೆ ಆ ಎಲ್ಲ ಪರಸ್ಪರ ವಿರುದ್ಧ ಮತಗಳೂ ಅವುಗಳನ್ನು ಪ್ರಚಾರಪಡಿಸಿದ ಅವರೆಲ್ಲರೂ ಭ್ರಾಂತರೆಂದೆನ್ನಬೇಕಾಗುವದು. ಅದು ಸರಿಯಲ್ಲ. ಯಾವದನ್ನು ಒಪ್ಪಿದರೆ ಅವರೆಲ್ಲರೂ ಅಭ್ರಾಂತರೆಂದು ಸಿದ್ಧವಾಗುವದೋ ಅದನ್ನು ನಾವು ಅಂಗೀಕರಿಸಬೇಕಾಗಿದೆ, ಹೀಗಿರುವಲ್ಲಿ ಕಪಿಲ ಕಣಾದಾದಿ ಶಾಸ್ತ್ರಸಿದ್ಧವಾದ ದ್ವೈತವು ಶ್ರುತಿವಿರುದ್ಧವಾದ್ದರಿಂದ ಸಕಲ ವೇದಾಂತಗಳ ಮಹಾತಾತ್ಪರ್ಯ ವಿಷಯವಾದ ವ್ಯಾಸಮಹರ್ಷಿಗಳ ಸಿದ್ಧಾಂತವೆಂದು ಸರ್ವಾನುಮತವಾದ ಕೇವಲಾದ್ವೈತವನ್ನೊಪ್ಪಿದರೆ ಉಳಿದೆಲ್ಲರಿಗೂ ಅದೇ ಒಪ್ಪಿತವಾದದ್ದೆಂಬುವದರಲ್ಲಿ ವಿವಾದ ಬರಲಾರದು; ಕಪಿಲಾದಿಗಳು ಅಭ್ರಾಂತರೆಂಬದು ಸಿದ್ಧವಾಗುವದು. ಇದನ್ನೀಗ ವಿವರಿಸುವೆವು.

ನಿಜವಾಗಿ ಕಪಿಲಾದಿ ಋಷಿಗಳಿಗೂ ಕೇವಲಾದ್ವೈತದಲ್ಲಿಯೇ ಒಪ್ಪಿಗೆಯಿತ್ತೆಂದು ಶ್ರೀ ಭಾಗವತಾದಿ ಪುರಾಣಗಳ ವಿಮರ್ಶೆಯಿಂದ ತಿಳಿದು ಬರುವದು.

ಶ್ರೀ ಮದ್ಭಾಗವತದ ಮೂರನೆಯ ಸ್ಕಂದದಲ್ಲಿ " ಜ್ಞಾನರೂಪಿಯಾದ, ಪರಬ್ರಹ್ಮ, ಪರಮಾತ್ಮಾ, ಈಶ್ವರ, ಪುರುಷ ಮುಂತಾದ ಶಬ್ದಗಳಿಗೆ ವಾಚ್ಯನಾದ ಭಗವಂತನೊಬ್ಬನು (ದೃಶ್ಯ) ಕಾಣುವದು. (ದೃಷ್ಟಾರ) ಕಾಣುವವ (ದೃಷ್ಟಿ) ಕಾಣುವಿಕೆ ಮುಂತಾದ ನಾನಾರೂಪವನ್ನು ತಳೆಯುವನು. ಜ್ಞಾನರೂಪೀ ಒಬ್ಬ ನಿರ್ಗುಣ ಬ್ರಹ್ಮನು ಬಹಿರ್ಮುಖವಾದ ಇಂದ್ರಿಯಗಳ ಮೂಲಕ ಶಬ್ದ, ಸ್ಪರ್ಶ ಮುಂತಾದ ಗುಣಗಳುಳ್ಳವನಾಗಿ ಆಕಾಶಾದಿ ಪಂಚಭೂತ ರೂಪದಿಂದ ತೋರುತ್ತಾನೆ. " ಇವೇ ಮೊದಲಾದ ಈ ಹಿಂದೆ ಉದಾಹರಿಸಿದ ವಚನಗಳಿಂದ ಕಪಿಲರಿಗೂ ಕೇವಲಾದ್ವೈತವೇ ಮುಖ್ಯ ತಾತ್ಪರ್ಯ ವಿಷಯವಾಗಿತ್ತೆಂದು ತಿಳಿಯತ್ತದೆ.

ಬ್ರಹ್ಮವೈವರ್ತ ಪುರಾಣದಲ್ಲಿ ಗೌತಮರು ಹೇಳಿದ್ದು " ಸ್ವಪರಭೇದವಿಲ್ಲದ, ಮುಖ್ಯ ತತ್ವರೂಪದ, ಸ್ವಯಂ ಭಾಸಕವಾದ ಶಂಭುವಿಗೆ ನಮಸ್ಕಾರವು. ಆ ಶಂಭುವಿನ ಕಾರ್ಯವು ಚಿಚ್ಛಕ್ತಿ, ಜಡಶಕ್ತಿಗಳೆಂದು ಎರಡು ರೂಪದಿಂದಿದೆ. ಯಾರು ಆ ಈಶದ ನಿಜಸ್ವರೂಪವನ್ನು ಬೇರ್ಪಡಿಸದೇ ಕಾಣುವರೋ ಆ ಅದ್ವೈತರೂಪಿಯಾದ ಪರಮೇಶ್ವರನಿಗೆ ನನ್ನ ನಮಸ್ಕಾರವು. ನೀಚ ಮಧ್ಯಮ ಉತ್ತಮ ಜೀವಿಗಳು ಯಾರೂ ಯಾವನಿಂದ ಬೇರೆ ಇರಲಾರರೋ ಅಂಥ ಸಾಂಬಶಿವನಿಗೆ ವಂದನೆ. ಯಾವಾತನ ಇರುವಿಕೆಯಿಂದಲೇ ಜಗತ್ತಿಗೆ ಇರುವಿಕೆಯೋ ಯಾವನ ಬೆಳಕಿಂದಲೇ ಜಗತ್ತು ಬೆಳಗುವದೋ ! ಆದಿತ್ಯ, ಚಂದ್ರ, ಅಗ್ನಿ ಮೊದಲಾದ ಎಲ್ಲ ಜ್ಯೋತಿರ್ವಸ್ತುಗಳೂ, ಯಾವನ ಬೆಳಕಿನಿಂದಲೇ ಪ್ರಕಾಶಿಸುವವೋ. ಆ ಪರಮಾತ್ಮನಿಗೆ ನಮಸ್ಕಾರ. ಯಾರು ಸ್ವತಃ ಪರಮಾನಂದ ರೂಪದಿಂದಿದ್ದು ಸರ್ವಜಂತುಗಳಲ್ಲಿಯೂ ಆನಂದರೂಪದಿಂದಲೇ ವ್ಯಾಪಿಸಿರುವನೋ, ಆತನಿಗೆ ನಮಸ್ಕಾರವು. " ಈ ಮುಂತಾದ ವಾಕ್ಯಗಳಿಂದ ಗೌತಮರಿಗೂ ಕೇವಲಾದ್ವೈತವೇ ಸಮ್ಮತವಾಗಿತ್ತೆಂದು ತಿಳಿಯುತ್ತದೆ.

ಶೈವ ಏಕಾದಶ ರುದ್ರಸಂಹಿತೆಯಲ್ಲಿ ವ್ಯಾಸ ಜೈಮಿನಿ ಸಂವಾದದಲ್ಲಿ ಜೈಮಿನಿಯ ಮಾತು " ಸ್ವಾಮಿ ನಾನು ತಮ್ಮ ಪಟ್ಟದಶಿಷ್ಯನಾದರೂ ನನಗೆ ಅಪರೋಕ್ಷಜ್ಞಾನವಿಲ್ಲ. ನನ್ನ ಮೇಲೆ ಕೃಪೆಯಿಂದ ಮೋಕ್ಷೋಪಾಯವನ್ನು ತಿಳಿಸಿರಿ. ವ್ಯಾಸರು ಅದಕ್ಕೆ ಉತ್ತರಿಸುತ್ತ " ನೀನು ಕೇಳಿದ್ದು ನಿನ್ನೊಬ್ಬನಿಗಾಗದೇ ಸಕಲಲೋಕ ಹಿತಕ್ಕೂ ಅನುಕೂಲವಾಗಿದೆ. ಅದ್ದರಿಂದ ನಿನಗೂ ಲೋಕಕ್ಕೂ ಹಿತವಾದ ಈ ವಿಷಯವನ್ನು ಪರಮೇಶ್ವರನ ಅನುಗ್ರಹದಿಂದ ಸಕಲವನ್ನೂ ತಿಳಿದ ನಾನು ಹೇಳುವೆನು. ಮುಕ್ತಿಗೆ ಜ್ಞಾನವನ್ನುಳಿದು ಬೇರೆ ಏನೂ ಕಾರಣವಿಲ್ಲ. ಕರ್ಮಗಳಿಂದ ಮೋಕ್ಷವು ಲಭಿಸದು. ಜ್ಞಾನವೆಂದರೆ ವೇದಾಂತಗಳಿಂದಲೇ ಬಂದ ಜ್ಞಾನವು. ಇತರ ಜ್ಞಾನಗಳು ಅಜ್ಞಾನಗಳು. ಜೀವಬ್ರಹ್ಮೈರ ವಿಷಯಕವಾದ. ಜ್ಞಾನವೇ ಜ್ಞಾನ, ಹೊರತು ಬೇರೆ ಯಾವದೂ ಜ್ಞಾನವಲ್ಲ. ಆ ಜ್ಞಾನವು ಶಂಭುಪ್ರಸಾದ ಗುರುವಿನ ಅನುಗ್ರಹ ಇವುಗಳಿಂದ ಬರುವದು; ಮತ್ತು ವೇದಾಂತವಾಕ್ಯಗಳ ತಾತ್ಪರ್ಯ ವಿಚಾರಣೆಯ ರೂಪವಾದ ವೇದಾಂತಶ್ರಾವಣದಿಂದಲೂ ಬರುವದು. " ಎಂಬಿವೇ ಮುಂತಾದ ವಚನಗಳಿಂದ ಜೈಮಿನಿ ಮಹರ್ಷಿಗಳಿಗೂ ಕೇವಲಾದ್ವೈತವೇ ಅನುಮತವಾಯಿತೆಂದು ಸ್ಪಷ್ಟವಾಗುವದು.

ಸ್ಕಂದಪುರಾಣದಲ್ಲಿ ಶೇಷ--ಶಿವಸಂವಾದವನ್ನು ನೋಡಿರಿ. ಶಿವ- ಜನರಿಂದ ಅಳೆಯಲಾಗದ, ಅತಿಗುಪ್ತವಾದ, ಸ್ವಯಂ ಅನುಭವದಿಂದಲೇ ತಿಳಿದುಬರುವ ನನ್ನ ನಿಜಸ್ವರೂಪವನ್ನು

ಹೇಳುವೆನು, ಕೇಳು ಈ ಕಾಣುವಜಗತ್ತು ಮಾಯೆಯಿಂದ ಹುಟ್ಟಿದ್ದು, ಆ ಮಾಯೆಯು ಮಣ್ಣಿನಿಂದ ನಾನಾತರಹದ ಪಾತ್ರೆಗಳನ್ನು ತಯಾರಿಸಿದಂತೆ ಜೀವಿಗಳಿಗೆ ಜನನ, ಮರಣ, ಸುಖ, ದುಃಖ, ಅವುಗಳ ಭೀತಿಯನ್ನೂ ರಾಗದ್ವೇಷವನ್ನೂ ಕಲ್ಪಿಸುತ್ತದೆ. ಮಾಯೆಯಿಂದಲೇ ಸೃಷ್ಟಿ ಪ್ರಲಯಗಳಾಗುವವು. ನನಗೆ ಸಗುಣ ನಿರ್ಗುಣ ಎಂಬ ಎರಡು ರೂಪಗಳಿವೆ. ಸಗುಣರೂಪವು ಯೋಗಿಗಳಿಗೆ ಕಾಣುವದು. ನಿರ್ಗುಣರೂಪವು ಸುಲಭವಾಗಿ ಕಾಣುವದಿಲ್ಲ. ಧ್ಯಾನಮಾಡಲೂ ಅರ್ಹವಲ್ಲ ಆದರೂ ಯಾರು ತಮ್ಮ ಬುದ್ಧಿಯನ್ನು ಬಹುಸೂಕ್ಷ್ಮವಾಗಿರಿಸುವರೋ ಮಾನಾಪಮಾನ ಲಾಭಾ ಲಾಭ ಮುಂತಾದ ದ್ವಂದ್ವಗಳನ್ನು ಬಿಟ್ಟು ಅಹಂಕಾರದಿಂದ ದೂರಾಗಿ ಕಲಕಲ್ಮಷದಿಂದದೂರವಾಗುವರೋ ಅವರು ನನ್ನನ್ನು ಕಾಣುವರು. ಅತ್ರಿಮಹರ್ಷಿಗಳೂ ಅವರ ಧರ್ಮಪತ್ನಿ ಅನಸೂಯೆಯೂ ನಿನ್ನನ್ನು ಪುತ್ರನನ್ನಾಗಿ ಪಡೆಯಲು ಮಹಾವಿಷ್ಣುವನ್ನು ಪೂಜಿಸಿದ್ದರು. ಆಗ ಆ ವಿಷ್ಣುವು ಪ್ರೀತನಾಗಿ ನಿನ್ನನ್ನು ಆ ದಂಪತಿಗಳಿಗೆ ಪುತ್ರನನ್ನಾಗಿ ಕೊಟ್ಟನು ಜನ್ಮ ಸ್ವೀಕರಿಸಲು ಭೀತನಾದ ನೀನು, ಸ್ನಾನಮಾಡುತ್ತಿರುವ ಅನಸೂಯೆಯ ಬೊಗಸೆಯಲ್ಲಿ ಐದು ಹೆಡೆಗಳಿಂದ ಶೋಭಿಸುತ್ತಿರುವ ಬಾಲರೂಪದಿಂದ ಕಾಣಿಸಿಕೊಂಡೆ. ಭಯಗೊಂಡ ಆ ಅನಸೂಯೆಯು ನಿನ್ನನ್ನು ಭೂಮಿಯಲ್ಲಿ ಚೆಲ್ಲಿದಳು. ಅಂಜಲಿಯಿಂದ ಭೂಮಿಗೆ ಬಿದ್ದುದರಿಂದ ನಿನಗೆ ಪತಂಜಲಿ ಎಂಬ ಹೆಸರು ಬಂದಿದೆ. ಇಂದು ನೀನು ಸೂಕ್ಷ್ಮಬುದ್ಧಿಯಿಂದ ನನ್ನನ್ನು ಧ್ಯಾನಿಸುತ್ತ ತತ್ವೈಕ್ಯವನ್ನುಕಂಡೆ. " ಮುಂತಾದ ವಾಕ್ಯಗಳಿಂದ ಪತಂಜಲಿ ಮಹರ್ಷಿಗಳಿಗೂ ಕೇವಲಾದ್ವೈತವೇ ಅಭಿಮತವೆಂದು ಕಂಡುಬರುತ್ತದೆ. ಇದರಂತೆ ಕಣಾದರ ಅಭಿಮತವೂ ಇರುವದರಲ್ಲಿ ಸಂಶಯವಿಲ್ಲ. ಆದ್ದರಿಂದ ಕಪಿಲಾದಿಗಳೆಲ್ಲರಿಗೂ ಕೇವಲಾದ್ವೈತವೇ ಒಪ್ಪಿತವಾದದ್ದೆಂದು ಹೇಳಿದರೆ ಯಾರಿಗೂ ಭ್ರಾಂತಿ ಕಲ್ಪನೆ ಮಾಡಿದಂತಾಗುವದಿಲ್ಲ.

ಹಾಗಾದರೆ ಅವರೆಲ್ಲರೂ ವ್ಯಾಸಮತವೆಂದು ತಿಳಿದು ಕೇವಲಾದ್ವೈತವನ್ನು ನಿರಾಕರಿಸುವ ಸಂಭವವಿಲ್ಲದಿರುವದರಿಂದ ಅವರ ಅನುವಾದವನ್ನೇ ಹೇತುವಾಗಿಟ್ಟುಕೊಂಡು ವ್ಯಾಸತಾತ್ಪರ್ಯ ನಿರ್ಣಯಕ್ಕಾಗಿ ಹೊರಟ ನಿಮ್ಮ ಪ್ರಯತ್ನವು ವಿಫಲವಾಯಿತಲ್ಲವೇ ?

ಇಲ್ಲ. ಅವರಿಗೆ ಮುಖ್ಯವಾಗಿ ಒಪ್ಪಿದ್ದು ಕೇವಲಾದ್ವೈತವಾದರೂ ತಾವು ಪ್ರಚಾರ ಮಾಡಲು ಹೊರಟ ಸಿದ್ಧಾಂತದ ಮೇಲಿನ ಆವೇಶದಿಂದ ಕೇವಲಾದ್ವೈತವನ್ನು ಅನುವಾದ ಮಾಡಿ ಖಂಡಿಸಬಹುದಾಗಿದೆ. ಅಭಿಯುಕ್ತರಾದವರು ಬೇರೆ ಸಿದ್ಧಾಂತವನ್ನು ಮಂಡಿಸುವಾಗ ಸ್ವಮತವನ್ನು ನಿರಾಕರಿಸಿದ ಉದಾಹರಣೆಯುಂಟು. ವಾಲ್ಮೀಕಿರಾಮಾಯಣದಲ್ಲಿ ರಾಮ ಮತ್ತು ಜಾಬಾಲಿ ಸಂವಾದದಲ್ಲಿ. " ಪಿತೃಗಳಿಗಾಗಿ ಶ್ರಾದ್ಧ ಮಾಡುವದು ಜನರಲ್ಲಿ ಹೆಚ್ಚಿಹೋಗಿದೆ. ಇದೊಂದು ಅನ್ನದ ಉಪದ್ರವ. ಸತ್ತವರೆಂದಿಗೂ ಉಣ್ಣಲಾರರು. ಒಮ್ಮೆ ಇಲ್ಲಿ ಬ್ರಾಹ್ಮಣರು ಉಂಡಿದ್ದು ಆ ಪಿತೃಗಳಿಗೆ ಮುಟ್ಟುವದಾದರೆ ದೇಶಸಂಚಾರಕ್ಕಾಗಿ ಹೋದವನಿಗಾಗಿ ಮನೆಯಲ್ಲಿದ್ದವರು ಊಟಮಾಡಿ ಅತನ ತೃಪ್ತಿಗೆ ಕಾರಣರಾಗಬಹುದಿತ್ತು. ಬುದ್ಧಿಶಾಲಿಗಳಾದವರು ದಾನ, ಯಜ್ಞದೀಕ್ಷೆ, ಮುಂತಾದವುಗಳನ್ನು ಪ್ರಚಾರಮಾಡಿ ಉದರ ಪೋಷಣದ ಯುಕ್ತಿ ಹೂಡಿದ್ದಾರೆ. ರಾಮ; ಪರಲೋಕವಿಲ್ಲವೆಂಬುದನ್ನು ಎಂದಿಗೂ ತಿಳಿ. ಪ್ರತ್ಯಕ್ಷವನ್ನೇ ಪ್ರಮಾಣಿಸಿ ಪರೋಕ್ಷವನ್ನು ಹಿಂದಿರಿಸು. ಸಜ್ಜನರು ಹೋದ ಮಾರ್ಗವನ್ನು ಸ್ವೀಕರಿಸು. ಭರತನು ಕೇಳಿಕೊಂಡಂತೆ ರಾಜ್ಯವನ್ನಾಳು; ಹೀಗೆ ಜಾಬಾಲಿಗಳು ಹೇಳಿದ ಮಾತನ್ನು ಕೇಳಿದ ರಾಮನು ಕ್ರುದ್ಧನಾಗಿ ಜಾಬಾಲಿಗಳೇ; ನಿಮಗೇನು ಭೂತ ಬಡಿದಿದೆಯೇ ? ಸಜ್ಜನರು ಸತ್ಯ, ಧರ್ಮ, ದಯೆ ದೇವ, ಬ್ರಾಹ್ಮಣರ ಪೂಜೆ, ಯಜ್ಞ, ಯಾಗ ಮೊದಲಾದವುಗಳೇ ಸನ್ಮಾರ್ಗವೆಂದು ಹೇಳುವರು;

ಎಂದು ಮುಂತಾಗಿ ಶಪಿಸುತ್ತಿರಲು ಜಾಬಾಲಿಗಳು ರಾಮನಿಗೆ ಭೀತರಾಗಿ ತನ್ನ ನಿಜಾಭಿಪ್ರಾಯವನ್ನು " ರಾಮ ನಾನು ನಾಸ್ತಿಕನಲ್ಲ. ನಾಸ್ತಿಕವಾದವನ್ನೂ ಸ್ವೀಕರಿಸಿಲ್ಲ. ಕಾಲಕ್ಕನುಗುಣವಾಗಿ ಆ ವಾದವನ್ನು ಪ್ರಚಾರಮಾಡುವೆನು. ಈಗ ನಿನ್ನನ್ನು ಅಯೋಧ್ಯೆಗೆ ಕಳಿಸುವದಕ್ಕಾಗಿ ಸಮಯೋಚಿತವಾಗಿ ನಾಸ್ತಿಕನಾದೆನು " ಎಂದು ಪ್ರಕಟಿಸಿದರು. ಆಗ್ಗೆ ವಸಿಷ್ಠರು: ರಾಮ ! ಜಾಬಾಲಿಗಳು ಲೋಕ--ತತ್ವವನ್ನು ಅರಿತವರು ನಿನ್ನನ್ನು ಹಿಂದಕ್ಕೆ ಕಳಿಸುವ ಉದ್ದೇಶದಿಂದಲೇ ಹಾಗೆ ಹೇಳಿದ್ದು ನಿಜವಿರುತ್ತದೆ. ಅವರು ನಿಜವಾಗಿ ಆಸ್ತಿಕರು " ಎಂದಿದ್ದಾರೆ ಇದರಿಂದ ಜಾಬಾಲಿಗಳು ಸ್ವತಃ ಧರ್ಮಮಾರ್ಗದಲ್ಲಿ ನಡೆಯುವರಾದರೂ ಆಗ ಧರ್ಮಮಾರ್ಗವನ್ನು ಖಂಡಿಸಿದರು; ಎಂದು ಕಂಡುಬರುವದು. ಇದರಂತೆ ಕಪಿಲಾದಿಗಳು ದ್ವೈತಮತ ಸ್ಥಾಪನೆ ಅದ್ವೈತಮತ ನಿರಾಕರಣೆ ಈ ವಿಷಯದಲ್ಲಿ ಒಪ್ಪಿಗೆಯಿಲ್ಲದಿದ್ದರೂ ಪ್ರಕೃತ ತಮ್ಮ ಕಾರ್ಯಕ್ಕಾಗಿ ಹಾಗೆ ಖಂಡಿಸಿರಬಹುದಾದ್ದರಿಂದ ಅವರ ಅನುವಾದದ ಬಲದಿಂದ ವ್ಯಾಸತಾತ್ಪರ್ಯನಿರ್ಣಯ ಮಾಡಲು ಹೊರಟ ನಮ್ಮ ಯತ್ನವು ಸಫಲವಾಗಿದೆ.

ಹಾಗಿದ್ದರೆ ವೇದಾಂತಗಳಿಗೆ ವಿರುದ್ಧವಾದ ಅರ್ಥವನ್ನು ಹೇಳುವ ಕಪಿಲಾದಿ ಋಷಿಗಳ ಮತಗಳಿಗೆ ಏನುಗತಿ ?

ವೇದಾಂತಗಳಿಗೆ ತಾತ್ಪರ್ಯವಿಷಯವಾದ ಕೇವಲಾದ್ವೈತದ ಜ್ಞಾನಕ್ಕಾಗಿ ಬೇಕಾಗುವ ಸಾಧನಗಳನ್ನು ಆ ಎಲ್ಲ ಮತಗಳೂ ಕಲ್ಪಿಸಿ ಕೊಡುತ್ತವೆ

ಸಾಂಖ್ಯವು: ಪುರುಷನಿಗೆ ಅಸಂಗತೆ, ಉದಾಸೀನ--ಸಾಕ್ಷಿಸ್ವರೂಪ ಮುಂತಾದವುಗಳನ್ನು ಸಿದ್ಧಪಡಿಸುತ್ತದೆ.

ಯೋಗಶಾಸ್ತ್ರವು: ಚಿತ್ತಶುದ್ಧಿಗಾಗಿ ಅವಶ್ಯಕವಾದ ಯಮನಿಯಮ ಮುಂತಾದ ಅಷ್ಟಾಂಗ ಯೋಗಗಳನ್ನು ಹೇಳುತ್ತದೆ.

ಜೈಮಿನಿಶಾಸ್ತ್ರವೂ: ಮನಃಸಿನ ಪರಿಪಕ್ವತೆಯ ಸಲುವಾಗಿ ಧರ್ಮಾಚರಣೆಗಳನ್ನೂ ಅಸಂಬಂಧಿ ವಿಚಾರಗಳನ್ನೂ ದಿಗ್ದರ್ಶನ ಮಾಡುತ್ತದೆ.

ವೈಶೇಷಿಕ (ಕಾಣಾದ) ನ್ಯಾಯ (ಗೌತಮ) ಶಾಸ್ತ್ರಗಳು: ಏಳು ಮತ್ತು ಹದಿನಾರು ಪದಾರ್ಥಗಳನ್ನು ಸಲಕ್ಷಣವಾಗಿ ತಿಳಿಸುತ್ತ ದೇಹ, ಇಂದ್ರಿಯಾದಿಗಳಿಗಿಂತ ಆತ್ಮನು ಬೇರೆ ಎಂಬುದನ್ನು ಸಿದ್ಧಮಾಡುತ್ತವೆ.

ಆದರೂ ಕೇವಲಾದ್ವೈತಕ್ಕೆ ಅನುಗುಣವಾದ ಪದಾರ್ಥಗಳನ್ನಷ್ಟೇ ಹೇಳದೆ, ಅವರೆಲ್ಲರೂ ಅದಕ್ಕೆ ವಿರುದ್ಧವಾದ ಪ್ರಪಂಚಸತ್ಯತ್ವ, ಆತ್ಮನಾನಾತ್ವ ಮುಂತಾದವುಗಳನ್ನು ಏಕೆ ಆಗ್ರಹದಿಂದ ಹೇಳಿದರು ?

ವೇದಾಂತಶಾಸ್ತ್ರದಲ್ಲಿ ಅಧಿಕಾರವಿಲ್ಲದ ಮಂದಮತಿಗಳಿಗೆ ಸ್ಥೂಲಾರುಂಧತೀನ್ಯಾಯದಂತೆ (ಅರುಂಧತೀ ನಕ್ಷತ್ರವು ಬಲುಸೂಕ್ಷ್ಮ ಅದನ್ನು ತೋರಿಸಲು ಹೊರಟವರು ಅದರ ಸಮೀಪದಲ್ಲಿರುವ ಸ್ಥೂಲವಾದ ವಸಿಷ್ಠನಕ್ಷತ್ರವನ್ನೇ ತೋರಿಸುತ್ತಾರೆ. ಅದು ಚೆನ್ನಾಗಿ ತಿಳಿದ

ಮೇಲೆ ಅರುಂಧತೀ ನಕ್ಷತ್ರದಕಡೆಗೆ ಅವರ ದೃಷ್ಟಿಬೀಳುವಂತೆ ಮಾಡುತ್ತಾರೆ. ಈ ರೂಢಿಗೆ ಸ್ಥೂಲಾರುಂಧತೀ ನ್ಯಾಯವೆನ್ನುವರು) ಕ್ರಮವಾಗಿ ಬ್ರಹ್ಮಸತ್ತೆಯ ಜ್ಞಾನಕ್ಕಾಗಿ, ಅನಧಿಕಾರಿಗಳನ್ನು ಮೇಲಕ್ಕೇರಿಸಲು ಸುಲಭೋಪಾಯವಾದ ಮಾರ್ಗಕಲ್ಪನೆಗಾಗಿ, ಪ್ರಪಂಚಕ್ಕೆ ಸತ್ಯತ್ವವನ್ನು ಜೀವಿಗಳ ಮನೋವಾಸನೆಗನುಗುಣವಾಗಿ ಹೇಳಿದ್ದಾರೆ. ಇದು ಎಂದಿಗೂ ಅಪ್ರಕೃತವಲ್ಲ. ಈ ಎಲ್ಲ ಮಾರ್ಗಗಳ ಪೂರ್ಣ ಪರಿಜ್ಞಾನವಾದರೆ ಕೇವಲಾದ್ವೈತಜ್ಞಾನವು ಸುಲಭವಾಗಿ ಬರಲು ಅನುಕೂಲವಾಗುವದು.

ಇದರಂತೆ ಪಾಶುಪತ, ಪಾಂಚರಾತ್ರ, ಮೊದಲಾದ ಅವೈದಿಕ ತಂತ್ರಗಳೂ ಕೇವಲಾದ್ವೈತದಲ್ಲಿಯೇ ಗುರಿಯಿಟ್ಟು ಹೊರಟಿರುವವು. ಪಾಶುಪತ ತಂತ್ರವನ್ನು ಬರೆದವನು ಶಿವನು: ಪಾಂಚರಾತ್ರಿಯನ್ನು ಬರೆದವನು ವಿಷ್ಣುವು. ಇವರು ಶ್ರುತಿ, ಸ್ಮೃತಿ, ಪುರಾಣಾದಿಗಳಲ್ಲಿ ತಮ್ಮ ಅಭಿಪ್ರಾಯವನ್ನು ಕೇವಲಾದ್ವೈತದಲ್ಲಿಯೇ ಸ್ಪಷ್ಟಪಡಿಸಿದ್ದಾರೆ ಆದ್ದರಿಂದ ಅದೇಗುರಿಯನ್ನಿಟ್ಟು ಪಾಶುಪತಾದಿ ತಂತ್ರಗಳನ್ನು ಆಯಾಯ ಅಧಿಕಾರಿಗಳಿಗಾಗಿ ರಚಿಸಿದ್ದಾರೆ ಎಂಬುದನ್ನು ಹಿಂದೆಯೇ " ಜೀವಪರರ ಐಕ್ಯವು ಶ್ರುತಿಸಮ್ಮತವಾದದ್ದು " ಮುಂತಾದ ಪಾಂಚರಾತ್ರಾದಿ ವಚನಗಳಿಂದ ಸಿದ್ಧಪಡಿಸಿದ್ದಾಗಿದೆ. ಆದ್ದರಿಂದಲೇ ಆ ತಂತ್ರಗಳಲ್ಲಿ ಕಾಣುವ ಭೇದವನ್ನು ಬೋಧಿಸುವ ವಚನಗಳು ಅದ್ವೈತಜ್ಞಾನಕ್ಕೆ ಸಾಧಕವಾಗುವ ಶಿವ ವಿಷ್ಣು ಮುಂತಾದವರ ಉಪಾಸನೆಯನ್ನು ಹೇಳುವ ಸಲುವಾಗಿವೆಯೆಂದು ಹೇಳಬೇಕಾಗುವದು.

ಬೌದ್ಧ ಚಾರ್ವಕಾದಿ ವೇದಬಾಹ್ಯ ತಂತ್ರಗಳೂ ಈ ಅಭಿಪ್ರಾಯವುಳ್ಳವುಗಳೆನ್ನಬೇಕಾಗುವದು. ಇವುಗಳನ್ನು ರಚಿಸಿದವರು ಕೇವಲಾದ್ವೈತವಾದಿಗಳಾದ ಭಗವಾನ್ ಬುದ್ಧ, ಬೃಹಸ್ಪತಿ ಮೊದಲಾದವರು. ಇವರು ಅದ್ವೈತವಾದಿಗಳೆಂಬುದು ಸೂತಸಂಹಿತೆ, ಪುರಾಣ ವಚನಗಳಿಂದ ತಿಳಿಯುತ್ತದೆ.

ಬೌದ್ಧಮತದಲ್ಲಿಯ " ಪ್ರಪಂಚಶೂನ್ಯತ್ವ " ವಾದವು ಈ ಪ್ರಪಂಚದಲ್ಲಿ ಹೇಯತ್ವವನ್ನು ಹುಟ್ಟಿಸಿ ಅದ್ವೈತಜ್ಞಾನಕ್ಕೆ ಪ್ರಥಮಸಾಧನವಾದ ವೈರಾಗ್ಯವನ್ನು ಹುಟ್ಟಿಸುತ್ತದೆ.

ಚಾರ್ವಾಕನ ದೇಹಾತ್ಮವಾದವು ಅನೇಕಜನಗಳಿಂದಲೂ ಪಾಪ ವಾಸನೆಯಿಂದ ಲೇಪಿಸಲ್ಪಟ್ಟ ಮನಸ್ಸುಳ್ಳ ಮಾನವರಿಗೆ ಒಮ್ಮೆಲೇ ದೇಹಕ್ಕೆ ಹೊರತಾದ ಆತ್ಮನನ್ನು ತಿಳಿಯಲು ಬಾರದ್ದರಿಂದ ಸ್ಥೂಲಾರುಂಧತೀ ನ್ಯಾಯದಂತೆ ಕ್ರಮವಾಗಿ ಆ ದೇಹದಲ್ಲಿ ಪ್ರಕಾಶಿಸುವ ಆತ್ಮನನ್ನು ತಿಳಿಯಲೋಸುಗ ಹೊರಟಿದೆ.

ಎಲ್ಲ ಶ್ರುತಿ, ಸ್ಮೃತಿ, ಪುರಾಣಗಳಲ್ಲಿ ವೇದಬಾಹ್ಯವಾದ ತಂತ್ರಗಳು ಅಗ್ರಾಹ್ಯವಾದವುಗಳೆಂದು ಹೇಳಲ್ಪಟ್ಟಿರುವಾಗ ನೀವು ಅವು ವೇದಾಂತಶಾಸ್ತ್ರಕ್ಕೆ ಉಪಯುಕ್ತವಾದವುಗಳೆಂದು ಹೇಗೆ ಹೇಳಿದಿರಿ?

ನಿಜ. ಆಯಾ ತಂತ್ರಗಳ ಮೇಲಿಂದ ಮೇಲೆ ಕಾಣುವ ಅರ್ಥವು ವೇದವಿರುದ್ಧವಾದ್ದರಿಂದ ಅವು ಅಗ್ರಾಹ್ಯವಾದವುಗಳೆಂದು ಹೇಳಿದ್ದು, ಅವುಗಳ ಮಹಾತಾತ್ಪರ್ಯವನ್ನು ಅಂದರೆ ನಿಜವಾದ ಅಂತರಾರ್ಥವನ್ನು ಕುರಿತು ಹೇಳಿದ್ದಲ್ಲ. ಅದರೊಳಗಿನ ಗ್ರಾಹಾಂಶವನ್ನು

ಆ ಎಲ್ಲ ಮಾರ್ಗಗಳ ರಹಸ್ಯವಾಗಿದೆ. ಅವರವರ ಪುಣ್ಯಕ್ಕೆ ತಕ್ಕಂತೆ ಈಶಾನುಗ್ರಹದಿಂದ ಜ್ಞಾನವನ್ನು ಪಡೆಯುತ್ತಾರೆ. ಪಡೆದು ಮುಕ್ತರಾಗುತ್ತಾರೆ ಹೀಗಿರುವದರಿಂದ ಆ ಮಾರ್ಗಗಳಿಗೆ ಅಪ್ರಾಮಾಣ್ಯದೋಷವಿಲ್ಲ. ಮಹಾಕಾರುಣಿಕನೂ ಸರ್ವೇಶನೂ ಸರ್ವಜ್ಞನೂ ಸತ್ಯಸಂಕಲ್ಪನೂ ಆದ ಪರಶಿವನು ಹೇಳಿದ ಮಾತಿನಲ್ಲಿ ಅಪ್ರಾಮಾಣ್ಯವಿರಲಾರದು. ಒಟ್ಟಿನಲ್ಲಿ ವೇದಮಾರ್ಗವು ಎಲ್ಲಮಾರ್ಗಗಳಲ್ಲಿ ಉತ್ತಮವೆಂದೂ ಅದರಲ್ಲಿ ಹೇಳಿದ ತತ್ವವೇ ಪ್ರಮಾಣಭೂತವೆಂದೂ ತಿಳಿಯಿರಿ, ಆದ್ದರಿಂದ ಶ್ರುತಿಯಲ್ಲಿ ವಿಶ್ವಾಸವಿಡಿ.

ಆದ್ದರಿಂದ ಸಕಲಶ್ರುತಿ, ಸ್ಮೃತಿ, ಸೂತ್ರ, ಇತಿಹಾಸ, ಪುರಾಣ, ಆಗಮ, ತಂತ್ರ ಇವುಗಳಲ್ಲಿ ವ್ಯಾಸಾಭಿಮತವಾದ ಕೇವಲಾದ್ವೈತವನ್ನೇ ಹೇಳುತ್ತವೆ. ಮತ್ತು ಆ ಅದ್ವೈತವೇ ಪರಮಾರ್ಥವೆಂತಲೂ ಸಿದ್ಧವಾಯಿತು.

ಇಲ್ಲಿಗೆ ಮೊದಲನೆಯ ಪರಿಚ್ಛೇದವು ಮುಗಿಯಿತು.

ಎರಡನೇ ಪರಿಚ್ಛೇದವು:

ಗುಣವು ಆಕಾರಗಳು ಇಲ್ಲದ
ತತ್ವವದು ಜಡಮತಿಗೆ ತೋರದು
ಎನ್ನುತಾಶ್ರುತಿ ಜನರ ಹಿತದಿಂದೊರೆದ ಪರಿಯಿಂದ
ಎಲ್ಲ ಜಗಕೂ ಮೂಲವಾಗಿಹ
ಸಗುಣ ಸತ್ಯ ಬ್ರಹ್ಮಮೂರ್ತಿಯ
ಶಂಕರಾರ್ಯರ ಮತದಿ ಮಾಳ್ಪೆನು ತತ್ವನಿರ್ಣಯವ ॥ ೧ ॥

ಕೆಲವರು ಅದ್ವೈತ ವಿದ್ಯಾಚಾರ್ಯರಾದ ಅಪ್ಪಯ್ಯದೀಕ್ಷಿತರ ನಿಜವಾದ ತಾತ್ಪರ್ಯವನ್ನರಿಯದೇ ಅವರು ರಚಿಸಿದ ಶಿವತತ್ವವಿವೇಕಾದಿ ಗ್ರಂಥಗಳನ್ನು ನೋಡಿ ಬ್ರಹ್ಮ ವಿಷ್ಣು ಶಿವ ಈ ಮೂವರ ಹೊರತಾದ ನಾಲ್ಕನೇ ಒಬ್ಬ ಶಿವನನ್ನು ಒಪ್ಪಿ ಅವನಿಗೆ ವ್ಯಾವಹಾರಿಕವಾಗಿ ಹೆಚ್ಚಿನ ಸ್ಥಾನವನ್ನು ಕಲಿಸುತ್ತಾರೆ ಅವರಿಗೆ ಬಂದ ಭ್ರಮನಿರಸನಮಾಡುವ ನೆವದಿಂದ ಸಗುಣ ಬ್ರಹ್ಮತತ್ವವನ್ನು ನಿರ್ಣಯಿಸಲು ಎರಡನೇ ಪರಿಚ್ಛೇದವನ್ನು ಆರಂಭಿಸುವೆನು.

ಶಂಕೆ = ಈಗ ನಿರ್ಣಯಿಸಿರುವಂತೆ ವ್ಯಾಸರಿಗೆ ಕೇವಲಾದ್ವೈತದಲ್ಲಿ ತಾತ್ಪರ್ಯವನ್ನೊಪ್ಪಿದರೆ ಆ ಅದ್ವೈತವು ನಿರ್ಗುಣ ನಿರಾಕಾರ ಸತ್ಯಜ್ಞಾನ ಆನಂದ ರೂಪವಾದ ಪರಂಬ್ರಹ್ಮವೆಂದು ಹೇಳಬೇಕಾದ್ದರಿಂದ ಆ ಬ್ರಹ್ಮನ ಜ್ಞಾನವಾಗುವದೆಂತು ?

ಉತ್ತರ = " ಈ ಆತ್ಮನ ಜ್ಞಾನವು ಬರೇ ಪ್ರವಚನ—ಅಧ್ಯಾಪನ ಮಾಡಿದ್ದರಿಂದಲೂ ಮೇಧಾಶಕ್ತಿಯಿಂದಲೂ ಬಹಳಷ್ಟು ಗ್ರಂಥಾಭ್ಯಾಸದಿಂದಲೂ ಸಿಗುವದಿಲ್ಲ. ಯಾರಿಗೆ

ಎಲ್ಲ ಶ್ರುತಿ, ಸ್ಮೃತಿ, ಪುರಾಣಗಳಲ್ಲಿ ವೇದಬಾಹ್ಯವಾದ ತಂತ್ರಗಳು ಅಗ್ರಾಹ್ಯವಾದವುಗಳೆಂದು ಹೇಳಲ್ಪಟ್ಟಿರುವಾಗ ನೀವು ಅವು ವೇದಾಂತಶಾಸ್ತ್ರಕ್ಕೆ ಉಪಯುಕ್ತವಾದವುಗಳೆಂದು ಹೇಗೆ ಹೇಳಿದಿರಿ ?

ನಿಜ. ಆಯಾ ತಂತ್ರಗಳ ಮೇಲಿಂದ ಮೇಲೆ ಕಾಣುವ ಅರ್ಥವು ವೇದವಿರುದ್ಧವಾದ್ದರಿಂದ ಅವು ಅಗ್ರಾಹ್ಯವಾದವುಗಳೆಂದು ಹೇಳಿದ್ದು, ಅವುಗಳ ಮಹಾತಾತ್ಪರ್ಯವನ್ನು ಅಂದರೆ ನಿಜವಾದ ಅಂತರಾರ್ಥವನ್ನು ಕುರಿತು ಹೇಳಿದ್ದಲ್ಲ. ಅದರೊಳಗಿನ ಗ್ರಾಹ್ಯಾಂಶವನ್ನು ಸ್ವೀಕರಿಸಲು ಏನೂ ಅಭ್ಯಂತರವಿಲ್ಲ. ಆದ್ದರಿಂದ ಆ ಎಲ್ಲ ತಂತ್ರಗಳಿಗೂ, ನ್ಯಾಯವೈಶೇಷಿಕಾದಿ ಶಾಸ್ತ್ರಗಳಿಗೂ ಮೇಲೆ ವಿವರಿಸಿದಂತೆ "ವೇದಾಂತಶಾಸ್ತ್ರೋಪಯೋಗ" ಎಂಬ ಫಲವಿರುವದರಿಂದ ಅವುಗಳ ಪ್ರಚಾರದಲ್ಲಿ ಏನೂ ತೊಂದರೆಯಿಲ್ಲ.

ಇದನ್ನು ಸೂತಸಂಹಿತೆಯ ಯಜ್ಞವೈಭವ ಖಂಡದಲ್ಲಿ ೨೨ನೇಯ ಅಧ್ಯಾಯದಲ್ಲಿ ಹೇಳಿದೆ. "ಎಲೈ ಮುನಿವರ್ಯರಿರಾ, ಕೇಳಿರಿ. ಎಲ್ಲ ಮಾರ್ಗಗಳೂ ಪ್ರಾಮಾಣಿಕವಾದವುಗಳು. ಇದಕ್ಕೆ ಕಾರಣವೇನಂದರೆ- ಅವೆಲ್ಲವೂ ಒಂದೇ ಗುರಿಯನ್ನಿಟ್ಟು ರಚಿಸಲ್ಪಟ್ಟಿವೆ. ಆಯಾ ಅಧಿಕಾರಿಗಳ ಬುದ್ಧಿಗಳನ್ನು ಅನುಸರಿಸಿ ಅವರ ಹಿತವನ್ನು ಸಾಧಿಸುತ್ತವೆ. ವೇದಗಳನ್ನು ಅನುಸರಿಸುವ ಧರ್ಮಶಾಸ್ತ್ರಗಳೂ, ಪುರಾಣ, ಇತಿಹಾಸಗಳೂ, ವೇದಾಂಗಗಳೂ, ಉಪ-ವೇದಗಳೂ, ಕಾಮಿಕಾದಿ ಆಗಮಗಳೂ, ಕಾಪಾಲವಾತುಲ ಪಾಶುಪತ ಸೋಮ ಭೈರವ ಮುಂತಾದ ಆಗಮಗಳೂ ಮತ್ತು ಬ್ರಹ್ಮ ವಿಷ್ಣು ಆಗಮಗಳೂ, ಬೌದ್ಧ ಜೈನಾದಿ ತಂತ್ರಗಳೂ ಚಾರ್ವಾಕಮತವೂ ತರ್ಕ ಮೀಮಾಂಸಾ ಸಾಂಖ್ಯ ಯೋಗ ಶಾಸ್ತ್ರಗಳೂ, ಇನ್ನಿತರ ಎಷ್ಟೋ ತಂತ್ರಗಳೂ ಸರ್ವಜ್ಞನಾದ ಶಂಕರನಿಂದಲೂ ಆತನ ಅನುಗ್ರಹವನ್ನು ಪಡೆದ ಬ್ರಹ್ಮ ವಿಷ್ಣು ಸಿದ್ಧ ವಿದ್ಯಾಧರ ಯಕ್ಷ ರಾಕ್ಷಸರಿಂದಲೂ ಮನುಮುನಿಗಳಿಂದಲೂ ರಚಿಸಲ್ಪಟ್ಟಿವೆ. ಈ ಮಾರ್ಗಗಳನ್ನು ಬರಿ ತರ್ಕಗಳಿಂದ ಊಹಿಸಲಾಗದ ಮಾತ್ರದಿಂದ ಬಿಟ್ಟುಬಿಡಬಾರದು. ನದಿಗಳಿಗ ಸಮುದ್ರವೇ ಗುರಿಯಾಗಿರುವಂತೆ ಈ ಎಲ್ಲ ಮಾರ್ಗಗಳಿಗೂ ಒಂದೇ ಗುರಿ. ಆ ಪರಮಾತ್ಮನನ್ನು ಯಾವಮಾರ್ಗಗಳಿಂದ ಉಪಾಸನೆಮಾಡಿದರೂ ಪಡೆಯಬಹುದು. ಉಪಾಸನೆಯಿಂದ ಪ್ರೀತನಾದ ಆ ಜಗದೀಶನು ಆಯಾ ಮಾರ್ಗಗಳಲ್ಲಿಯೇ ಅವರನ್ನು ಅನುಗ್ರಹಿಸಿ ವಿಶಿಷ್ಟಸ್ಥಾನವನ್ನೀಯುತ್ತಾನೆ. ಸೋಪಾನಕ್ರಮದಿಂದ ವೇದಮಾರ್ಗವನ್ನೇರಿಸುತ್ತಾನೆ. ಅಲ್ಲಿಯೂ ಮೊದಲು ಕರ್ಮಮಾರ್ಗ, ಅದರಿಂದ ಭಕ್ತಿಮಾರ್ಗ ಕೊನೆಗೆ ಜ್ಞಾನಮಾರ್ಗವನ್ನು ಮುಟ್ಟಿಸುತ್ತಾನೆ. ಜ್ಞಾನಮಾರ್ಗದಿಂದಲೇ ಮುಕ್ತಿಯು ಸಿಗುವದು. ಮುಕ್ತಿಯು ಏಕರೂಪವಾಗಿದೆ. ವೇದಮಾರ್ಗದಿಂದ ಪ್ರಾಪ್ತಿಯಾದ ಜ್ಞಾನದಿಂದಲೇ ಮುಕ್ತಿಯು ಲಭಿಸುವದು. ಇತರ ಮಾರ್ಗದಿಂದ ಹುಟ್ಟಿದಜ್ಞಾನವು ಅಜ್ಞಾನವೆಂದು ಕರೆಯಲ್ಪಡುವದು. ಆದ್ದರಿಂದಲೇ ಇತರ ಎಲ್ಲ ಮಾರ್ಗಗಳೂ ವೇದಮಾರ್ಗದ ಗುರಿಯಿಂದಲೇ ಪ್ರಾಮಾಣಿಕವಾಗುವವು. ಮಾನವನು ಬಹುದೂರ ಸುತ್ತುವ ರೀತಿಯನ್ನು ಬಿಟ್ಟು ವೇದಮಾರ್ಗವನ್ನೇ ಹಿಡಿಯಲು ಪ್ರಯತ್ನಿಸಬೇಕು. ಅದರಿಂದಲೇ ಪೂರ್ಣತೆಯು ಲಭಿಸುವದು. ಈಶ್ವರನಿಗೆ ಬಂಧಮೋಕ್ಷಗಳಿಗೆ ಕಾರಣವಾದ ಎರಡು ರೂಪಗಳಿವೆ. ಆಯಾ ರೂಪಗಳ ಆರಾಧನೆಯು ಬಂಧವನ್ನೂ ಮೋಕ್ಷವನ್ನೂ ನೀಡುವವು. ಇತರ ಮಾರ್ಗಗಳಲ್ಲಿಯ ವಿರುದ್ಧಾಂಶವನ್ನು ಬಿಟ್ಟು ವಿರೋಧವಿಲ್ಲದ ಅಂಶವನ್ನೇ ಸ್ವೀಕರಿಸಬೇಕು, ಆ ಎಲ್ಲ ಮಾರ್ಗಗಳು ಮಹಾಮೋಹಾವೃತರಾದ ಮಂದಮತಿಗಳಿಗಾಗಿ ಸ್ವೇಚ್ಛಾನುಸಾರವಾದ ದಾರಿಯಲ್ಲಿ ನಡೆಯಲೋಸುಗ ಹುಟ್ಟಿಕೊಂಡಿವೆ. ಓಡುತ್ತಿರುವ ಹಸುವನ್ನು ಹಿಡಿಯಲು ಕೈಯಲ್ಲಿ ಹುಲ್ಲನ್ನು ತೋರಿಸಿದಂತೆ

ಆ ಪರಮಾತ್ಮನ ಅನುಗ್ರಹವಾಗುವದೋ ಅವರಿಗೆ ಆಪ್ರಸಾದದಿಂದಲೇ ಜ್ಞಾನೋದಯವಾಗುವದು. ಅವರಿಗೆ ತನ್ನ ಸ್ವರೂಪವನ್ನು ಆತ್ಮನು ತೋರಿಸುವನು" ಎಂದು ಶ್ರುತಿಯೂ "ಕ್ಷೇತ್ರವನ್ನೂ ಜ್ಞಾನವನ್ನೂ ಜ್ಞೇಯವನ್ನೂ ಹೇಳಿದ್ದೇನೆ. ನನ್ನ ಭಕ್ತನು ಇವೆಲ್ಲವನ್ನೂ ತಿಳಿದುಕೊಂಡು ನನ್ನ ಸ್ವರೂಪವನ್ನೂ ಹೊಂದುವನು" ಎಂದು ಭಗವದ್ಗೀತೆಯೂ "ಈಶ್ವರಾನುಗ್ರಹದಿಂದಲೇ ಮನುಜರಿಗೆ ನಿರ್ಗುಣ ಬ್ರಹ್ಮಸಾಕ್ಷಾತ್ಕಾರವಾಗುವದು. ಮಹಾಭಯದಿಂದ ತ್ರಿಕ್ಷಿತರಾದ ಇಬ್ಬರು ಮೂವರೇ ಅಂಥ ಜ್ಞಾನವನ್ನು ಪಡೆಯುವರು. ನನ್ನ ಪ್ರಸಾದದಿಂದಲೇ ಚಿತ್ತಶುದ್ಧಿ ಪಡೆದವರಿಗೆ ನನ್ನ ಸಾಯುಜ್ಯ ಮುಕ್ತಿ ಲಭಿಸುವದು. ನನ್ನೀ ಅನುಗ್ರಹವಿಲ್ಲದಿದ್ದರೆ ಮೋಕ್ಷವಾಗುವದಿಲ್ಲ. ವೇದಮಾರ್ಗದಲ್ಲಿ ಇದ್ದು ನನ್ನೀ ಭಕ್ತರಾದ ಮಹಾತ್ಮರು ಅನೇಕ ಅತ್ಮದಿಂದ ಸಾಧಿಸಿದ ಶ್ರುತಿ ಸ್ಮೃತಿ ವಿಹಿತ ಮಾರ್ಗದಿಂದ ಲಬ್ಧವಾದ ಪುಣ್ಯದಿಂದ ಮುಕ್ತಿಯಲ್ಲಿ ಶ್ರದ್ಧೆಯುಳ್ಳವರೂ ಕೊನೆಗೆ ಮೋಕ್ಷವನ್ನು ಪಡೆಯುವವರೂ ಆಗುತ್ತಾರೆ. ಹೇ ದೇವತೆಗಳಿರಾ ನಿಮಗೂ ಆ ಶಿವ ಪರಮಾತ್ಮನ ಪ್ರಸಾದದಿಂದಲೇ ಕೇವಲಾದ್ವೈತ ಜ್ಞಾನವಾಗುವದು" ಎಂದು ಪುರಾಣದಲ್ಲಿಯೂ ಹೇಳಿದ್ದರಿಂದ ಪರಮೇಶ್ವರನ ಅನುಗ್ರಹದಿಂದ ಜ್ಞಾನವು ಲಭಿಸುವದು. ಅನುಗ್ರಹವು ಹಿಂದಿನ ಅನೇಕ ಜನ್ಮಗಳಿಂದ ಗಳಿಸಿದ ಪುಣ್ಯ ಪರಿಪಾಕದಿಂದ ಚಿತ್ತಶುದ್ಧಿಯಾದಾಗ ಸಿಗುವದು. ಆಮೇಲೆ ಶ್ರವಣ ಮನನ ನಿದಿಧ್ಯಾಸನಗಳೆಂಬ ಸಾಧನಗಳೂ ಲಭಿಸುವವು ಆ ದ್ವಾರಾ ಬ್ರಹ್ಮಜ್ಞಾನ ಪ್ರಾಪ್ತಿಯಾಗುವದು.

ಪರಮೇಶ್ವರಪ್ರಸಾದಹೀನರಾದ, ಗೌತಮ--ದಧೀಚಿ ಶಾಪಕ್ಕೊಳಗಾದ, ಮಹಾಪಾಪಗಳೆಂಬ ಸಮುದ್ರದಲ್ಲಿಯೇ ಮುಳುಗಿದ ಜನರಿಗೆ ಕೇವಲಾದ್ವೈತದಲ್ಲಿ ಅಭಿರುಚಿಯೂ ಹುಟ್ಟುವದಿಲ್ಲ. ಅಲ್ಲದೇ ಅದರಲ್ಲಿ ದ್ವೇಷವೇ ಹುಟ್ಟುತ್ತದೆ. ಇದನ್ನೇ ಸೂತಸಂಹಿತೆಯಲ್ಲಿ ಹೇಳಿದೆ. "ಗೌತಮಮುನಿಯ ಶಾಪದಿಂದಲೂ ದಧೀಚಿಮಹರ್ಷಿಗಳ ಶಾಪದಿಂದಲೂ ಪೂರ್ವಜನ್ಮಕೃತ ಪಾಪದಿಂದಲೂ ಈ ಅದ್ವೈತ ತತ್ವವು ರುಚಿಸುವದಿಲ್ಲ. ಮತ್ತು ಅಂಥವರಿಗೆ ಆ ಅದ್ವೈತದಲ್ಲಿ ದ್ವೇಷವೂ ವೇದದಿಂದ ತಿಳಿಯಲ್ಪಡುವ ಶಿವನಲ್ಲಿ ದ್ವೇಷವೂ ಉಂಟಾಗುತ್ತದೆ. ಎಂದು. ಆದ್ದರಿಂದ ಆ ಅದ್ವೈತಜ್ಞಾನಕ್ಕೆ ಪರಮಕಾರಣವಾದ ಪರಮೇಶ್ವರನ ಉಪಾಸನೆಯನ್ನು ಮಾಡಬೇಕು.

ಆ ಪರಮೇಶ್ವರನೆಂದರೆ ಯಾರು ? ಇದಕ್ಕೆ ಹೇಳುವೆವು "ಮಾಯೆಯೆಂಬುದೊಂದು ಈ ಜಗತ್ತಿನ ಮೂಲಕಾರಣವು. ಆ ಮಾಯೆಯಿಂದ ಮಾಯಿಯಾದವನು ಮಹೇಶ್ವರನು., ಆ ಮಾಯೀ ಪರಮೇಶ್ವರನು ಈ ವಿಶ್ವವನ್ನು ಹುಟ್ಟಿಸುವನು., ಈಶನು ತನ್ನ ಮಾಯೆಯಿಂದ ಮೊದಲು ಪೂರ್ವಕಲ್ಪದ ವಾಸನೆಯ ಮೇರೆಗೆ ತಾನು ಏಕರೂಪನಾಗಿದ್ದೂ ಈ ನಾನಾ ಜಗತ್ತನ್ನು ಸೃಜಿಸಿದನು. ತಾನು ಅಭಿನ್ನನಾದರೂ ಕಾಲಕರ್ಮಗಳಿಗೆ ಅನುಗುಣವಾದ ಭೇದವನ್ನು ಕಲ್ಪಿಸಿದನು. ಎಲೈ ಬ್ರಾಹ್ಮಣರಿರಾ ! ಆ ಕಲ್ಪಿತಭೇದವು ಯಾವಾಗಲೂ ಅಭೇದವನ್ನು ಬಾಧಿಸದು. ಹಿಂದಿನ ವಾಸನೆಯಿಂದ ಒಮ್ಮೆ ಕಾಣಿಸಿಕೊಂಡು ಮತ್ತೆ ಇಲ್ಲದಂತಾಗುವದು. ಮುಂತಾದ ಶ್ರುತಿ—ಪುರಾಣಾದಿ ವಚನಗಳ ಮೇರೆಗೆ 'ಮಾಯಾ' ಎಂಬ ಉಪಾಧಿಗೆ ಒಳಪಟ್ಟಿರುವ ಬ್ರಹ್ಮವೇ ಪರಮೇಶ್ವರನು ಎಂದು ತಿಳಿಯುತ್ತದೆ. ಈ ಪರಮೇಶ್ವರನಿಗೇ "ಯಾರಿಂದ ಈ ಭೂತಗಳು ಜನಿಸುವವು" "ಆ ಚಿತ್ತ ನಾನಾ ರೂಪದಿಂದ ನಾನು ಜನಿಸಬೇಕು. ಎಂದು ಆಲೋಚಿಸಿತು." ಎಂದು ಶ್ರುತಿಗಳೂ "ಜನ್ಮಾದ್ಯಸ್ಯ ಯತಃ" "ಪ್ರಕೃತಿಶ್ಚ" ಮುಂತಾದ ಬ್ರಹ್ಮಸೂತ್ರ-

ಗಳೂ ಜಗತ್ಕಾರಣತ್ವವನ್ನು ಹೇಳುತ್ತಿವೆ. ನಿಃಸಂಗ ಬ್ರಹ್ಮನಿಗೆ ಈ ಸ್ವಪ್ನಕಾರ್ಯದಲ್ಲಿ ಮಾಯಾ ಸಂಬಂಧವು ಮಾತ್ರವೇ ಹೇತುವಾದದ್ದು. ಈ ಹೇತುತ್ವವೂ ನಿಮಿತ್ತ—ಉಪಾದಾನ ಕಾರಣ ದ್ವಯರೂಪವಾದದ್ದು. (ಒಂದು ಆಭರಣಕ್ಕೆ ಬಂಗಾರವು ಉಪಾದಾನವೆಂದೂ ಸೋನಾರ (ಸ್ವರ್ಣಕಾರ)ನು ನಿಮಿತ್ತಕಾರಣ ಎಂದು ಹೇಳುವರು. ಆದರೆ ಇಲ್ಲಿ ಅವೆರಡೂ ಒಂದೇ ಎಂದು ಅದರ ಅರ್ಥ; ಉದಾಹರಣೆ= ಜೇಡುಹುಳವು ತಾನು ರಚಿಸಿದ ಜಾಲಕ್ಕೆ ತಾನೇ ನಿಮಿತ್ತವೂ ಉಪಾದಾನವೂ ಆಗಿದೆ.) ಇಲ್ಲಿ ಉಪಾದಾನವೆಂದರೆ- ತನ್ನಲ್ಲಿ ಅಜ್ಞಾನದಿಂದ ತೋರಿದ ವಸ್ತುವಿಗೆ ತಾನು ಅಧಿಷ್ಠಾನವಾಗಿರುತ್ತದೆ; ಎಂದರ್ಥ. ಇಂಥ ಉಪಾದಾನತ್ವವು ವ್ಯಾಪಕನಾಗಿಯೂ ಅಮೂರ್ತನಾಗಿಯೂ (ಅಮೂರ್ತ ಎಂದರೆ ಪೃಥಿವ್ಯಾದಿಗಳಂತೆ ನಮ್ಮ ಸ್ಪರ್ಶಕ್ಕೆ ತಾಕದು ಎಂದರ್ಥ) ಇರುವ ಪರಮೇಶ್ವರನಿಗೇ ಸಂಭವಿಸುವದು. ಹೊರತು ವಿಗ್ರಹವುಳ್ಳವರಿಗೆ ಅದು ಘಟಿಸದು. ವಿಗ್ರಹವು ಎಲ್ಲೆಡೆಯಲ್ಲಿ ಪ್ರವೇಶಿಸದು. ಆ ಮಾಯಾ ಉಪಾಧಿಕನಾದ ಪರಮೇಶ್ವರನಿಗೆ ಸರ್ವಜ್ಞತ್ವವೂ ಸರ್ವಶಕ್ತಿತ್ವವೂ ಮುಂತಾದ ಅನಂತ ಕಲ್ಯಾಣಗುಣಗಳೂ ಹೊಂದುವವು. "ಈತನ ಶಕ್ತಿಯೂ ಸ್ವಾಭಾವಿಕ ಜ್ಞಾನವೂ ಬಹುದೊಡ್ಡ ಪ್ರಮಾಣದ್ದೂ ವಿವಿಧವಾದದ್ದೂ ಇರುತ್ತದೆ" ಎಂದು ಶ್ರುತಿಯೇ ಹೇಳಿದೆ. ಆದ್ದರಿಂದ "ಸರ್ವೋಪೇತಾಚ. ತದ್ದರ್ಶನಾತ್" ಎಂದು ಬ್ರಹ್ಮಸೂತ್ರದ ಅಧಿಕರಣದಲ್ಲಿ "ವಿಕರಣತ್ವಾತ್" ಎಂಬ ಸೂತ್ರಭಾಷ್ಯದಲ್ಲಿ "ಪಾಣಿ ಪಾದಗಳಿಲ್ಲದಿದ್ದರೂ ಸ್ವೀಕರಿಸುವವನು ಬಹುವೇಗದಿಂದೋಡುವನು ಕಣ್ಣಿಲ್ಲದಿದ್ದರೂ ನೋಡುವನು ಕಿವಿಯಿಲ್ಲದಿದ್ದರೂ ಕೇಳುವನು" ಎಂಬ ಶ್ರುತಿಯಂತೆ "ಕರಣಗಳಿಲ್ಲದಿದ್ದರೂ ಬ್ರಹ್ಮನಿಗೆ ಸರ್ವಸಾಮರ್ಥ್ಯವನ್ನು ಶ್ರುತಿಯು ಹೇಳುತ್ತದೆ" ಎಂದು ಸಿದ್ಧಾಂತಮಾಡಿದ್ದಾರೆ.

ಕಾರಣ ಹಿಂದೆ ಹೇಳಿದಂತೆ ಜಗತ್ತಿನ ಹುಟ್ಟು ಮೊದಲಾದ್ದಕ್ಕೆ ಕಾರಣನಾದ ಮಾಯೆಯಲ್ಲಿ ಬಿಂಬರೂಪನಾದ ಒಬ್ಬನೇ ಒಬ್ಬ ಪರಮೇಶ್ವರನು ಎಲ್ಲರಿಂದಲೂ ಉಪಾಸನೆ ಮಾಡಲ್ಪಡುವನು. ಆ ಮಾಯೆಯಲ್ಲಿ ಪ್ರತಿಬಿಂಬನಾದವನೇ ಜೀವನು. ಆತನೇ ಉಪಾಸಕನು. ಆ ಜೀವನೂ ಅನೇಕ ಅಂತಃಕರಣಗಳ ಮೂಲಕ ಅನೇಕನೆಂದು ವ್ಯವಹಾರವಿರುವದು. "ಸಕಲಭೂತಗಳಿಗೂ ಆತ್ಮನಾದ ಒಬ್ಬನೇ ಎಲ್ಲ ಭೂತಗಳಲ್ಲಿಯೂ ಬೇರೆಬೇರೆಯಾಗಿಯೂ ಕಾಣುವನು. ಅದಕ್ಕೆ ಜಲದಲ್ಲಿ ಪ್ರತಿಬಿಂಬಿತವಾದ ಚಂದ್ರನೇ ಉದಾಹರಣೆ ಯಾಗಿರುವನು." ಎಂಬ ಶ್ರುತಿಯು ಹಾಗೆ ಸಾರುತ್ತದೆ. ಪರಮೇಶ್ವರ ಒಬ್ಬನೇ ಆದರೂ ಭಕ್ತರ ಅನುಗ್ರಹಕ್ಕಾಗಿ ತನ್ನಿಚ್ಛೆಯಂತೆ ಬ್ರಹ್ಮ ವಿಷ್ಣು ಶಿವ ಮೊದಲಾದ ಲೀಲಾ ಶರೀರಗಳನ್ನು ಸ್ವೀಕರಿಸುತ್ತಾನೆಂದು ಹೇಳಲಾಗಿದೆ.

ಅಮೂರ್ತ ವಸ್ತುವಿನ ಉಪಾಸನೆಯು ಉತ್ತಮಾಧಿಕಾರಿಗಳಿಗೆ ಮಾತ್ರ ಸಾಧ್ಯವಾದರೂ ಮಾಯೋಪಾಧಿಕ ಈಶ್ವರನು ಅಮೂರ್ತನಾದ್ದರಿಂದ ಅವನ ಉಪಾಸನೆಯು ಮಂದಾಧಿಕಾರಿಗಳ ಬುದ್ಧಿಗೆ ಅಸಾಧ್ಯವಾದ್ದರಿಂದ ಮೂರ್ತವಾದ ಈಶ್ವರನ ಸಗುಣ ಮೂರ್ತಿಯ ಉಪಾಸನೆ ಅಲ್ಲಲ್ಲಿ ಹೇಳಿದೆ. ರಾಮತಾಪಿನೀ ಉಪನಿಷತ್ತಿನಲ್ಲಿ "ಚಿನ್ಮಯನಾದ--ಅದ್ವಿತೀಯ ನಿಷ್ಕಲನಾದ ಶರೀರವಿಲ್ಲದ ಈಶ್ವರನಿಗೆ ಉಪಾಸಕರಿಗಾಗಿ ರೂಪಕಲ್ಪನೆ ಮಾಡಿದ್ದಾರೆ" ಎಂದು ಹೇಳಿದೆ. ಜ್ಞಾನವಾಸಿಷ್ಠದಲ್ಲಿ "ಪುಂಡರೀಕಾಕ್ಷನೂ ಮುಕ್ಕಣ್ಣನೂ ದೇಹವುಳ್ಳವರಲ್ಲ. ಅಥವಾ ಚಿತ್ರರೂಪದವರೂ ಅಲ್ಲ. ಕೇವಲ ಕೃತ್ರಿಮವಲ್ಲದ ಆದಿ--ಅಂತವಿಲ್ಲದ ಜ್ಞಾನರೂಪದವರು. "ದೇವ" ಈ ಶಬ್ದವೇ ಜ್ಞಾನರೂಪಿಯೆಂದು ಹೇಳುವದು. ಯಾರಿಗೆ ಆ ತತ್ವವು ಬುದ್ಧಿಯಲ್ಲಿ ಹಿಡಿಸದೋ ಅವರಿಗೆ ಸಾಕಾರವಾದ ದೇವರ ಅರ್ಚನೆ ಹೇಳಿದೆ. ಯೋಜನದಷ್ಟು ದೂರಹೋ-

ನಿಷ್ಕಲನಾದ ಶರೀರವಿಲ್ಲದ ಈಶ್ವರನಿಗೆ ಉಪಾಸಕರಿಗಾಗಿ ರೂಪಕಲ್ಪನೆ ಮಾಡಿದ್ದಾರೆ" ಎಂದು ಹೇಳಿದೆ. ಜ್ಞಾನವಾಸಿಷ್ಠದಲ್ಲಿ "ಪುಂಡರೀಕಾಕ್ಷನೂ ಮುಕ್ಕಣ್ಣನೂ ದೇಹವುಳ್ಳವರಲ್ಲ. ಅಥವಾ ಚಿತ್ರರೂಪದವರೂ ಅಲ್ಲ. ಕೇವಲ ಕೃತ್ರಿಮವಲ್ಲದ ಆದಿ--ಅಂತ್ಯವಿಲ್ಲದ ಜ್ಞಾನರೂಪದವರು. "ದೇವ" ಈ ಶಬ್ದವೇ ಜ್ಞಾನರೂಪಿಯೆಂದು ಹೇಳುವದು. ಯಾರಿಗೆ ಆ ತತ್ವವು ಬುದ್ಧಿಯಲ್ಲಿ ಹಿಡಿಸದೋ ಅವರಿಗೆ ಸಾಕಾರವಾದ ದೇವರ ಅರ್ಚನೆ ಹೇಳಿದೆ. ಯೋಜನದಷ್ಟು ದೂರಹೋ-
ಗಲು ಅಸಮರ್ಥರಾದವರಿಗೆ ಕ್ರೋಶ (ಮೈಲು) ದ ಮಾರ್ಗವನ್ನು ಕಲ್ಪಿಸುತ್ತಾರಷ್ಟೇ" ಪಾಂಚರಾತ್ರಾಗಮದಲ್ಲಿಯೂ= "ನಿನಗೆ ಆಕಾರಗಳಿಲ್ಲ, ಆಯುಧಗಳಿಲ್ಲ, ರೂಪವಿಲ್ಲ, ಆಧಾರವಿಲ್ಲ, ಆದರೂ ಭಕ್ತರಿಗಾಗಿ ಪುರುಷಾಕಾರವನ್ನು ಸ್ವೀಕರಿಸುತ್ತೀಯೇ" ಎಂದು ಹೇಳಿದೆ. ಶಿವಾಗಮದಲ್ಲಿ "ಯತಿಗಳಿಗಾಗಿಯೂ ಮಂತ್ರ ಜಪಿಸುವವರಿಗಾಗಿಯೂ ಜ್ಞಾನಿ--ಯೋಗಿಗಳಿಗಾಗಿಯೂ ಧ್ಯಾನ--ಪೂಜೆಗಳನ್ನು ಮಾಡಲು ಅನುಕೂಲಕ್ಕಾಗಿ ಸ್ವೇಚ್ಛೆಯಿಂದ ತನುವನ್ನು ಸ್ವೀಕರಿಸುತ್ತಿಯೆ ಅದಕ್ಕಾಗಿ ಬ್ರಹ್ಮಮೀಮಾಂಸೆಯ ಅಂತಸ್ತದ್ಧರ್ಮಾಧಿಕರಣದಲ್ಲಿ "ಪರಮೇಶ್ವರನಿಗೂ ಸಾಧಕರ ಅನುಗ್ರಹಕ್ಕಾಗಿ ಸ್ವೇಚ್ಛೆಯಂತೆ ಮಾಯಾಮಯವಾದ ಶರೀರವುಂಟು." ಮುಂತಾದ ಭಾಷ್ಯಸಂದರ್ಭದಲ್ಲಿ ಅಶರೀರನಾದರೂ ಪರಮೇಶ್ವರನನ್ನು ಸೂರ್ಯಮಂಡಲಾದಿ ಸ್ಥಾನದೊಳಗೆ ಇರುವ ಹಿರಣ್ಮಯನಾದ ಪುರುಷರೂಪದಿಂದ ಉಪಾಸನೆ ಮಾಡತಕ್ಕದ್ದೆಂದು ಸಿದ್ಧಾಂತಮಾಡಿದೆ.

ಇಲ್ಲೊಂದು ಪೂರ್ವಪಕ್ಷ = ಜಗತ್ತಿಗೆ ಕಾರಣವಾದದ್ದು ಸತ್ತೋ! ಅಸತ್ತೋ! ಎಂದು ವಿವಾದವಿರುವರಿಂದ ಶೂನ್ಯವಾದವನ್ನು ನಿರಾಕರಿಸಲು "ಸದೇವ ಸೌಮ್ಯ ಇದಮಗ್ರ ಆಸೀತ್" ಎಂದು ಛಾಂದೋಗ್ಯದಲ್ಲಿ ಹೇಳಿದೆಯಷ್ಟೇ?

ಮತ್ತು ಆ ಜಗತ್ಕಾರಣವಾದ "ಸತ್ತು" ಚೇತನವೋ! ಎಂಬುದು ವಿವಾದವಿಷಯವಾಗಿದೆ. ಸಾಂಖ್ಯರು ಪ್ರಕೃತಿಯೇ ಜಗತ್ಕಾರಣವೆಂದೂ ವೈಶೇಷಿಕರು ಪರಮಾಣುವೆಂದೂ ಹೇಳುವರು ಕಾರಣ ಅದನ್ನು ನಿರಾಕರಿಸಲೋಸುಗ "ಆತ್ಮಾವಾ ಇದಮೇಕ ಏವಾಗ್ರ ಆಸೀತ್" ಎಂದು ಐತರೇಯೋಪನಿಷತ್ತಿನಲ್ಲಿ ಹೇಳಿದೆ. ಹಾಗೂ ಇಂತು ಜಗತ್ಕಾರಣನಾದ ಚೇತನನು ಜೀವನೋ! ಬ್ರಹ್ಮನೋ ಎಂಬ ಸಂಶಯ ಬರಬಾರದೆಂದು--ಹಿರಣ್ಯಗರ್ಭ--ಇಂದ್ರ ಅಗ್ನಿ ಸೂರ್ಯ ಮುಂತಾದ ಜೀವರಿಗೆ ಜಗತ್ಕಾರಣವಿಲ್ಲವೆಂದು ತಿಳಿಸಲು "ಬ್ರಹ್ಮವಾ ಇದಮೇಕ ಏವಾಗ್ರ ಆಸೀತ್" ಎಂದು ಬೃಹದಾರಣ್ಯಕದಲ್ಲಿ ವಿವರಿಸಿದೆ. ಆ ಬ್ರಹ್ಮನಿಗೆ ಇರುವ ಜಗತ್ಕಾರಣತ್ವವು ಶಿವನಿಗಾಗಲೀ ವಿಷ್ಣುವಿಗಾಗಲೀ ಇರಬಹುದಾದ್ದರಿಂದ "ಪ್ರಲಯಕಾಲದಲ್ಲಿ ಹಗಲು ರಾತ್ರಿಗಳೂ ಸದಸದ್ವಸ್ತುಗಳೂ ಇರುವದಿಲ್ಲ. ಕೇವಲ ಶಿವನೊಬ್ಬನೇ ಇರುವನು." ಎಂದು ಶ್ರುತಿಯಿಂದ ಶಿವನಿಗಾಗಲೀ "ಏಕೋ ಹ ವೈ ನಾರಾಯಣಃ" ಎಂಬ ಶ್ರುತಿಯಿಂದ ವಿಷ್ಣುವಿಗಾಗಲೀ ಆ ಜಗತ್ಕಾರಣತ್ವವು ಇರಲಿ ಎಂದು ಹೇಳೋಣ.

ಇದಕ್ಕೆ ಸಿದ್ಧಾಂತವು ಹೀಗಿದೆ. ಪ್ರಥಮಪರಿಚ್ಛೇದದಲ್ಲಿಯೇ ಭೇದವನ್ನು ನಿರಾಕರಿಸಿದ್ದರಿಂದ ಆ ಭೇದ ಪಕ್ಷವನ್ನು ಹಿಡಿದು ಈ ಮೇಲಿನ ಪೂರ್ವಪಕ್ಷವು ಹೊರಡುವದು. ಲಜ್ಜಾಸ್ಪದವಾದದ್ದು. ಆದ್ದರಿಂದಲೇ ನಾವು ಎರಡನೇ ಪರಿಚ್ಛೇದದ ಆರಂಭದಲ್ಲಿ ಭೇದವಾದಿಗಳನ್ನು ಬಿಟ್ಟು ಶಂಕರಭಗವತ್ಪಾದರನ್ನೇ ಅನುಸರಿಸಿ ಈ ಸಗುಣ ಬ್ರಹ್ಮನಿರ್ಣಯವನ್ನು ಮಾಡುತ್ತೇವೆಂದು ಪ್ರತಿಜ್ಞೆ ಮಾಡಿದ್ದೇವೆ. ಇನ್ನು ಅಭೇದ ಪಕ್ಷವನ್ನಿಟ್ಟು ಈ ಪೂರ್ವಪಕ್ಷವು ಹೊರಟಿದೆ ಎಂದರೆ = ಆಗಲೀ ಇದನ್ನು ವಿಮರ್ಶಿಸುವಾ! ಪೂರ್ವಪಕ್ಷದ ಅಭಿಪ್ರಾಯದಂತೆ "ಭಾಗವಿಶು" ನ್ಯಾಯವು ಇಲ್ಲಿ

ಕೊಡುವದಿಲ್ಲ. ಭಾಗಪಶುನ್ಯಾಯವೆಂದರೆ= "ಅಗ್ನೀಷೋಮೀಯಂ ಪಶುಮಾಲಭೇತ" ಎಂದು ಅಗ್ನೀಷ್ಟೋಮಯಾಗಕ್ಕೆ ಪಶುವು ಹವಿಸೆಂದು ತಿಳಿಯುತ್ತದೆ. ಈ ಪಶು ಶಬ್ದವು ಕುರಿ-ಗೋವು ಮುಂತಾದ ಅನೇಕ ಪಶುಗಳಿಗೂ ಬರಬಹುದಾದಾಗ ಇದೇ ಎಂದು ನಿರ್ಣಯವಾಗುವದಿಲ್ಲ. "ಅಗ್ನೀಷೋಮಾಭ್ಯಾಂ ಛಾಗಸ್ಯ ವಪಾಯಾ ಮೇದಸಃ" ಎಂಬ ಶ್ರುತಿಯಿಂದ ಆ ಪಶುವು ಛಾಗ= ಆಡು ಎಂದು ಅರ್ಥವಾಗುತ್ತದೆ. ಹೀಗೆ ಸಾಮಾನ್ಯವಾಗಿ ಹೇಳಿದ್ದನ್ನು ವಿಶೇಷವಾಗಿ ನಿರ್ಣಯಿಸುವಾಗ "ಛಾಗ-ಪಶು" ನ್ಯಾಯ ಎಂದು ಹೇಳುತ್ತಾರೆ. ಈ ನ್ಯಾಯದಂತೆ ಪ್ರಕೃತ-ದಲ್ಲಿ ಅರ್ಥಮಾಡುವಂತಿಲ್ಲ. ಬ್ರಹ್ಮನು ಜಗತ್ಕಾರಣನೆಂದು ಹೇಳುವಾಗ ಅದೊಂದು ದೇವತೆ ಎಂಬಂತೆ ಅರ್ಥವಾಗದು. ಯಾಕಂದರೆ "ಬ್ರಹ್ಮವು ಸತ್ಯವಾಗಿಯೂ ಜ್ಞಾನರೂಪವೂ ಅನಂತವೂ ಆಗಿರುವದು" "ಆನಂದವೇ ಬ್ರಹ್ಮ ಎಂದು ತಿಳಿಯಬೇಕು" ಮುಂತಾದ ಶ್ರುತಿಗಳಿಂದ ಸಚ್ಚಿದಾ-ನಂದಾಖಂಡ ರೂಪವೇ ಬ್ರಹ್ಮ ಎಂದು ಹೇಳಲ್ಪಡುತ್ತದೆ. ಈ ಅಖಂಡ ನಿರ್ವಿಶೇಷ ಬ್ರಹ್ಮನಿಗೆ ಜಗತ್ಕಾರಣತ್ವವು ಕೊಡುವದಿಲ್ಲ; ಎಂಬ ಹೇತುವಿನಿಂದ "ಮಾಯಿಯಾದ ಆತನು ಈ ವಿಶ್ವ-ವನ್ನು ಹುಟ್ಟಿಸುವನು." "ಮಹೇಶ್ವರನು ಮಾಯಿಯು" ಎಂದು ಮುಂತಾದ ಶ್ರುತಿಗಳು ಮಾಯಾ ಉಪಾಧಿಕ ವೇಷವನ್ನು ಆತನಿಗೆ ತೊಡಿಸಿ ಜಗತ್ಕಾರಣತ್ವವನ್ನು ಹೇಳುತ್ತಿವೆ. ಛಾಂದೋಗ್ಯ ಐತರೀಯ ತೈತ್ತಿರೀಯ ಮುಂತಾದ ಉಪನಿಷತ್ತುಗಳಲ್ಲಿ ಇಂಥ--ಮಾಯಾ ವೇಷ ಭೂಷಿತ-ನಾದ--ಬ್ರಹ್ಮನಿಗೆ 'ಸತ್' 'ಜ್ಞಾನ' ಮುಂತಾದ ಶಬ್ದದಿಂದ ಅನುವಾದಮಾಡಿ ಜಗತ್ಕಾರಣತ್ವ-ವನ್ನು ಹೇಳಿದ್ದಿದ್ದು ಸಾಮಾನ್ಯ ವಿಶೇಷ ರೀತಿಯೇ ಇಲ್ಲಿ ಇಲ್ಲವಾಗಿದೆ. ಮತ್ತು ಅಭೇದಪಕ್ಷ-ದಲ್ಲಿ ಶಿವನಿಗಾಗಲೀ ನಾರಾಯಣನಿಗಾಗಲೀ ಜಗತ್ಕಾರಣತ್ವವಿರಲಿ; ಎನ್ನುವಂತೆಯೇ ಇಲ್ಲ. ಅವರಿಬ್ಬರಲ್ಲಿ ಭೇದವೇ ಇಲ್ಲ.

ಶಿವ ನಾರಾಯಣರಲ್ಲಿ ಸ್ವರೂಪತಃ ಭೇದವಿಲ್ಲದಿದ್ದರೂ ಉಪಾಧಿಯಿಂದ ಭೇದವ-ನ್ನೊಪ್ಪಿ ಅವರಿಬ್ಬರೊಳಗೆ "ಛಾಗ ಪಶುನ್ಯಾಯದಂತೆ ಒಬ್ಬರಿಗೆ ಕಾರತ್ವವನ್ನು ಕಲ್ಪಿಸುವಂತೆಯೂ ಇಲ್ಲ. ಉಪಾಸನಾ ಪ್ರಕರಣದಲ್ಲಿ ಆ ಶಿವ ನಾರಾಯಣರೊಳಗೇ ಲೇಶಮಾತ್ರದಾಗಿಯೂ ಭೇದ-ವಿಲ್ಲ; ಎಂಬುದನ್ನು ಮುಂದೆ ನಾವೇ ಸ್ಪಷ್ಟಮಾಡುತ್ತೇವೆ. "ಬ್ರಹ್ಮಾ ವಿಷ್ಣು ರುದ್ರ ಇವರು ವಿಭಕ್ತರಾದರೂ ಪರಮಾತ್ಮ ವಿಭಾಗದಲ್ಲಿಯೇ ಸೇರ್ಪಡೆಯಾಗುವರು; ಜೀವಸಮೂಹದಲ್ಲಿ ಸೇರುವದಿಲ್ಲ." ಎಂಬಿವೇ ಮುಂತಾದ ಅನೇಕ ಪ್ರಮಾಣಗಳಿಂದ ತ್ರಿಮೂರ್ತಿಗಳಿಗೆ ಈಶ್ವರ ಭಾವವನ್ನೇ ನಾವು ಸಿದ್ಧಮಾಡುವೆವಾದ್ದರಿಂದಲೂ "ಆ ಶಿವ ನಾರಾಯಣರೊಳಗೆ ಒಬ್ಬರನ್ನು ಜೀವಕೋಟಿಯಲ್ಲಿ ಸೇರಿಸಿ ಮತ್ತೊಬ್ಬರನ್ನು ಜಗತ್ತಿಗೆ ಕಾರಣವೆಂದು ಹೇಳೋಣ; ಎಂದೂ ಹೇಳುವಂತಿಲ್ಲ.

ಮತ್ತು "ಬ್ರಹ್ಮ" ಮುಂತಾದ ಶಬ್ದಗಳಿಗೆ ಶಿವನಲ್ಲಾಗಲೀ ನಾರಾಯಣನಲ್ಲಾಗಲೀ ವಿಶೇಷ ಪರ್ಯವಸಾನವೆಂದು ಹೇಳುವದಾದರೆ "ಈತನ ಮುಖ--ಶಿರ--ಕುತ್ತಿಗೆ ಮೊದಲಾವು-ಗಳೂ ಸರ್ವಕಡೆಯಲ್ಲಿಯೂ ವ್ಯಾಪಿಸಿವೆ. ಮತ್ತು ಸರ್ವಪ್ರಾಣಿಗಳ ಬುದ್ಧಿಗುಹೆಯಲ್ಲಿ ವಾಸಿ-ಸಿದ್ದಾನೆ. ಭಗವಾನ್ ಶಿವನು ಸರ್ವವ್ಯಾಪಿಯಿರುವನು." "ಒಳಗೂ ಹೊರಗೂ ಎಲ್ಲವನ್ನೂ ವ್ಯಾಪಿಸಿ ನಾರಾಯಣನು ಇರುವನು" ಮುಂತಾದ ಶ್ರುತಿಗಳಿಂದ ಆ ಶಿವ ನಾರಾಯಣರಿಗೆ ಸರ್ವವ್ಯಾಪಿತ್ವವನ್ನಿಟ್ಟುಕೊಳ್ಳುವಿರೋ ? ಅಥವಾ "ಉಮೆಯಿಂದೊಡಗೂಡಿದ ಮೂರುಕಣ್ಣುಳ್ಳ ಶಾಂತಮೂರ್ತಿಯಾದ ಅಜ್ಞಾನಾಂಧಕಾರದಿಂದ ಹೊರಗಿದ್ದು ಸರ್ವಸಾಕ್ಷಿಯಾದ ಪ್ರಭು ಪರಮೇ-ಶ್ವರನನ್ನು ಧ್ಯಾನಿಸಿ ಅಜ್ಞಾನವನ್ನು ಕಳಕೊಳ್ಳುವನು." "ಆಮೇಲೆ ಮತ್ತೆ ಆ ನಾರಾಯಣನು

ಮನಸ್ಸಿನಿಂದ ಆಲೋಚಿಸಿದನು. ಅವನು ಧ್ಯಾನಿಸಿದಕೂಡಲೇ ಆತನ ಲಲಾಟದಿಂದ ಮುಕ್ಕಣ್ಣುಳ್ಳ ಶೂಲಪಾಣಿಯು ಹುಟ್ಟಿದನು" ಮುಂತಾದ ಶ್ರುತಿಗಳಿಂದ ವಿಗ್ರಹವನ್ನು ಒಪ್ಪು-ವಿರೋ ? ಹೀಗೆ ಎರಡು ಪ್ರಶ್ನೆಗಳನ್ನು ಕೇಳಬೇಕಾಗುವದು. ಆದರೆ= "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ" ಮುಂತಾದ ಶ್ರುತಿಗಳಲ್ಲಿರುವ ಬ್ರಹ್ಮಪದದಿಂದಲೇ ಸರ್ವವ್ಯಾಪಿತ್ವವು ಸಿದ್ಧಿ-ಸುವಾಗ ಶಿವ ನಾರಾಯಣ ಶಬ್ದಗಳನ್ನು (ಈ ಶಬ್ದಗಳು ಹಸ್ತ-ಕರ-ಪಾಣಿ ಶಬ್ದಗಳಂತೆ ವ್ಯಾಪಕವಲ್ಲದ ಒಂದು ಸ್ವರೂಪದ ಪರ್ಯಾಯವಾದ್ದರಿಂದ) ಪ್ರಯೋಗಿಸಿ "ಛಾಗಪಶು" ನ್ಯಾಯವನ್ನು ಇಲ್ಲಿ ಯೋಜಿಸಲು ಅಂದರೆ ಸಾಮಾನ್ಯವಾಗಿ ತಿಳಿದದ್ದನ್ನು ವಿಶೇಷ ಪರ್ಯ-ವಸಾನಮಾಡು--ಬರುವಂತಿಲ್ಲವಾದ್ದರಿಂದ ಮೊದಲನೇ ಪ್ರಶ್ನೆಗೆ ಅವಕಾಶವಿಲ್ಲ.

ಇನ್ನು ಎರಡನೇ ಪ್ರಶ್ನೆ = ಇದರಲ್ಲಿ ಮೂರು ವಿಭಾಗ ಮಾಡಬಹುದು.

೧)= ಶಿವ ನಾರಾಯಣರ ಬರೇ ವಿಗ್ರಹಕ್ಕೆ ಜಗತ್ಕಾರಣತ್ವವೋ ?

೨)= ಅಥವಾ ಬರೇ ಅಂತರ್ಗತ ಬ್ರಹ್ಮಚೇತನಕ್ಕೋ ?

೩)= ಅಥವಾ ಆ ದೇಹದಿಂದೊಡಗೂಡಿದ ಆ ಚೈತನ್ಯಕ್ಕೋ ? " ಎಂದು.

ಬರೇ ವಿಗ್ರಹವು ಮಾಯೆಯ ಕಾರ್ಯವಾದ್ದರಿಂದ ವ್ಯಾಪಕವಲ್ಲದ್ದರಿಂದಲೂ ಅಚೇ-ತನವಾದ್ದರಿಂದಲೂ--ನಿಮಿತ್ತಉಪಾದಾನ ಕಾರಣದ್ವಯ--ರೂಪವಾಗಲಾರದ್ದರಿಂದ ಮೊದಲನೇ ವಿಭಾಗವು ನಿಷ್ಫಲವಾಗುವದು.

"ತುಪ್ಪವು ತಾನಾಗಿ ಹೆಪ್ಪುಗಟ್ಟಂತೆ ಬರೇ ಕೃಪೆಯಿಂದಲೇ ಮಹಾನಂದರೂಪವಾದ ತಾಂಡವವೊಂದು ಆವಿರ್ಭವಿಸಿತು" ಎಂಬ ಸ್ಕಾಂದವಚನದಂತೆ ಘೃತ ಕಾಠಿನ್ಯ ದೃಷ್ಟಾಂತದಿಂದ ವಿಗ್ರಹ-ವಿಗ್ರಹಿಗಳೊಡನೆ ಅಭೇದವನ್ನೊಪ್ಪಿ ಆ ವಿಗ್ರಹಕ್ಕೆ ಜಗತ್ಕಾರಣತ್ವವನ್ನು ಹೇಳುವಂತೆಯೂ ಇಲ್ಲ. ಯಾಕಂದರೆ= ವಿಗ್ರಹವು ಪರಿಚ್ಛಿನ್ನ-ಅವ್ಯಾಪಕವಾದ್ದರಿಂದ ವಿಗ್ರಹಿಯು ವ್ಯಾಪಕನಾದ್ದರಿಂದ ಅವರಿಬ್ಬರೊಳಗೆ ಅಭೇದವು ಸಂಭವಿಸಲಾರದು. ವಿಗ್ರಹವು ಅವಯವಗಳಿಂದ ಕೂಡಿರುವ-ದಾದ್ದರಿಂದ ವಿಗ್ರಹಕ್ಕೆ ವ್ಯಾಪಕತ್ವವನ್ನು ಹೇಳಲು ಬರುವಂತಿಲ್ಲ. "ಪ್ರಕೃತಿಗೆ ಸತ್ವ--ರಜ--ತಮ-ಗಳೆಂಬ ಗುಣಗಳಿವೆ. ಆ ಗುಣಗಳಿಂದ ಕೂಡಿದ ಪರಮ ಪುರುಷನೊಬ್ಬನು ಈ ಜಗತ್ತಿನ ಸ್ಥಿತಿ ಸೃಷ್ಟಿ ಲಯಗಳನ್ನು ಅನುಕ್ರಮವಾಗಿ ಮಾಡುತ್ತ ಹರಿ-ಬ್ರಹ್ಮ-ಹರನೆಂಬ ಹೆಸರನ್ನು ಸ್ವೀಕ-ರಿಸುವನು. ಆ ಪೈಕಿ ಸತ್ವಮೂರ್ತಿಯಿಂದ ಮಾನವರಿಗೆ ಶ್ರೇಯಸ್ಸು ಲಭಿಸುವದು" ಎಂಬ ಭಾಗ-ವತ ವಚನದಂತೆ ಭಗವಂತನ ಶರೀರವು ಮಾಯಾಮಯವೆಂದು ಸಿದ್ಧವಾಗುವದು. ಹಿಂದೇ-ಹೇಳಿದ ಸ್ಕಾಂದಪುರಾಣದ ವಚನವು ವಿಗ್ರಹ--ವಿಗ್ರಹಿಗಳಿಗೆ ಅಭೇದವನ್ನು ಹೇಳುವದರಲ್ಲಿ ತಾತ್ಪರ್ಯವುಳ್ಳದ್ದಲ್ಲ. ಆ ಅಭೇದವು ಬಾಧಿತವಾಗುವದು. ಆದರೆ ಅದರ ಉದ್ದೇಶವು ಉಪಾ-ಸಕರಿಗೆ ನಾವು ಉಪಾಸನಾಮಾಡುತ್ತಿರುವ ವಿಗ್ರಹವು ಪರಮೇಶ್ವರನದೇ ಅಂದರೆ ಪರಮೇಶ್ವ-ರನೇ ಎಂಬ ವಿಶ್ವಾಸವನ್ನು ಹುಟ್ಟಿಸುವದಾಗಿದೆ.

ಇನ್ನೂ ಎರಡನೇ ವಿಭಾಗದ ವಿಚಾರ:- ಆ ಚೈತನ್ಯವು ಕೇವಲ-ಶುದ್ಧವಾಗಿರದೇ "ಮಾಯಿಯು ವಿಶ್ವವನ್ನು ಹುಟ್ಟಿಸುವನು." ಎಂಬಿವೇ ಮೊದಲಾದ ಶ್ರುತಿಗಳಿಂದ ಮಾಯಾ-ಸಂಬಂಧವುಳ್ಳ ಚೈತನ್ಯವೇ ಎಂದು ಒಪ್ಪಬೇಕಾದ್ದರಿಂದ ಅದು ಈಗ ನಾವುಸಿದ್ಧಪಡಿಸಲು

ಹೊರಟಪಕ್ಷವೇ ಇರುವದರಿಂದ ನಮಗದು ಇಷ್ಟವಾಯಿತು. ನಿಮಗೆ--ವಿಗ್ರಹವಿಕಲ್ಪವಾದ ದೇವನೇ ಜಗತ್ಕಾರಣನೆಂಬ ವಾದಿಗೆ--ಅನಿಷ್ಟವಾದದ್ದು.

ಇನ್ನು ಮೂರನೇದಾದ ವಿಗ್ರಹ ವಿಶಿಷ್ಟನಿಗೆ ಜಗತ್ಕಾರಣತ್ವ ಪಕ್ಷವು ಸಮಂಜಸವಲ್ಲ. ಆ ವಿಶಿಷ್ಟನಿಗೆ ನಿಮ್ಮ ಸಿದ್ಧಾಂತಗಳಲ್ಲಿ ನಿಮಿತ್ತ ಕಾರಣತ್ವವನ್ನೂ ಉಪಾದಾನ ಕಾರಣತ್ವವನ್ನೂ ಒಪ್ಪದಿರುವದರಿಂದ ಸಿದ್ಧಾಂತ ಹಾನಿಪ್ರಸಂಗ ಬರುವದು. ನಿಮ್ಮ ಎಲ್ಲ ಗ್ರಂಥಕಾರರೂ "ಸತ್ವೋಪಹಿತ ವೇಷದಿಂದ ನಿಮಿತ್ತಕಾರಣನೆಂತಲೂ ತಮೋಗುಣ ಪ್ರಧಾನವಾದ ಮಾಯೋಪಹಿತ ವೇಷದಿಂದ ಉಪಾದಾನ ಕಾರಣನೆಂತಲೂ ಹೇಳಿದ್ದಾರೆ. ನಮ್ಮ ವಿದ್ಯಾರಣ್ಯ ಸ್ವಾಮಿಯವರೂ ತಮ್ಮ ಪಂಚದಶೀ ಗ್ರಂಥದಲ್ಲಿ "ತಾಮಸ ಮಾಯೆಯನ್ನು ಹಿಡಿದು ಬ್ರಹ್ಮವು ಜಗತ್ತಿಗೆ ಉಪಾದಾನವಾಗುವದು. ಶುದ್ಧಸತ್ವದಿಂದ ಮಾಯೆಯನ್ನು ಹಿಡಿದು ನಿಮಿತ್ತವಾಗುವದು. ಆ ಬ್ರಹ್ಮವನ್ನು ಆ ಮಾತಿನಿಂದಲೇ ಹೀಗೆ ಹೇಳುತ್ತಿದೆ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ವಿಗ್ರಹ ವಿಶಿಷ್ಟನಾದವನಿಗೇ ಜಗತ್ಕಾರಣತ್ವವನ್ನು ಹೇಳುವ ಪುರುಷಸೂಕ್ತ ಕೈವಲ್ಯೋಪನಿಷತ್ ತಾಪನೀಯ ಮುಂತಾದ ಶ್ರುತಿಗಳ ಗತಿಯೇನು?

ಸ್ಕಾಂದ ಪುರಾಣದಲ್ಲಿ= "ಎಲ್ಲೆ ವೇದಪಾರಗರಾದ ಬ್ರಾಹ್ಮಣರೇ ಕೆಲವು ವೇದವಾಕ್ಯಗಳು ರುದ್ರಮೂರ್ತಿಯನ್ನು ಆಶ್ರಯಿಸಿ ಜಗತ್ಕಾರಣತ್ವವನ್ನು ಹೇಳುತ್ತ ಪರಮಕಾರಣನಾದ ಶಿವನನ್ನು ಮುಟ್ಟುತ್ತವೆ. ಕೆಲವು ವಿಷ್ಣುಮೂರ್ತಿಯನ್ನೂ ಬ್ರಹ್ಮಮೂರ್ತಿಯನ್ನೂ ಅಗ್ನಿಮೂರ್ತಿಯನ್ನೂ ಮತ್ತೆಕೆಲವು ಸೂರ್ಯಮೂರ್ತಿಯನ್ನೂ ಆಶ್ರಯಿಸಿ ಪರಮಕಾರಣವನ್ನೇ ಮುಟ್ಟುತ್ತವೆ. ಹದಿನೆಂಟು ಪುರಾಣಗಳಲ್ಲಿ ಹತ್ತುಪುರಾಣಗಳು ರುದ್ರನನ್ನು ಹೊಗಳುತ್ತವೆ. ನಾಲ್ಕು ವಿಷ್ಣುಪರವಾಗಿವೆ. ಎರಡು ಬ್ರಹ್ಮನನ್ನು ಸ್ತುತಿಸುತ್ತವೆ. ಒಂದು ಅಗ್ನಿಯನ್ನೂ ಒಂದು ಸೂರ್ಯನನ್ನೂ ಹೇಳುತ್ತವೆ. ಹೀಗೆ ಮೂರ್ತಿಗಳನ್ನೂ ಹೊಗಳುತ್ತ ಆ ದ್ವಾರಾ ಸರ್ವಮೂರ್ತಿಗಳಲ್ಲಿಯೂ ವ್ಯಾಪಿಸಿರುವ ಮಹಾದೇವನನ್ನೇ ಮುಟ್ಟುತ್ತವೆ. ಆ ಸತ್ಯಾದಿ ಲಕ್ಷಣಗಳಿಂದ ಕೂಡಿದ ಪರಶಿವನೇ ಸರ್ವಮೋಚನನಾಗಿರುವನು." ಎಂಬಿವೇ ಮುಂತಾದ ವಚನಗಳಿಂದ "ಪರಮಕಾರಣನಾದ ಶಿವನು" ಎಂದು ಉಪಕ್ರಮಿಸಿ "ಎಲ್ಲಾ ಮೂರ್ತಿಗಳಲ್ಲಿಯೂ ವ್ಯಾಪಿಸಿರುವ" ಎಂದು ಉಪಸಂಹಾರಮಾಡಿದ್ದರಿಂದ ಮಾಯೋಪಹಿತನಾದ ಅಮೂರ್ತ ಪರಮೇಶ್ವರನಲ್ಲಿರುವ ಜಗತ್ಕಾರಣತ್ವವನ್ನೇ ಶಿವ ವಿಷ್ಣು ಮುಂತಾದ ವಿಗ್ರಹವುಳ್ಳ ದೇವತೋಪಾಸನೆಗಾಗಿ ಆ ಆ ವಿಗ್ರಹ ವಿಶಿಷ್ಟರಲ್ಲಿ ಇರುವುದಾಗಿ ಹೇಳುವ ಆ ಪುರುಷಸೂಕ್ತ--ಕೈವಲ್ಯ--ತಾಪನೀಯ ಉಪನಿಷತ್ತುಗಳಿಗೆ ಯಾವಬಾಧಕವೂ ಬರಲಾರದು. ವಿಗ್ರಹವಿಶಿಷ್ಟನಿಗೇ ಜಗತ್ಕಾರಣತ್ವವನ್ನು ಹೇಳುವದಾದರೆ= ಶಿವನಿಗೋ? ವಿಷ್ಣುವಿಗೋ? ಎಂಬ ನಿರ್ಣಯಮಾಡಲಾಗುವದಿಲ್ಲ. ಶ್ವೇತಾಶ್ವತರ--ಅಥರ್ವಶಿಖಾದಿ ಶ್ರುತಿಗಳ ಆಧಾರದಿಂದ ಶಿವವಿಗ್ರಹ ವಿಶಿಷ್ಟನಿಗೇ ಕಾರಣತ್ವವೆಂದು ಹೇಳಿದರೆ= "ನಾರಾಯಣನು ಮತ್ತೊಮ್ಮೆ ಧ್ಯಾನಿಸಿದಾಗ ಆತನ ಲಲಾಟದಿಂದ ಮುಕ್ಕಣ್ಣನು ಹುಟ್ಟಿದನು" ಎಂಬ ಮಹೋಪನಿಷತ್ತಿನ ಆಧಾರದಿಂದ ನಾರಾಯಣ ವಿಗ್ರಹ (ವೈಷ್ಣವರುಹೇಳುವ) ವುಳ್ಳವನಿಗೇ ಕಾರಣತ್ವವನ್ನು ಏಕೆ ಹೇಳಬಾರದು? ಕೆಲವು ಶ್ರುತಿಗಳಲ್ಲಿ ಶಿವನಿಂದ ನಾರಾಯಣ ಉತ್ಪತ್ತಿಯನ್ನು ಹೇಳಿದರೆ ಮತ್ತೆ ಕೆಲವು ಶ್ರುತಿಗಳಲ್ಲಿ ನಾರಾಯಣನಿಂದ ಶಿವನ ಉತ್ಪತ್ತಿಯನ್ನು ಹೇಳುತ್ತದೆ. ಆದ್ದರಿಂದ ಹಾಗೆ ಅವರಿಬ್ಬರಲ್ಲಿ ಒಬ್ಬನು ಕಾರಣನೆಂದು ನಿರ್ಣಯ ಮಾಡಲಾಗುವದಿಲ್ಲವಾದ್ದರಿಂದ ಅವರಿಬ್ಬರಿಗೂ ಅಭಿನ್ನನಾದ ನಾವು ಹೇಳುವ ಅಮೂರ್ತ

ದಾದರೆ= ಶಿವನಿಗೋ? ವಿಷ್ಣುವಿಗೋ? ಎಂಬ ನಿರ್ಣಯಮಾಡಲಾಗುವದಿಲ್ಲ. ಶ್ವೇತಾಶ್ವತರ--ಅಥರ್ವಶಿಖಾದಿ ಶ್ರುತಿಗಳ ಆಧಾರದಿಂದ ಶಿವವಿಗ್ರಹ ವಿಶಿಷ್ಟನಿಗೇ ಕಾರಣತ್ವವೆಂದು ಹೇಳಿದರೆ= "ನಾರಾಯಣನು ಮತ್ತೊಮ್ಮೆ ಧ್ಯಾನಿಸಿದಾಗ ಆತನ ಲಲಾಟದಿಂದ ಮುಕ್ಕಣ್ಣನು ಹುಟ್ಟಿದನು" ಎಂಬ ಮಹೋಪನಿಷತ್ತಿನ ಆಧಾರದಿಂದ ನಾರಾಯಣ ವಿಗ್ರಹ (ವೈಷ್ಣವರುಹೇಳುವ) ವುಳ್ಳವನಿಗೇ ಕಾರಣತ್ವವನ್ನು ಏಕೆ ಹೇಳಬಾರದು? ಕೆಲವು ಶ್ರುತಿಗಳಲ್ಲಿ ಶಿವನಿಂದ ನಾರಾಯಣ ಉತ್ಪತ್ತಿಯನ್ನು ಹೇಳಿದರೆ ಮತ್ತೆ ಕೆಲವು ಶ್ರುತಿಗಳಲ್ಲಿ ನಾರಾಯಣನಿಂದ ಶಿವನ ಉತ್ಪತ್ತಿಯನ್ನು ಹೇಳುತ್ತದೆ. ಆದ್ದರಿಂದ ಹಾಗೆ ಅವರಿಬ್ಬರಲ್ಲಿ ಒಬ್ಬನು ಕಾರಣನೆಂದು ನಿರ್ಣಯ ಮಾಡಲಾಗುವದಿಲ್ಲವಾದ್ದರಿಂದ ಅವರಿಬ್ಬರಿಗೂ ಅಭಿನ್ನನಾದ ನಾವು ಹೇಳುವ ಅಮೂರ್ತ (ವಿಗ್ರಹವಿಲ್ಲದ) ಮಾಯೋಪಹಿತನಾದ ಪರಮೇಶ್ವರನೇ ಜಗತ್ಕಾರಣನೆನ್ನುವದು ಸಮಂಜಸ. ಇದರಿಂದ "ಬ್ರಹ್ಮ ವಿಷ್ಣು ರುದ್ರ ಇಂದ್ರಾದಿಗಳು ಸರ್ವೇಶ್ವರನಾದ ಶಂಭುವಿನಿಂದ ಹುಟ್ಟುವರು" ಎಂಬ ಶ್ರುತಿಯಿಂದ ಆ ಬ್ರಹ್ಮಾದಿಗಳು ಜೀವರು ಎಂಬಂತಾಗುವದಿಲ್ಲವೇ ಎನ್ನುವ ಮಾತೂ ಸಹ ಹುಟ್ಟುವದಿಲ್ಲ.

"ಈ ಪುರುಷನಿಗೆ ನಾಭಿ--ಹೃದಯ--ಕಂಠ--ಮೂರ್ಧಾ ಎಂಬ ನಾಲ್ಕುಸ್ಥಾನಗಳು ಪ್ರಕಾಶಕ್ಕೆ ಯೋಗ್ಯವಾದವುಗಳು. ಇಲ್ಲಿ ನಾಲ್ಕುಪಾದಗಳುಳ್ಳ ಬ್ರಹ್ಮವು ತೋರುತ್ತದೆ. ಜಾಗೃದವಸ್ಥೆಯಲ್ಲಿ ಬ್ರಹ್ಮನೂ, ಸ್ವಪ್ನದಲ್ಲಿ ವಿಷ್ಣುವೂ, ಸುಷುಪ್ತಿಯಲ್ಲಿ ರುದ್ರನೂ, ನಾಲ್ಕನೇದು ಅಕ್ಷರವೂ ಎಂದು ತಿಳಿಯುತ್ತದೆ." ಎಂಬ ಬ್ರಹ್ಮೋಪನಿಷತ್ತಿನ ವಚನದಿಂದಲೂ—— "ಒಬ್ಬನೇಒಬ್ಬ ಪರಶಿವನು ಬ್ರಹ್ಮ ವಿಷ್ಣು ಶಿವನಾಮಗಳಿಂದ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವನು" "ಬ್ರಹ್ಮ ವಿಷ್ಣು ರುದ್ರರು ಸಹಿತ ವಿಭೇದವುಳ್ಳವರಾದರೂ ಪರಮಾತ್ಮ--ವಿಭಾಗದಲ್ಲಿಯೇ ಸೇರುವರು. ಜೀವ ವ್ಯೂಹದಲ್ಲಿ ಸೇರುವದಿಲ್ಲ. ಜೀವರು ಪುಣ್ಯಪಾಪಗಳಿಂದಕೂಡಿ ರಾಗದ್ವೇಷಕಲುಷಿತರು. ಜನ್ಮನಾಶವುಳ್ಳವರು ಸಂಸಾರಿಗಳು ಪರಾಧೀನರು. ಬ್ರಹ್ಮ ವಿಷ್ಣು ರುದ್ರರು ಹಾಗಲ್ಲ. ಅವರ ಜನ್ಮವು ಪುಣ್ಯಪಾಪಗಳಿಂದಲ್ಲ. ಬರೇ ಆವಿರ್ಭಾವ ತಿರೋಭಾವವೇ (ಕಾಣುವದು ಅಡಗುವದು) ಜನ್ಮನಾಶಗಳೆಂದು ಹೇಳುವರು. ಪರತತ್ವದ ಆಜ್ಞೆಯಮೇರೆಗೆ ಜೀವಿಗಳ ಹಿತಕ್ಕಾಗಿಯೇ ಆ ಜನ್ಮನಾಶಗಳನ್ನು ಸ್ವೀಕರಿಸುವರು ಬ್ರಹ್ಮಾದಿಗಳ ಈ ಜನ್ಮನಾಶಗಳು ಜೀವಿಗಳಿಂದ ತಮ್ಮ ಸುಖಕ್ಕಾಗಿ ಸೇವಿಸಲ್ಪಡುವಂಥವು" ಎಂಬ ಸೂತಸಂಹಿತಾ ವಿಷ್ಣುಪುರಾಣ ವಚನಗಳಿಂದಲೂ-- "ಮಾಯೆಗೆ ಸತ್ವ ರಜ ತಮ ಎಂಬ ಮೂರುಗುಣಗಳಿವೆ. ಅವುಗಳಿಂದ ಕೂಡಿದ ವಿಷ್ಣು ಬ್ರಹ್ಮ ರುದ್ರ ಎಂಬ ಸಂಜ್ಞೆಗಳನ್ನು ಪಡೆದು ಸ್ಥಿತಿ-ದೃಷ್ಟಿ-ಲಯಗಳನ್ನು ಕ್ರಮವಾಗಿ ಮಾಡುತ್ತ ಆ ಪರಮಪುರುಷನು ತನ್ನ ಸತ್ವಶರೀರದಿಂದ ಮಾನವರಿಗೆ ಶ್ರೇಯಸ್ಸನ್ನು ನೀಡುವನು." ಎಂಬ ಭಾಗವತ ಪುರಾಣವಚನದಿಂದಲೂ ಬ್ರಹ್ಮಾದಿ ತ್ರಿಮೂರ್ತಿಗಳು ಪರಮಾತ್ಮ ಭಾಗದಲ್ಲಿ ಸೇರುವರೆಂಬದೂ ಮೋಕ್ಷದ ಅಪೇಕ್ಷೆಯುಳ್ಳ ಜನರು ಸೇವಿಸಲು ಯೋಗ್ಯರೆಂಬದೂ ಜನ್ಮನಾಶಗಳೆಂದರೆ ಆವಿರ್ಭಾವ ತಿರೋಭಾವ ರೂಪವಾದವುಗಳೆಂಬದೂ ತಿಳಿದುಬರುವದರಿಂದ ಅವರು ಜೀವರಲ್ಲ; ಅಸೇವ್ಯರಲ್ಲ, ಜನ್ಯರಲ್ಲ, ಎಂದು ಸಿದ್ಧವಾದಾಗ ಹಿಂದಿನ ಶಂಕೆಗೆ ಅವಕಾಶವಿಲ್ಲ.

ಆದ್ದರಿಂದ ಮಾಯೋಪಹಿತನಾದ ಜಗತ್ತಿಗೆ ಕಾರಣನಾದ ಒಬ್ಬನೇ ಆದ ಪರಮೇಶ್ವರನು ತನ್ನ ಮಾಯೆಯಲ್ಲಿರುವ ಮೂರುಗುಣಗಳ ಮೂಲ ಸ್ವೇಚ್ಛೆಯಮೇರೆಗೆ ತ್ರಿಮೂರ್ತಿ ರೂಪದಿಂದ ಆವಿರ್ಭಾವ ತಿರೋಭಾವವನ್ನು ಹೊಂದುವನು ಎಂದು ಒಪ್ಪಬೇಕಾದ್ದರಿಂದ "ಬ್ರಹ್ಮ ವಿಷ್ಣು ರುದ್ರ ಇಂದ್ರ ಮುಂತಾದವರು ಸರ್ವೇಶ್ವರನಿಂದ ಹುಟ್ಟುವರು" ಎಂಬಿವೇ-

ಮುಂತಾದ ಶ್ರುತಿಗಳಿಗೆ ಅಂಥ ಆವಿರ್ಭಾವ ತಿರೋಭಾವ ಪರತ್ವವನ್ನೇ ಹೇಳಬೇಕಾಗುತ್ತದೆ.

ಇಲ್ಲೊಂದು ಶಂಕೆ ಮಾಡಬಹುದು= "ಸರ್ವೈಶ್ವರ್ಯ ಸಂಪನ್ನನಾದ ಆಕಾಶಮಧ್ಯಗತ ಶಂಭುವು ಜಗತ್ಕಾರಣನೆಂದು ತಿಳಿಯಬೇಕು." ಮುಂತಾದ ಶ್ರುತಿಗಳಿಂದ ತುರೀಯ ಶಿವನಿಗೆ ಕಾರಣತ್ವವನ್ನು ಹೇಳೋಣ. "ನಾರಾಯಣನಿಂದ ರುದ್ರನು ಹುಟ್ಟಿದನು" ಎಂಬ ಶ್ರುತಿಯು ಹೇಳುವ ರುದ್ರನು ತ್ರಿಮೂರ್ತಿಗಳೊಳಗಿನವನು. ಹೀಗಿದ್ದರೆ ಎಲ್ಲವೂ ಸರಿಹೋಗುವದಿಲ್ಲವೇ ?

ಸರಿ; ಆ ಪರಮ--ತುರೀಯ--ಶಿವನಾರು ? ಮಾಯೋಪಹಿತನಾದ; ಆತನಿಗೆ ವಿಗ್ರಾಹವಿಶಿಷ್ಟರೂಪದಿಂದ ಜಗತ್ಕಾರಣತ್ವವನ್ನು ಕಲ್ಪಿಸಲು ಬರುವಂತಿಲ್ಲ. ವಿಗ್ರಹವು ಅವಯವವುಳ್ಳದಾದ್ದರಿಂದ ಅದು ಮಾಯೆಯಿಂದ ಹುಟ್ಟುವದು; ಎಂಬದನ್ನು ಮೊದಲೇ ಹೇಳಿರುವವು. ಮಾಯಾದಿಂದ ಹುಟ್ಟಿದ್ದರಿಂದಲೇ ಆ ವಿಗ್ರಹವು ಅನಾದಿಯಾಗಲಾರದು. "ಪಾಣಿಪಾದಗಳಿಲ್ಲದಿದ್ದರೂ ಸ್ವೀಕರಿಸುವನು. ಚನ್ನಾಗಿ ಓಡುವನು;" ಎಂಬ ಶ್ರುತಿಯಿಂದಲೂ "ವಿಕರತ್ವಾತ್ನೇತಿಚೇತ್, ತದುಕ್ತಂ" ಎಂಬ ಬ್ರಹ್ಮಸೂತ್ರದಿಂದಲೂ "ಕರಣಗಳಿಲ್ಲದಿದ್ದರೂ ಸರ್ವಸಾಮಾನ್ಯವಿದೆ ಎಂದು ಹೇಳುತ್ತದೆ" ಎಂಬ ಭಾಷ್ಯದಿಂದಲೂ ವಿರೋಧಬರುವದರಿಂದ ಪರಮೇಶ್ವರನಿಗೆ ವಿಗ್ರಹನನ್ನು ಒಪ್ಪುವಂತಿಲ್ಲ. ವಿಗ್ರಹೋಪಹಿತರೂಪದಿಂದ ನಿಮಿತ್ತಕಾರಣನಾಗಲು ಶಕ್ಯವಿಲ್ಲವೆಂಬದನ್ನು ಮೊದಲೇ ಹೇಳಿದ್ದೇವೆ.

ಕೇವಲ ಮಾಯೋಪಹಿತ—ವಿಗ್ರಹೋಪಹಿತರೂಪದಿಂದ ಕಾರಣತ್ವವನ್ನು ಹೇಳುವದಾದರೆ ಅದು ನಾವುಹೇಳುತ್ತಿರುವದೇ ಆದ್ದರಿಂದ ಘಟ್ಟಕುಟೀ ಪ್ರಭಾತದ ಕಥೆಯನ್ನು ಅನುಸರಿಸಿದಂತಾಗುತ್ತದೆ.

(ಒಬ್ಬ ಗಾಡಿವಾಲನು ಕೆಲವು ಮೂಟೆಗಳನ್ನು ಗಾಡಿಯಮೇಲೆ ಹೇರಿಕೊಂಡು ತನ್ನ ಊರಿಂದ ಮತ್ತೊಂದು ಊರಿಗೆ ಹೊರಟಿದ್ದ. ದಾರಿಯಲ್ಲಿ ಆತನಿಗೆ ಒಂದು ಟೋಲನಾಕೆಯು ಹತ್ತುತ್ತಿತ್ತು. ಸಾಯಂಕಾಲವಾಗುತ್ತ ಬಂದುದನ್ನು ಕಂಡು ಟೋಲನ್ನು ತಪ್ಪಿಸಲು ಒಂದು ಯುಕ್ತಿಯನ್ನು ಹೂಡಿದ. ಅಡ್ಡದಾರಿಯಲ್ಲಿ ತನ್ನ ಗಾಡಿಯನ್ನು ತಿರುಗಿಸಿದ ರಾತ್ರಿಯಲ್ಲಾ ಸುತ್ತಾಡಿದ. ಎತ್ತುಗಳ ಕಾಲುಗಳಿಗೆ ಮುಳ್ಳುಕಲ್ಲುಗಳು ತಾಕಿ ರಕ್ತಸ್ರೋರುತ್ತಿತ್ತು. ಮೈಮೇಲೆ ಬಾಸಳೆಗಳೆದ್ದವು. ಬೆಳಗಾಗುತ್ತಲೇ ಆ ಗಾಡಿಯು ಆ ಟೋಲನಾಕೆಯ ಬಾಗಿಲಲ್ಲಿ ಬಂದು ನಿಂತಿತು. ನಾಕೆಯ ಯಜಮಾನನೆಂದ; "ಏ ಗಾಡೀವಾಲಾ ! ಟೋಲನ್ನು ತೆಗೆ; ಎಂದು. ಇದಕ್ಕೆ ಘಟ್ಟಕುಟೀ ಪ್ರಭಾತದ ನ್ಯಾಯವೆಂದು ಹೇಳುವರು. ಒಬ್ಬ ವಾದಿಯು ಪ್ರತಿವಾದಿಯ ಮತಕ್ಕೊಪ್ಪಿದ ವಿಷಯವನ್ನು ತಾನೊಪ್ಪಬಾರದೆಂದು ಬೇರೊಂದು ರೀತಿಯಿಂದ ಸುತ್ತಾಡಿ ಕೊನೆಗೆ ಆ ಪ್ರತಿವಾದಿಯ ಮತದ ವಿಷಯವನ್ನೇ ಒಪ್ಪುವ ಸಂದರ್ಭ ಬಂದಾಗ ಈ ನ್ಯಾಯವನ್ನು ಉದಾಹರಿಸುತ್ತಾರೆ.)

ಇಲ್ಲಿ ನಾಲ್ಕನೇ ಮೂರ್ತಿಯನ್ನು ಒಪ್ಪುವ ಕೆಲವು ಶೈವರು ಶಂಕೆಮಾಡುವದುಂಟು; "ಜಗತ್ತಿನ ಸೃಷ್ಟಿಗಾಗಿ ನಾಲ್ಕನೇ ಶಿವಮೂರ್ತಿಯನ್ನೊಪ್ಪದಿದ್ದರೂ ಉಪಾಸನೆಯ ಬಗ್ಗೆ ಒಪ್ಪಲೇಬೇಕು. "ಸರ್ವೈಶ್ವರ್ಯ ಸಂಪನ್ನನಾದ ಸರ್ವೇಶ್ವರ--ಶಂಭುವನ್ನು ಆಕಾಶಮಧ್ಯದಲ್ಲಿ ಧ್ಯಾನಿಸ_

ಬೇಕು" ಎಂಬ ಅಥರ್ವ ಶಿಖೋಪನಿಷತ್ತಿನ ವಾಕ್ಯವು ಹಾಗೆ ಹೇಳುತ್ತದೆ. ಹೀಗೆಂದಾಗ ಬ್ರಹ್ಮಾದಿ ತ್ರಿಮೂರ್ತಿಗಳಿಂದ ಹೊರತಾದ ನಾಲ್ಕನೇ ಮೂರ್ತಿಯಾದ ಪರಶಿವನಿಗೆ ಅವರಿಗಿಂತಲೂ ಹೆಚ್ಚಳವೂ ಸಿದ್ಧಸುವದು" ಎಂದು. ಇದಕ್ಕೆ ಹೇಳುವೆವು:- ಅಥರ್ವ ಶಿಖೋಪನಿಷತ್ತಿನಲ್ಲಿ ಮೇಲೆ ತೋರಿಸಿದ ವಾಕ್ಯಕ್ಕೂ ಹಿಂದೆ ಹೀಗಿದೆ:-

"ಈಶಾನನ್ನು ಧ್ಯಾನಿಸಿರಿ; ಈ ಕಾಣುವ ಪ್ರಪಂಚವನ್ನೆಲ್ಲ ಧ್ಯಾನಿಸಿರಿ; ಬ್ರಹ್ಮ-ವಿಷ್ಣು ರುದ್ರೇಂದ್ರರನ್ನು 'ಹುಟ್ಟಿಸುವ, ಮತ್ತು ಸರ್ವೇಂದ್ರಿಯಗಳಿಂದ ಕೂಡಿದ ಈ ಪಂಚಮಹಾಭೂತಗಳನ್ನು ಸೃಷ್ಟಿಸುವ, ಕಾರಣಗಳಿಗೂ ಕಾರಣನಾದ" ಎಂದು ಹೇಳಿ ಆ ಮುಂದೆ ಸರ್ವೈಶ್ವರ್ಯ ಸಂಪನ್ನ— ಮುಂತಾದ ಭಾಗವನ್ನು ಹೇಳಿದೆ. ಇಲ್ಲಿ "ಈಶಾನನ್ನು ಧ್ಯಾನಿಸಿರಿ; ಕಾರಣನನ್ನು ಧ್ಯಾನಿಸಿರಿ;" ಎಂಬಿವೇ ಮುಂತಾದ ಸಂದರ್ಭದಿಂದ ಜಗತ್ತಿಗೆ ಕಾರಣನಾದವನನ್ನು ಧ್ಯಾನಿಸಲು ಹೇಳುತ್ತಿದೆ. ಕಾರತ್ವವು ಮಾಯೋಪಹಿತವಾದ ಅಮೂರ್ತ ಶಿವನಿಗೇ ಇರುವುದೆಂದು ಈ ಮೊದಲೇ ನಾವು ಹೇಳಿದ್ದೇವೆ. ಅದಕ್ಕನುಗುಣವಾಗಿ ಅಲ್ಲಿಯ ಶಿವ, ಶಂಭು ಶಬ್ದಗಳಿಗೆ ಅಮೂರ್ತ ಶಿವನೇ ಅರ್ಥವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಆ ಅಥರ್ವ ಶಿಖಾ-ಉಪನಿಷತ್ತಿಗೆ ನಾಲ್ಕನೇ ಮೂರ್ತಿಯನ್ನು ಹೇಳುವ ಗುರಿಯನ್ನು ಕಲ್ಪಿಸಲು ಬರುವದಿಲ್ಲ

ಅಥವಾ "ಉಮಾಸಹಾಯನಾದ ಮೂರು ಕಣ್ಣುಳ್ಳ ಪರಮೇಶ್ವರನನ್ನು ಧ್ಯಾನಿಸಬೇಕು" ಎಂಬ ಕೈವಲ್ಯ ಶ್ರುತಿಗೆ ತಕ್ಕಂತೆ ಅಥರ್ವ ಶಿಖೋಪನಿಷತ್ತಿನ ವಾಕ್ಯವನ್ನು ಅರ್ಥಮಾಡುವಂತೆಯೂ ಇಲ್ಲ. ಏಕೆಂದರೆ: ತ್ರಿಮೂರ್ತಿಗಳೊಳಗಿನ ಶಿವನನ್ನು ಮೂರ್ತನಲ್ಲದ ಪರಶಿವನ ರೂಪದಿಂದ ಉಪಾಸನೆ ಮಾಡಲು ಬೋಧಿಸುತ್ತದೆ ಎಂದು ಅರ್ಥಮಾಡಲು ಸಮಂಜಸವಾಗಿ ಹಿಂದು--ಮುಂದಿನ ಸಂದರ್ಭವು ಕೂಡುತ್ತದೆ. ಈಶಾನನನ್ನು ಧ್ಯಾನಿಸಿರಿ; ಎಂದು ಆರಂಭಿಸಿ ಕಾರಣನು ಧ್ಯೇಯನು; ಎಂದು ಅಮೂರ್ತ ಶಿವನ ರೂಪವನ್ನು ಹೇಳಿ ಬ್ರಹ್ಮಾದಿಗಳಿಗೂ ಆತ ಕಾರಣ; ಎಂದು ಆ ಕಾರಣತ್ವವನ್ನು ವಿವರಿಸುವದರಿಂದ ಮೂರ್ತಿ ಶಿವರೂಪದಿಂದ ಆವಿರ್ಭಾವ; ಅಮೂರ್ತ ಶಿವರೂಪದಿಂದ ಕಾರಣತ್ವ; ಹೀಗೆ ಅವಿರುದ್ಧವಾದ ರೂಪದಿಂದ ಉಪಾಸನೆಗಾಗಿ ಹಾಗೆ ಹೇಳುತ್ತಿದೆ; ಎಂದು ಸ್ಪಷ್ಟವಾಗುತ್ತದೆ.

ಇನರಂತೆ ಸ್ಕಾಂದಪುರಾಣಾದಿ ವಚನಗಳಿಗೂ ಅಭಿಪ್ರಾಯವನ್ನು ಕಲ್ಪಿಸಬೇಕು. "ಕೆಲವು ವೇದವಾಕ್ಯಗಳು ಶಿವಮೂರ್ತಿಯನ್ನು ಕೆಲವು ವಿಷ್ಣುಮೂರ್ತಿಯನ್ನಸಿ ಮತ್ತು ಬ್ರಹ್ಮ, ಅಗ್ನಿಗಳ ಮೂರ್ತಿಗಳನ್ನು ಹಿಡಿದು ಕೊನೆಗೆ ಪರಮಕಾರಣನಾದ ಅಮೂರ್ತ ಶಿವನಲ್ಲಿ ಕೊನೆಗೊಳ್ಳುವವು. ಹತ್ತು ಪುರಾಣಗಳು ರುದ್ರಮೂರ್ತಿಯನ್ನು. ನಾಲ್ಕು ವಿಷ್ಣುಮೂರ್ತಿಯನ್ನು, ಎರಡು ಬ್ರಹ್ಮನನ್ನು, ಒಂದು ಅಗ್ನಿಮೂರ್ತಿಯನ್ನು, ಒಂದು ಸೂರ್ಯಮೂರ್ತಿಯನ್ನು ಹೇಳುವವು. ಈ ರೀತಿ ಮೂರ್ತಿಗಳನ್ನು ಸ್ತುತಿಸುತ್ತ ಎಲ್ಲ ಮೂರ್ತಿಗಳಲ್ಲಿಯೂ ವ್ಯಾಪಿಸಿರುವ ಸತ್ಯಾನಂದಾದಿ ಲಕ್ಷಣಗಳುಳ್ಳ ಮಹಾದೇವನನ್ನು ಮುಟ್ಟುತ್ತವೆ. ಆತನೇ ಮೋಕ್ಷದಾತನು. ಎಲೈ ದ್ವಿಜರೇ! ಆತನನ್ನು ಉಪಾಸನೆ ಮಾಡಿರಿ" ಈ ಸ್ಕಾಂದಪುರಾಣ ವಚನಗಳಿಂದ ನಿಶ್ಚಯವಾಗುವದೇನೆಂದರೆ: ಶಿವಪರವೆಂದು ಪ್ರಸಿದ್ಧವಾದ ಕೈವಲ್ಯ—ಅಥರ್ವಶಿಖಾದಿ ಉಪನಿಷತ್ತುಗಳೂ ಸ್ಕಾಂದ-ಶೈವಪುರಾಣಗಳೂ ಗುಣಮೂರ್ತಿಯ ರೂಪದಿಂದ ಪರಮೇಶ್ವರನ ಉಪಾಸನೆಯ ಬಗ್ಗೆ ಮಾಯೋಪಹಿತನಾದ ಅಮೂರ್ತ ಶಿವನಲ್ಲಿರುವ ಜಗತ್ಕಾರಣತ್ವವನ್ನು ಗುಣಮೂರ್ತಿಯಾದ ಶಿವನಲ್ಲಿ ಹೇಳುತ್ತಿವೆ, ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಶ್ರೀಮದ್ವಿಷ್ಣು

ಭಾಗವತವು ಹೇಳುವದೂ ಹೊಂದುತ್ತದೆ. ಅದರಲ್ಲಿ ನಾಲ್ಕನೇ ಸ್ಕಂಧದಲ್ಲಿ ಅತ್ರಿಮಹರ್ಷಿಯ ತಪಶ್ಚರ್ಯೆಯ ಪ್ರಕರಣದಲ್ಲಿ "ಪ್ರಾಣಾಯಾಮದಿಂದ ಒಂದುನೂರು ವರ್ಷಗಳ ವರೆಗೆ ಮನಸನ್ನು ಬಿಗಿಹಿಡಿದು ಒಂದು ಕಾಲಿನಿಂದ ನಿಂತು ವಾಯುವನ್ನು ಆಹಾರವಾಗಿ ಸೇವಿಸುತ್ತ ಜಗದೀಶನನ್ನು "ತನಗೆ ಸದೃಶರಾದ ಪುತ್ರರನ್ನು ನೀಡು" ಎಂದು ಶರಣುಹೊಂದಿದನು. ಹೀಗೆ ಆರಂಭಿಸಿ "ನಾನು ಆರಾಧಿಸುತ್ತಿರುವ ಪರಮೇಶ್ವರನು ನನ್ನ ಕರೆಗೆ ಓ ಎಂದು ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳ ಸಮಯದಲ್ಲಿ ಮಾಯಾ ಗುಣಗಳಿಂದ ಸ್ವೀಕರಿಸುವಂತಹ ಬ್ರಹ್ಮ ವಿಷ್ಣು ರುದ್ರ ಮೂರ್ತಿಗಳಾಗಿ ನನಗೆ ದರ್ಶನ ನೀಡಿದ್ದಾನೆ. ಆ ತ್ರಿಮೂರ್ತಿಗಳಿಗೂ ನಾನು ವಂದಿಸುವೆನು. ನಾನು ಈಗ ಇಲ್ಲಿ ಎಲ್ಲ ರೀತಿಯಿಂದಲೂ ಒಬ್ಬನನ್ನೇ ಧ್ಯಾನಿಸುತ್ತಿರುವೆನು. ಹೀಗಿರಲು ಜೀವಿಗಳಿಗೆ ಸುಲಭವಾಗಿ ಕಾಣದ ನೀವು ಇಲ್ಲಿಗೆ ಬಂದು ನನಗೆ ದರ್ಶನ ನೀಡಿದ್ದು ಆಶ್ಚರ್ಯವಾಗುತ್ತದೆ; ಮೈತ್ರೇಯರು ಹೇಳುತ್ತಾರೆ: ಹೀಗೆ ಆ ಅತ್ರಿಯ ಮಾತನ್ನು ಕೇಳಿ ಆ ತ್ರಿಮೂರ್ತಿಗಳು ನಗೆಮಾಡುತ್ತ ಮೃದುವಾದ ಮಾತಿನಿಂದ ಹೇಳುತ್ತಾರೆ: ಎಲೈ ಅತ್ರಿಯೇ! ನಿನ್ನ ಸಂಕಲ್ಪದಂತೆ ಆ ಪರಮೇಶ್ವರನೇ ನಿನಗೆ ಪುತ್ರರನ್ನು ನೀಡುವನು. ನಾವು ನೀನು ಧ್ಯಾನಿಸುತ್ತಿರುವವನೇ. ಬೇರೆ ಅಲ್ಲ. ನಿನಗೆ ನಮ್ಮ ಅಂಶದಿಂದ ಲೋಕವಿಖ್ಯಾತರಾದ ನಿನ್ನ ಯಶಸ್ಸನ್ನು ಬೆಳಗುವ ಪುತ್ರರು ಹುಟ್ಟುವರು; ಎಂದು ಹೇಳಿ ಹೊರಟುಹೋದರು" ಎಂದು ಹೇಳಿದೆ. ಈ ವಚನಗಳಿಂದ ಒಬ್ಬನಾದ ಜಗದೀಶನನ್ನು ಧ್ಯಾನಿಸುತ್ತಿರುವ ಅತ್ರಿಮಹರ್ಷಿಗೆ ತ್ರಿಮೂರ್ತಿ ರೂಪದಿಂದ ದರ್ಶನಕೊಟ್ಟು ಆ ಪರಮೇಶ್ವರನು ಅನುಗ್ರಹಿಸಿದನೆಂಬುದು ಸ್ಪಷ್ಟವಾಗುವದರಿಂದ ಜಗದೀಶನಿಗೆ ತ್ರಿಮೂರ್ತಿ ರೂಪಕ್ಕೆ ಹೊರತಾಗಿ ಮತ್ತೊಂದು ಈ ತ್ರಿಮೂರ್ತಿಗಳಿಗೆ ಮೂಲವಾದದ್ದು ಮೂರ್ತರೂಪವು ಇಲ್ಲವೆಂದು ಸಿದ್ಧವಾಗುವದು.

ಹಾಗಾದರೆ= ಸ್ಕಂದ ಪುರಾಣದಲ್ಲಿಯು "ಅರೂಪನಾದ ಶಿವನಿಗೆ ಉಪಾಸಕರು ಧ್ಯಾನಿಸುವ ಮೂರ್ತಿ ಇದೆ. ಆ ಮೂರ್ತಿಯ ಅರ್ಧಭಾಗವು ಉಮಾ ರೂಪದಿಂದ ಇದೆ, ಮತ್ತು ಮೂರು ಕಣ್ಣು, ಹಣೆಯಲ್ಲಿ ಚಂದ್ರ, ಕಂಠದಲ್ಲಿ ಕಪ್ಪು, ತಾಂಡವ ನರ್ತನ ಮಾಡುವದರಲ್ಲಿ ಪ್ರೀತಿಯುಳ್ಳದ್ದು. ಆ ಮೂರ್ತಿಯನ್ನು ಬ್ರಹ್ಮ-ವಿಷ್ಣು-ಮಹಾದೇವರೇ ಧ್ಯಾನಿಸುವರು. ಯಾವ ರೂಪವೂ ಮೂರ್ತಿಯೂ ಇಲ್ಲದ ಸರ್ವ ಜಗತ್ತಿಗೂ ಅಧಿಪನಾದ ಆತನಿಗೆ ಈ ರೀತಿಯ ಒಂದು ಶ್ರೇಷ್ಠ ಶರೀರವು ಇದೆ; ಎಂದು ಶ್ರುತಿಯು ಸಾರುತ್ತಿದೆ, ಎಂಬ ವಚನಗಳು ತ್ರಿಮೂರ್ತಿಗಳಿಂದ ಉಪಾಸ್ಯವಾದ ವಾಮಾರ್ಧದಲ್ಲಿ ಉಮಾರೂಪದಿಂದಿರುವ ನಾಲ್ಕನೇ ಮೂರ್ತಿಯನ್ನು ಸ್ಪಷ್ಟವಾಗಿ ಹೇಳುತ್ತಿರುವಾಗ ಇವುಗಳಿಗೆ ಏನು ಅಭಿಪ್ರಾಯವನ್ನು ಹೇಳುವಿರಿ?

ಇದಕ್ಕೆ ಉತ್ತರ ಈ ರೀತಿಯಾಗಿದೆ: "ಸ್ಮೃತಿ. ಪುರಾಣ, ಅಷ್ಟಾದಶ ವಿದ್ಯೆಗಳು ಇವುಗಳಿಗೆ ವೇದವೇ ಮೂಲವಾಗಿದ್ದರೂ, ಎಲ್ಲಿಯಾದರೂ ಕೆಲವೆಡೆಯಲ್ಲಿ ವೈದಿಕ ವಿರುದ್ಧವಾದ ಶೈವ, ವೈಷ್ಣವಾದಿ ಆಗಮಗಳೂ ಆಯಾ ಅಧಿಕಾರಿಗಳಿಗಾಗಿ ಮೂಲವೆಂದು ಸ್ವೀಕರಿಸಿ ಹೊರಟಿರುವದರಿಂದ ವೈದಿಕರು ಅಂಥ ಭಾಗಗಳನ್ನು ಮಾತ್ರ ಸ್ವೀಕರಿಸಬಾರದೆಂದು ಪುರಾಣಗಳಲ್ಲಿಯೇ ವ್ಯವಸ್ಥೆ ಮಾಡಿದ್ದಾರೆ. ಇದೋ ಈ ಸೂತಸಂಹಿತಾ ವಚನಗಳನ್ನು ನೋಡಿರಿ. " ಪರಮೇಶ್ವರ ಜ್ಞಾನದಿಂದ ಭವಬಂಧನದಿಂದ ಮುಕ್ತನಾಗುವನು. ಆ ಜ್ಞಾನವು ವೇದದಿಂದಲೇ ಹುಟ್ಟಿದುದು. ಆಗಮಗಳಿಂದ ಹುಟ್ಟುವ ಜ್ಞಾನವು ಜ್ಞಾನವಲ್ಲ ವೇದದ ಹೊರತಾಗಿ ಹದಿನೆಂಟು ವಿದ್ಯೆಗಳಿಂದ ಜನ್ಯವಾದ ವಿದ್ಯೆಯು ಚನ್ನಾಗಿರುವದಿಲ್ಲ. ವೇದಗಳಿಗನುಗುಣವಾಗಿದ್ದರೇ ಉತ್ತಮವಾಗಿರುವದು. ಆದಗೂ ಕೆಲವೆಡೆಯಲ್ಲಿ ಶೈವಾಗಮವನ್ನೂ, ಕೆಲವೆಡೆಯಲ್ಲಿ ವೈಷ್ಣವಾಗಮ

ಮತ್ತು ಬ್ರಹ್ಮಾಗಮವನ್ನೂ ಇವೆಲ್ಲವುಗಳ ಒಳಪ್ರಭೇದಗಳನ್ನೂ ಅನುಸರಿಸಿ ಹೊರಟ ವಿದ್ಯಾಮಾರ್ಗವು ಆಯಾ ಅಧಿಕಾರಿಗಳ ಭೇದದಿಂದ ಕ್ರಮವಾಗಿ ಮುಕ್ತಿಯನ್ನು ಮುಟ್ಟಿಸುತ್ತದೆ. ಯಾರು ಯಾವ ಆಗಮದೀಕ್ಷೆಯಲ್ಲಿ ದೀಕ್ಷಿತರಾಗುವರೊ ಅವರು ಆ ಆಗಮದ ಮಾರ್ಗದಲ್ಲಿ ನಡೆಯಬೇಕು; ಹೊರತು ವೈದಿಕರು ಆಗಮ ಮಾರ್ಗವನ್ನು ಅನುಸರಿಸಬಾರದು."

ಸೌರಸಂಹಿತೆಯಲ್ಲಿಯೂ ಹೀಗೇ ಇದೆ:- " ವೇದಗಳಿಗೆ ವಿರುದ್ಧವಾದ ಅಂಶಗಳು ಪುರಾಣಗಳಲ್ಲಿ ಇದ್ದರೆ ಅವುಗಳನ್ನು ವೈದಿಕರು ಬಿಡಬೇಕು. ಕೆಲವು ಪುರಾಣಗಳು ತಂತ್ರಗಳನ್ನು (ಆಗಮಗಳನ್ನು) ಅವಲಂಬಿಸಿ ವೇದವಿರುದ್ಧ ಅರ್ಥಗಳನ್ನೂ ಹೇಳುವವು. ಆದರೆ ಅದು ಅಪರಾಧವಲ್ಲ. ಅಧಿಕಾರಿಗಳು ನಾನಾರುಚಿಯ ಜನರಿರುವರು. ಅವರನ್ನು ಸರಿಪಡಿಸಲು ಹಾಗೇ ಅವು ಹೇಳಬೇಕಾಗುವದು " ಇತ್ಯಾದಿ.

ಅಥವಾ ಪುರಾಣ ವಚನಗಳಿಂದ ತ್ರಿಮೂರ್ತಿಗಳಿಗಿಂತ ಭಿನ್ನವಾದ ನಾಲ್ಕನೇ ಮೂರ್ತಿಯೊಂದು ಸಿದ್ಧವಾಗುವದಾದರೂ, ಆ ಮೂರ್ತಿಯು ತ್ರಿಮೂರ್ತಿಗಳಿಗಿಂತ ಉತ್ಕೃಷ್ಟವಾದದ್ದೆಂಬುದು ಸರಿಯಲ್ಲ. ಅವು ನಾಲ್ಕೂ ಪರಮೇಶ್ವರ ಮೂರ್ತಿಗಳಾಗಿರುವಾಗ, ಅವುಗಳಲ್ಲಿ ವ್ಯಾಪಿಸಿದ ಪರಮೇಶ್ವರನು ಒಬ್ಬನೇ ಆದ್ದರಿಂದಲೂ ಅವುಗಳೊಳಗೆ ಹೆಚ್ಚು-ಕಡಿಮೆ ಎಂದು ಎಣಿಸುವಂತಿಲ್ಲ. ಎಲ್ಲ ಮೂರ್ತಿಗಳೂ ಮಾಯಾಮೂಲಕವಾದವುಗಳಾದ್ದರಿಂದ ತ್ರಿಮೂರ್ತಿಗಳ ಹುಟ್ಟಿಗೆ ಆ ನಾಲ್ಕನೇ ಮೂರ್ತಿಯು ಕಾರಣವೆಂದು ಹೇಳಿ ಆದುದರಿಂದ ಅದು ಶ್ರೇಷ್ಠವೆಂದೂ ಹೇಳುವಂತಿಲ್ಲ. ಒಮ್ಮೆ ಆ ತ್ರಿಮೂರ್ತಿಗಳು ನಾಲ್ಕನೇ ಮೂರ್ತಿಯಿಂದಲೇ ಆವಿರ್ಭಾವ ಹೊಂದುವುದೆಂದರೂ ಅವರೊಳಗೆ ಉಚ್ಚ--ನೀಚ ಭಾವವನ್ನು ಕಲ್ಪಿಸಲು ಬರುವಂತಿಲ್ಲ. ರಾಮಾನುಜ ಮತದಲ್ಲಿ ರಾಮ--ಕೃಷ್ಣಾದಿ ಅವತಾರಗಳು ನಾರಾಯಣನ ಆವಿರ್ಭಾವರೂಪವಾದರೂ ನಾರಾಯಣನಿಗಿಂತ ಆ ರಾಮ-ಕೃಷ್ಣರು ಹೀನರಲ್ಲ. ಅದರಂತೆ ಬ್ರಹ್ಮಾದಿ ತ್ರಿಮೂರ್ತಿಗಳು ಆ ಪರಶಿವನಿಂದ ಹೀನರಾಗರು. ಹಾಗಲ್ಲದಿದ್ದರೆ " ನಾರಾಯಣನಿಂದ ರುದ್ರನು ಜನಿಸಿದನು " ಎಂಬ ವೇದವಾಕ್ಯದಿಂದ ರುದ್ರನು ನಾರಾಯಣನ ಅಂಶಾವತಾರವೆಂದು ಹೇಳಲ್ಪಟ್ಟಿದ್ದರಿಂದ ರುದ್ರನು ನಾರಾಯಣನಿಗಿಂತ ಹೀನನೆಂದಾದೀತು ಹಾಗಾಗಬಾರದು.

ಈಗೊಂದು ಸಂಶಯ: ವಿಷ್ಣು-ಶಿವ ಇವರು ಒಮ್ಮೆ ಈಶ್ವರ ವರ್ಗದಲ್ಲಿ ಸೇರಬಹುದು. ಆದರೆ ಬ್ರಹ್ಮನು ಜೀವಿಗಳ ಸಮೂಹ ರೂಪನಾದ್ದರಿಂದ, ಹಿರಣ್ಯಗರ್ಭನೆಂದು ಪ್ರಸಿದ್ಧನಾದ್ದರಿಂದ ಈಶ್ವರವರ್ಗದಲ್ಲಿ ಹೇಗೆ ಸೇರುವನು ?

ಉತ್ತರ: ಸೂತಸಂಹಿತೆಯಲ್ಲಿ "ನಮಗೆ ಕಾಣುತ್ತಿರುವ ಭೌತಿಕ ವಸ್ತುಗಳಿಗಿಂತಲೂ ಪಂಚಭೂತಗಳು ಹೆಚ್ಚಿನವು; ಅವುಗಳಿಗಿಂತ ಚೇತನನಾದ ಜೀವನು ಹೆಚ್ಚಿನವನು. ಈ ಜೀವನು ಬೇರೆ-ಬೇರೆಯಾಗಿಯೂ ಗುಂಪಾಗಿಯೂ ಇರುವನು. ಪ್ರತಿಯೊಬ್ಬ ಜೀವನು ಭಿನ್ನನಾದರೂ, ದೇವತೆಗಳು, ಮನುಷ್ಯರು, ಪಶುಗಳು, ಪಕ್ಷಿಗಳು, ಗಿಡಮರಗಳು ಎಂದು ಮುಂತಾಗಿ ಅನೇಕ ಗುಂಪುಗಳಾಗಿಯೂ ಇರುವನು. ಈ ರೀತಿ ಇರುವ ಜೀವರಾಶಿಯಲ್ಲಿ ವಿಶಿಷ್ಟ ಶಕ್ತಿಯನ್ನು ಪಡೆದವರು ಬ್ರಹ್ಮನ ವಿಭೂತಿಗಳು; ಅಂದರೆ ಎಲ್ಲವೂ ಆತನ ಅಂಶವಾದರೂ ಆ ಹೆಚ್ಚಿನ ಯೋಗ್ಯತೆಯುಳ್ಳವರಲ್ಲಿ ಆ ಬ್ರಹ್ಮನ ಪ್ರಕಾಶ ಹೆಚ್ಚಾಗಿರುವದು. ಆ ವಿಭೂತಿಗಳ ಗುಂಪೇ ಹಿರಣ್ಯಗರ್ಭನು. ಅವನಿಗಿಂತ ಬ್ರಹ್ಮನು ಶ್ರೇಷ್ಠನಿರುವನು. ಆತನಿಗಿಂತ ವಿಷ್ಣು ಅವನಿಗಿಂತ ಶಿವ ಶ್ರೇಷ್ಠರಿರುವರು. ಈ ಬ್ರಹ್ಮ ವಿಷ್ಣು ರುದ್ರರು ಪರತತ್ವದ ವಿಭೂತಿಗಳು. ಈ ಮೂವರಿಗೂ ಸರ್ವಕಾರಣನಾದ ಈಶ್ವರನು ಅಧಿಕನು. ಆತನಿಗಿಂತಲೂ ಕೇವಲಾನಂದರೂಪದ ಅದ್ವಿತೀಯ ಪರತತ್ವವು ಶ್ರೇಷ್ಠವಾದದ್ದು." ಎಂದು ಹೇಳಿದೆ ಇಲ್ಲಿ ಹಿರಣ್ಯಗರ್ಭನು ದೇವ--ಮನುಷ್ಯಾದಿ ಸಮಸ್ತ ಜೀವಿಗಳ ಗುಂಪು. ಅವನಿಗಿಂತ ಬ್ರಹ್ಮನು ಶ್ರೇಷ್ಠ ಎಂದು ಹೇಳಿದ್ದರಿಂದ ಹಿರಣ್ಯಗರ್ಭನಿಗಿಂತಲೂ ಬ್ರಹ್ಮನು ಶ್ರೇಷ್ಠನೆಂದೂ ಆತನು ಜೀವವರ್ಗದಲ್ಲಿ ಸೇರಿದವನಲ್ಲವೆಂದೂ ಸಿದ್ಧವಾಗುವದು. ಆದ್ದರಿಂದ ಆ ಬ್ರಹ್ಮನು ಈಶ್ವರ ವರ್ಗಕ್ಕೆ ಸೇರುವನು.

ಆಗಲಿ! ಬ್ರಹ್ಮನು ಈಶ್ವರವರ್ಗದಲ್ಲಿ ಸೇರಿದರೂ ಆತನಿಗಿಂತ ವಿಷ್ಣು; ವಿಷ್ಣುವಿಗಿಂತ ಶಿವ; ಅವನಿಗಿಂತಲೂ ಸರ್ವಕಾರಣನಾದ ಪರಶಿವನು ಹೆಚ್ಚಿನವನೆಂದು ಮೇಲೆ ಹೇಳಿದ್ದರಿಂದ ಆ ತ್ರಿಮೂರ್ತಿಗಳಿಗಿಂತ ನಾಲ್ಕನೇ ಮೂರ್ತಿಯಾದ ಶಿವನು ಹೆಚ್ಚಿನವನೆಂದಾಯ್ತಲ್ಲ ?

ಹಾಗಲ್ಲ. ಇಲ್ಲಿ ವಿಮರ್ಶೆಮಾಡುವದಿದೆ. ಏನಂದರೆ = ಆ ಪರಶಿವನಿಗೆ ಶರೀರವಿದೆಯಷ್ಟೇ ? ಆ ಶರೀರ ಹೆಚ್ಚಿನದೋ ? ಅಲ್ಲಿ ಅದು ಮಾಯಾಕಾರ್ಯವಾದ್ದರಿಂದಲೂ, ಅದು ಚೇತನವಲ್ಲದ್ದರಿಂದ ಉಪಾಸಕರಿಗೆ ಇಷ್ಟಫಲವನ್ನು ಕೊಡುವುದರಲ್ಲಿ ಅಸಮರ್ಥವಾದ್ದರಿಂದಲೂ "ಪ್ರಯೋಜನವಿಲ್ಲದೇ ಬುದ್ಧಿಹೀನನೂ ಕಾರ್ಯದಲ್ಲಿ ತೊಡಗಲಾರ" ಎಂಬಂತೆ ನಿಷ್ಪ್ರಯೋಜನವಾದ ಆ ಶರೀರದ ಶ್ರೇಷ್ಠತೆಯನ್ನು ಕಲ್ಪಿಸುವದು ಯುಕ್ತವಲ್ಲ. ಎರಡನೇಯದಾಗಿ: ಆ ಶರೀರವನ್ನುಳಿದು ಆ ಅಂತರ್ಗತ ಚೇತನವು ಶ್ರೇಷ್ಠವೋ ಎಂಬ ಪ್ರಶ್ನೆಗೆ = ಅಂಥ ಚೈತನ್ಯವು ಎಲ್ಲಡೆಯಲ್ಲಿಯೂ "ಏಕಮೇವಾದ್ವಿತೀಯಂ" ಎಂಬ ಶ್ರುತಿಯಂತೆ ಒಂದೇ ಆದ್ದರಿಂದ ಮೇಲು--ಕೀಳು ಎಂಬ ಪ್ರಸಂಗವೇ ಬರಲಾರದೆಂಬುದೇ ಉತ್ತರವಾಗಿದೆ. ಮೂರನೇಯದಾಗಿ ಶರೀರಸಹಿತ ಆ ಚೈತನ್ಯವು ಶ್ರೇಷ್ಠವೋ ಎಂಬ ಪ್ರಶ್ನೆಗೆ: ಅಲ್ಲವೆಂದೇ ಉತ್ತರ. ಏಕೆಂದರೆ: ಒಬ್ಬ ಮನುಷ್ಯನಿಗೆ ಬೇಡುವದರಿಂದ ಯಾಚಕನೆಂದೂ, ಅಡಿಗೆಮಾಡುವದರಿಂದ ಪಾಚಕನೆಂತಲೂ, ಕುಣಿಯುವದರಿಂದ ನರ್ತಕನೆಂತಲೂ, ಓದುವದರಿಂದ ಪಾಠಕನೆಂತಲೂ ಬೇರೆ--ಬೇರೆ ಹೆಸರು ಬರುವಂತೆ ಒಬ್ಬನೇ ಆದ ಪರಮೇಶ್ವರನಿಗೆ ಸತ್ವ, ರಜ ತಮೋಗುಣಗಳುಳ್ಳ ಮಾಯಾ ಉಪಾಧಿಯ ಮೂಲಕ ಬ್ರಹ್ಮ, ವಿಷ್ಣು, ಶಿವ ಮುಂತಾದ ಸಂಜ್ಞೆಗಳು ಬಂದಿವೆಯಾದ್ದರಿಂದ ಅವರೆಲ್ಲರೂ ಭಿನ್ನರೆನ್ನುವದೂ, ಅವರೊಳಗೆ ಮೇಲು--ಕೀಳು ಭಾವವನ್ನು ಕಲ್ಪಿಸುವದೂ ಸಮಂಜಸವಾಗಲಾರದು. ಇದಕ್ಕೆ ವಿಷ್ಣುಪುರಾಣದ ಮಾತು ಬಲವಾಗಿದೆ "ಒಬ್ಬನೇ ಆದ ಜನಾರ್ದನನು ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವ ಕಾರ್ಯದಿಂದ ಭಿನ್ನ ಹೆಸರನ್ನು ಪಡೆದಿರುತ್ತಾನೆ" ಎಂಬುದು ವಿಷ್ಣುಪುರಾಣ ವಚನ. ಹಾಗಲ್ಲದಿದ್ದರೆ—

ಆ ತ್ರಿಮೂರ್ತಿಗಳೂ ಭಿನ್ನರೆಂದು ಒಪ್ಪಿ ಒಬ್ಬನು ಸೃಷ್ಟಿಯನ್ನೂ ಮತ್ತೊಬ್ಬನು ಸ್ಥಿತಿಯನ್ನೂ ಮರುದೊಬ್ಬನು ಲಯವನ್ನೂ ಮಾಡುವನೆಂದು ಹೇಳಿದರೆ ಹಿಂದೆ ಸಿದ್ಧಪಡಿಸಿದ: ಒಬ್ಬನಿಗೆ ತಮಃ ಪ್ರಧಾನವಾಗಿ ಉಪಾದಾನಕಾರತ್ವವೂ ಸತ್ವಗುಣಪ್ರಧಾನವಾಗಿ ನಿಮಿತ್ತ ಕಾರಣತ್ವವೂ ಇದೆ; ಎಂಬ ಸಿದ್ಧಾಂತವು ಕೆಡುವದು; ಮತ್ತು ಪರಮೇಶ್ವರನಿಗೆ ಹೆಸರಿನ ಭೇದಮಾತ್ರದಿಂದ ಭೇದವನ್ನೊಪ್ಪಿದರೆ ಉತ್ತಮ, ಮಧ್ಯಮ, ಅಧಮ ಹೀಗೆ ಮೂರು ಈಶ್ವರರನ್ನು ಒಪ್ಪಿಕೊಳ್ಳುವ ಪ್ರಸಂಗ ಬರುವದಿಲ್ಲವೇ ? ಆದರಿಂದ "ಈ ಭೂತಗಳು ಯಾವನಿಂದ ಹುಟ್ಟುವವೋ! ಹುಟ್ಟಿದ ಅವು ಯಾವನಿಂದ ಜೀವಿಸುವವೋ! ಯಾವನಲ್ಲಿಯೇ ಕೊನೆಗೆ ಅಡಗುವವೋ!" ಎಂಬ ತೈತ್ತಿರೀಯ ಶ್ರುತಿಯು ಹೇಳಿದ ಪರಮೇಶ್ವರನೊಬ್ಬನೆಂಬುದಕ್ಕೆ ವಿರೋಧಬರುವದು. ಮಾಯಾ ಸಂಬಂಧವಿಲ್ಲದೇ ಜಗತ್ತಿನ ವ್ಯಾಪಾರವು ನಿರ್ಗುಣ ಬ್ರಹ್ಮನಿಗೆ ಘಟಿಸುವದಿಲ್ಲವಾದ್ದರಿಂದಲೇ ಮೇಲಿನ ಶ್ರುತಿ ವಿರೋಧವನ್ನು ಪರಿಹಾರ ಮಾಡುವುದಕ್ಕಾಗಿ ಆ ತ್ರಿಮೂರ್ತಿಗಳ ಅಂತರ್ಗತ ಚೈತನ್ಯವನ್ನಿಟ್ಟು ಆ ಮೂವರು ಒಂದು ಎಂದು ಹೇಳುವಂತೆಯೂ ಇಲ್ಲ. ಹಾಗೆ ಹೇಳುವದು ವ್ಯರ್ಥವಾಗುವದು.

ಹಾಗಾದರೆ ಉಪಾಧಿ ಮುಂತಾದ ಕೆಲವು ಹೇತುಗಳ ಮೂಲಕ ಚೈತನ್ಯದಲ್ಲಿ ಭೇದವನ್ನು ಕಲ್ಪಿಸದಿದ್ದರೆ ಜೀವ--ಈಶ್ವರ ಎಂಬ ಭೇದವೂ, ಆ ಮೂಲಕ ತರತಮ ಭಾವವೂ ಇಲ್ಲದಂತಾಗಿ ಜೀವರೂ, ಸರ್ವಜ್ಞರು; ಜಗತ್ತಿಗೆ ಕಾರಣರು ಎಂದು ಹೇಳುವ ಪ್ರಸಂಗ ಬಂದು ಅವ್ಯವಸ್ಥೆಯಾಗುವದಿಲ್ಲವೇ ?

ಇಲ್ಲ. ಬಿಂಬ--ಪ್ರತಿಬಿಂಬಗಳು ನಿಜವಾಗಿ ಒಂದಾದರೂ ಕನ್ನಡಿಯಲ್ಲಿರುವ ಹಳದಿ ಕಪ್ಪು ಬಣ್ಣಗಳೂ, ಚಲನ ಮುಂತಾದವುಗಳೂ ಪ್ರತಿಬಿಂಬಕ್ಕೇ ಅಂಟುವವು; ಹೊರತು ಬಿಂಬಕ್ಕೆ ಅವು ಲೆಖ್ಖಮಾತ್ರವೂ ತಾಗದು. ಅದರಂತೆ ರಜ-ತಮೋ ಗುಣಗಳ ಉಪಹತಿಯಿಂದ ಸತ್ವವು ಮಲಿನವಾಗಿರುವ ಆಯಾ ಅಂತಃಕರಣ ರೂಪ ಉಪಾಧಿಗಳ ಮೂಲಕ ಜೀವರೊಳಗೆ ಭೇದವೂ ಮೇಲು--ಕೀಳು ಭಾವವೂ ಬರಬಹುದಾದರೂ ಈ ದೋಷಗಳ ಸಂಪರ್ಕವೇ ಇಲ್ಲದ ಬ್ರಹ್ಮಾದಿ ತ್ರಿಮೂರ್ತಿಗಳಿಗೆ ಈಶ್ವರತ್ವ, ಸರ್ವಜ್ಞತ್ವ, ಜಗನಿಯಮನಶಕ್ತಿ, ಮಾಯೆಯನ್ನು ವಶೀಕರಣಶಕ್ತಿ, ಆವರಣವಿಲ್ಲದ ತಮ್ಮ ಆತ್ಮನ ಬೆಳಕು, ಮುಂತಾದವುಗಳು ಸಮವಾಗಿರುವದರಿಂದ ಒಬ್ಬನು ಕಂಬಳಿ--ಪಟ್ಟಿ ಮುಂತಾದವುಗಳನ್ನು ಸುತ್ತಿಕೊಂಡಂತೆ ಒಬ್ಬನೇ ಆ ಮೂರೂ ಮೂರ್ತಿರೂಪವನ್ನು ತಾಳುವದರಿಂದ ಅವರೊಳಗೆ ಭೇದವನ್ನು ಅದರಿಂದ ತರತಮ ಭಾವವನ್ನು ಕಲ್ಪಿಸಲು ಬರಲಾರದು. ಶಾತಾತಪಸ್ಮೃತಿಯಲ್ಲಿ "ಬ್ರಹ್ಮ ವಿಷ್ಣು ರುದ್ರರೊಳಗೆ ಭೇದವನ್ನು ಎಣಿಸುವವರು ಹೊಟ್ಟೆನೋವಿನಿಂದ ಪೀಡಿತರಾಗುವರು" ಎಂದು ನಿಂದಿಸಿದೆ.

ಒಮ್ಮೆ ವಿಗ್ರಹಗಳ ಮೇಲು ಕೀಳುಭಾವದಿಂದ ಆ ಬ್ರಹ್ಮಾದಿ ಚೈತನ್ಯಗಳಲ್ಲಿಯೂ ಉಚ್ಚ-ನೀಚ ಭಾವವನ್ನು ಕಲ್ಪಿಸುವದಾದರೂ ಕಲ್ಪಿಸಿರಿ. ಅದರಿಂದ ಯಾವ ಪ್ರಯೋಜನವೂ ಆಗಲಾರದು. ಮುಂದೆ ಹೇಳುವಂತೆ— ವಿಷ್ಣು, ಮತ್ತು ಶಿವ ಇವರಿಬ್ಬರನ್ನೂ ಶ್ರೇಷ್ಠನೆಂದು ಹೊಗಳುವ ವಚನಗಳು ಪ್ರತ್ಯೇಕವಾಗಿರುವದರಿಂದ ಶಿವ, ವಿಷ್ಣುಗಳಲ್ಲಿ ಹೆಚ್ಚು--ಕಡಿಮೆ ಮಾಡುವಂತಿಲ್ಲ. ಸ್ಕಾಂದದಲ್ಲಿ "ಶಿವನು ಮಾಯೆಯಲ್ಲಿಯ ಸತ್ವಗುಣದ ಶರೀರವಿದ್ದು ಸಂಹಾರಕ್ಕಾಗಿ ತಮೋಗುಣವನ್ನು ಸ್ವೀಕರಿಸುವನು. ವಿಷ್ಣುವು ಮಾಯೆಯ ತಮೋಗುಣದ ವಿಗ್ರಹವುಳ್ಳವ-

ನಾಗಿದ್ದು ಪಾಲನೆಗಾಗಿ ಸತ್ವಗುಣವನ್ನು ಸ್ವೀಕರಿಸುವನು. ಬ್ರಹ್ಮನು ರಜೋಗುಣ ಶರೀರನೂ ಸೃಷ್ಟಿಗಾಗಿ ರಜೋಗುಣವನ್ನು ಸ್ವೀಕರಿಸುವವನೂ ಆಗಿರುವನು. ಹೀಗೆ ಎಲೈ ವಿಪ್ರರೇ! ಶಿವನು ಅಂತಃಸತ್ವವುಳ್ಳವನು. ವಿಷ್ಣುವು ಅಂತಃ ತಮೋಗುಣಿಯು. ಬ್ರಹ್ಮನು ಒಳಗೂ ಹೊರಗೂ ರಜೋಗುಣಿಯು. ಇದರಿಂದಲೇ ಮನುಷ್ಯರು--ಹರಿಯು ಶ್ರೇಷ್ಠ; ಹರನು ಶ್ರೇಷ್ಠ ಎಂದು ವಾದಿಸುತ್ತಿರುವರು. ಇದು ಮೋಹದ ಮಹಿಮೆಯು. ಬ್ರಹ್ಮನಿಗೆ ಸತ್ವವು ಇಲ್ಲದ್ದರಿಂದ ಆತನನ್ನು ವರಿಷ್ಠನೆಂದು ಹೇಳುವದಿಲ್ಲ " ಎಂದು ವಿಷ್ಣುವಿಗೆ ಇರುವ ಸತ್ವಗುಣವು ಬರೀ ಪಾಲನೆಯ ಕಾರ್ಯಕ್ಕಾಗಿಯೇ ಇರುವದು; ಸ್ವತಃ ತಮೋಗುಣಿಯುವನು. ಶಿವನು ಸಂಹಾರಕ್ಕಾಗಿ ತಮೋಗುಣವನ್ನು ಸ್ವೀಕರಿಸಿದರೂ ಸ್ವತಃ ಸತ್ವಗುಣಿಯು. ಮುಂತಾಗಿ ಹೇಳಿದೆ. ಇದರಿಂದ ತಮೋಗುಣ ಶರೀರದ ವಿಷ್ಣುವಿಗಿಂತಲೂ ಸತ್ವಗುಣದ ಶರೀರದ ಶಿವನು ಹೆಚ್ಚಿನವನೆಂದು ಸಿದ್ಧಿಯಾಗುವದು. ಶ್ರೀಮದ್ಭಾಗವತ ಪುರಾಣದಲ್ಲಿ " ಮಾಯೆಯಲ್ಲಿ ಸತ್ವ, ರಜ, ತಮ ಎಂಬ ಮೂರು ಗುಣಗಳಿವೆ. ಅವುಗಳನ್ನೇ ಉಪಾಧಿಯಾಗಿಟ್ಟು ಸ್ಥಿತಿ, ಸೃಷ್ಟಿ, ಲಯಗಳನ್ನು ಮಾಡುತ್ತ ಹರಿ ಬ್ರಹ್ಮ ಹರ ಎಂಬ ಸಂಜ್ಞೆಯನ್ನು ಪಡೆಯುವನು. ಸತ್ವಶರೀರಿಯಾದ ವಿಷ್ಣುವಿನಿಂದಲೇ ಜನರಿಗೆ ಹಿತವಾಗುವದು. " ಎಂದು ಮುಂತಾಗಿ ವಿಷ್ಣುವೇ ಶ್ರೇಷ್ಠನೆಂದು ಹೇಳಿದೆ. ಬ್ರಹ್ಮ--ಶಿವರು ರಜಃ ತಮೋಗುಣಗಳ ಶರೀರವುಳ್ಳವರಾದ್ದರಿಂದ ಸತ್ವ ಶರೀರಿಯಾದ ವಿಷ್ಣುವು ವರಿಷ್ಟನಾಗುವದು ಯುಕ್ತವಾಗುವದು. ಇನ್ನು ಭಾಗವತಾದಿ ಕೆಲವು ಪುರಾಣಗಳು ಮುಖ್ಯವಾಗಿ ವಿಷ್ಣುವನ್ನೇ ಹೊಗಳಲು ಹೊರಟಿರುವವಾದ್ದರಿಂದ " ನಹಿನಿಂದಾ " ನ್ಯಾಯದಂತೆ (ಹೊಗಳಬೇಕೆಂದು ಹೊರಟಾಗ ಅದನ್ನು ಹೊಗಳಿದರೆ ಇತರರನ್ನು ನಿಂದಿಸಿದಂತಾಗುವದಿಲ್ಲ ಮತ್ತು ಇತರರನ್ನು ನಿಂದಿಸಿದರೂ ಅದು ನಿಂದೆಯಲ್ಲ. ಎಂದು ಆ ನ್ಯಾಯದ ಅರ್ಥ) ವಿಷ್ಣುವನ್ನು ಹೊಗಳಿದ್ದರಿಂದ ಶಿವನು ಕನಿಷ್ಠನೆಂದಾಗಲಾರನು. ಅದರಂತೆ ಸ್ಕಾಂದಾದಿ ಕೆಲವು ಪುರಾಣಗಳು ಶಿವನ ಹೊಗಳಿಕೆಗಾಗಿ ಹೊರಟು ವಿಷ್ಣುವನ್ನು ನಿಂದಿಸಿದ್ದರೂ ಅದು ನಿಂದೆಯಾಗದು. ಭಾಗವತದಲ್ಲಿ ಹೇಳಿದ ತಾಮಸ ಶರೀರಿಯಾದ ಶಿವನ ನಿಕಷವು ' ಕಪ್ಪು ಮೋಡದಂತಿರುವ ಕಪಾಲ ಶೂಲಗಳನ್ನು ಧರಿಸಿದ ಶಂಭುವು ಮುಗುಳ್ನಗೆಯನ್ನು ಸೂಸುತ್ತ ಆ ಜನರ ಮುಂದೆ ತೋರಿಸಿಕೊಂಡನು " ಎಂಬ ಬ್ರಹ್ಮಾಂಡ ಪುರಾಣ-ವಚನದ ಮೇಲಿಂದ ತೋರಿಬರುವ ಶಿವನ ಇನ್ನೊಂದು ವೇಷದ ಪರವಾಗಿದೆ ಎಂದು ಹೇಳುವವಾದರೆ ಸ್ಕಾಂದಪುರಾಣದಲ್ಲಿ ಹೇಳಿದ ತಾಮಸ ಶರೀರದ ವಿಷ್ಣುವಿನ ಕೀಳುತನವು " ಕೊರಳಲ್ಲಿ ಜೋಲುತ್ತಿರುವ ತುಳಸೀಮಾಲೆಯಿಂದ ಭೂಷಿತನಾದ ಕನ್ನೈದಿಲೆಯ ಬಣ್ಣದ ಆ ಪರಮಜ್ಯೋತಿಯು ನನ್ನ ಮುಂದೆ ತೋರಲಿ " ಎಂಬ ಮತ್ತೊಂದು ಪುರಾಣದಲ್ಲಿ ಹೇಳಿದಂತೆ ವಿಷ್ಣುವಿನ ಮತ್ತೊಂದು ಸಮಯದಲ್ಲಿ ತಳೆದಿರುವ ವೇಷದ ಪರವಾಗಿದೆ ಎಂದೂ ಅನ್ನಲು ಬರುವದು. " ಮುಕ್ಕಣ್ಣನಾದ ನಾಲ್ಕು ಭುಜಗಳುಳ್ಳ ಶುದ್ಧವಾದ ಸ್ಫಟಿಕಬಣ್ಣದ ತಲೆಯಲ್ಲಿ ಚಂದ್ರಶೋಭಿತನನ್ನು ಧ್ಯಾನಿಸಬೇಕು " ಎಂಬ ಸ್ಕಂದಪುರಾಣದಲ್ಲಿ ಶಿವನಿಗೆ ಬಿಳೇ ಶರೀರವನ್ನು ಹೇಳಿದ್ದರೆ—" ಗೋವಿನ ಹಾಲಿನ ಬಣ್ಣದವನಾದ ಕಮಲನೇತ್ರದ--ಚಕ್ರಕಮಲಗಳನ್ನು ಹಿಡಿದಿರುವ ಅನೇಕಾಭರಣಧಾರಿಯಾದ ಲಕ್ಷ್ಮೀ ಭೂಮಿಯರಿಂದ ಸೇವೆ ತಗೊಳ್ಳುತ್ತಿರುವ ಯೋಗಪೀಠದಲ್ಲಿ ಕುಳಿತಿರುವ ದೇವದೇವನನ್ನು ಪುರುಷಸೂಕ್ತದಿಂದ ಪೂಜಿಸಬೇಕು " ಎಂಬಿವೇ ಮುಂತಾದ ಅನೇಕ ವಚನಗಳಲ್ಲಿಯೂ, ಪುರುಷಸೂಕ್ತದಲ್ಲಿ ಹೇಳಿದ ಪುರುಷ-ವಾಸುದೇವ-ನರಸಿಂಹ ಮೊದಲಾದವರ ಧ್ಯಾನದಲ್ಲಿಯೂ ವಿಷ್ಣುವಿಗೂ ಬಿಳೇ ದೇಹವನ್ನು ಹೇಳಿದ್ದಾರೆ. ಆದ್ದರಿಂದ ಸ್ಕಾಂದ ಭಾಗವತ ಪುರಾಣಗಳಮೇಲಿಂದ ಅಂತಃಸತ್ವವಿದ್ದು ಹೊರಗೆ ತಮೋಗುಣಿಯಾದ ಶಿವನಿಗಿಂತಲೂ ಹೊರಗೂ ಒಳಗೂ ಸತ್ವಗುಣಿಯಾದ ವಿಷ್ಣುವಿಗೇ ಶ್ರೇಷ್ಠತ್ವವು ಸಿದ್ಧಿಸುವದು

ಒಮ್ಮೆ " ಎಂಟು ಶರೀರವುಳ್ಳ ಸಾತ್ವಿಕ ಶುದ್ಧಸ್ವರೂಪದ ಪರಶಿವನು ಅನೇಕನಾಗುವನು " ಎಂಬ ಅಗಸ್ತ್ಯರ ಶಿವರಹಸ್ಯದ ವಚನದಿಂದ ಶಿವನಿಗೂ ಹೊರಗೂ--ಒಳಗೂ ಸತ್ವಗುಣವನ್ನು ಒಪ್ಪುವದಾದರೆ ಆಗ ಶಿವ-ವಿಷ್ಣುಗಳಿಬ್ಬರೂ ಸಮನಾದರು. ಆದ್ದರಿಂದ ನಾವು ಹೇಳುವಂತೆ ಆಯಿತು. ಅವರೆಲ್ಲರೂ ಒಂದಾದರೆ ವಿಷ್ಣು-ರುದ್ರ-ಬ್ರಹ್ಮ ಎಂಬ ಬೇದವ್ಯವಹಾರವು ಹೇಗೆ ಕೂಡುವದು; ಎಂಬ ಸಂಶಯಬೇಡ. ಲಕ್ಷ್ಮೀ ಪತಿತ್ವ, ಪಾರ್ವತೀ ಪತಿತ್ವ, ಸರಸ್ವತೀ ಪತಿತ್ವ ಮುಂತಾದ ವಿಶಿಷ್ಟರೂಪದಿಂದಲೂ ಸ್ಥಿತಿ-ಲಯ ಸೃಷ್ಟಿರೂಪ ಕ್ರಿಯಾಭೇದದಿಂದಲೂ ಬ್ರಹ್ಮ, ವಿಷ್ಣು, ರುದ್ರರೆಂಬ ಭೇದ ವ್ಯವಹಾರವು ಹೊಂದುವುದು.

ಹಾಗಾದರೆ ಹೊರಗೂ--ಒಳಗೂ ಸತ್ವಗುಣವುಳ್ಳ ವಿಷ್ಣು--ಶಿವರಿಗಿಂತ ಸತ್ವಗುಣದ ಸಂಪರ್ಕವಿಲ್ಲದೇ ಎರಡೂ ರೀತಿಯಿಂದ ರಜೋಗುಣದ ಸಂಬಂಧವುಳ್ಳ ಬ್ರಹ್ಮನು ನಿಕೃಷ್ಟನೆಂದಾಯಿತಲ್ಲ ? ಇಲ್ಲ, ಏಕೆಂದರೆ ಎರಡೂ ರೀತಿಯಿಂದಲೂ ಸತ್ವಗುಣ ಮಾತ್ರ ಸಂಪರ್ಕವುಳ್ಳ ಶಿವವಿಷ್ಣುವಿಗಿಂತಲೂ ನಾಲ್ಕನೇ ಶಿವನಿಗೆ ಮೂರು ಗುಣವುಳ್ಳ ಮಾಯೆಯ ಸಂಬಂಧದ ಮೂಲಕ ಕೇವಲ ಸತ್ವಗುಣವಿಲ್ಲದ್ದರಿಂದ— ಆ ಶಿವನು ಕೀಳು ಎಂದು ಹೇಳುವ ಪ್ರಸಂಗಬಂದೀತಾತದ್ದರಿಂದ ಆ ಶಂಕೆ ಸಮಂಜಸವಲ್ಲ. ಬ್ರಹ್ಮನಿಗೆ ಸತ್ವಗುಣ ಸಂಬಂಧವೇ ಇಲ್ಲದ್ದರಿಂದ ಆ ಪರಶಿವನಿಗೆ ಮೂರು ಗುಣಗಳ ಸಂಬಂಧವಿದ್ದರೂ ಆತನೇ ಬ್ರಹ್ಮನಿಗಿಂತ ಶ್ರೇಷ್ಠನೆನ್ನುವದೂ ಸರಿಯಲ್ಲ. ಅದನ್ನು ತಿರುವು--ಮುರುವು ಮಾಡಿದರೆ ಬ್ರಹ್ಮನಿಗ ತಮೋಗುಣದ ಸಂಪರ್ಕವಿಲ್ಲದ್ದರಿಂದ ಪರಮಶಿವನಿಗೆ ತಮೋಗುಣದ ಸಂಪರ್ಕವಿರುವದರಿಂದ ಬ್ರಹ್ಮನಿಗಿಂತ ನಾಲ್ಕನೇ ಪರಶಿವನೇ ಕೀಳು ಎಂದೂ ಹೇಳಬೇಕಾದೀತು. ಇದು ಒಪ್ಪುವ ಮಾತಲ್ಲ. ಪರಮಶಿವನ ಅಸ್ತಿತ್ವವನ್ನು ಹೇಳುವವರು ಪರಶಿವನು ಎಲ್ಲಕ್ಕಿಂತಲೂ ಶ್ರೇಷ್ಠನೆಂದೇ ಹೇಳುವರು.

ಆದ್ದರಿಂದ ವಿಶೇಷಣಗಳ ಮೇಲು--ಕೀಳು ಭಾವವನ್ನು ಒಪ್ಪಲಿ! ಅಥವಾ ಒಪ್ಪದಿರಲಿ ! ಮಾಯೆಯನ್ನು ತಮ್ಮ ಆಧೀನದಲ್ಲಿ ಇಟ್ಟುಕೊಳ್ಳುವಿಕೆ, ಆವರಣವಿಲ್ಲದ ಆತ್ಮನ ಪ್ರಕಾಶ ಮುಂತಾದ ಹಿಂದೆ ಹೇಳಿದ ಅನೇಕ ಗುಣಗಳ ಸಾಮ್ಯತೆಯ ಮೂಲಕ ಬ್ರಹ್ಮಾದಿ ತ್ರಿಮೂರ್ತಿಗಳೂ ಸಮರು; ಎಂದೇ ಹೇಳಬೇಕಾಗುವದು; ಹೊರತು ಅವರೊಳಗೆ ಮೇಲು-ಕೀಳುತನವನ್ನು ಕಲ್ಪಿಸಲು ಬರುವಂತಿಲ್ಲ. ಆದ್ದರಿಂದ ಹಿಂದೆ ಹೇಳಿದ ಸ್ಕಾಂದಪುರಾಣ ವಚನಗಳಿಗೆ ತ್ರಿಮೂರ್ತಿಗಳ ಮೇಲು--ಕೀಳುತನವನ್ನು ಹೇಳುವವರಲ್ಲಿ ಅಭಿಪ್ರಾಯವನ್ನು ಕಲ್ಪಿಸದೇ ಆ ಮೂರ್ತಿಗಳಲ್ಲಿ ಏಕರೂಪವಾದ ಆನಂದರೂಪನಾದ ಅದ್ವಿತೀಯ ಬ್ರಹ್ಮನನ್ನು ಹೇಳುವ ಅಭಿಪ್ರಾಯವನ್ನೇ ಹಿಂದು-ಮುಂದಿನ ಸಂದರ್ಭದಿಂದ ಕಲ್ಪಿಸಬೇಕಾಗುವದು; ಮತ್ತು ವಿಷ್ಣುವನ್ನೂ ಶಿವನನ್ನೂ ಹೇಳುತ್ತಿರುವ ಶ್ರುತಿ, ಸ್ಮೃತಿ, ಪುರಾಣ ಮುಂತಾದವುಗಳಲ್ಲಿ ಇಬ್ಬರಿಗೂ ಜ್ಞಾನದಾನ ಯೋಗ್ಯತೆ, ಮುಮುಕ್ಷುಗಳು ಸೇವಿಸುವ ರೂಪ ಮುಂತಾದವುಗಳು ಸಮವಾಗಿ ಹೇಳಲ್ಪಟ್ಟಿರುವದರಿಂದ ಉಮಾ ದೇಹವನ್ನು ಅರ್ಧವಾಗಿ ಸ್ವೀಕರಿಸಿದ ಆ ವಿಶಿಷ್ಟ ಪರಶಿವನು ಶ್ರೇಷ್ಠನೆಂದು ಹೇಳುವದೂ ಸರಿಯಾಗುವದಿಲ್ಲ. " ಬ್ರಹ್ಮನನ್ನು ಹುಟ್ಟಿಸಿ ಆತನಿಗೆ ವೇದವನ್ನು ಭೋಧಿಸಿದ. ಬುದ್ಧಿಯನ್ನು ಬೆಳಗಿಸುವ ದೇವನನ್ನು ಮೋಕ್ಷಕ್ಕಾಗಿ ಶರಣುಹೊಂದುವೆನು " " ಉಮಾದೇವಿಯಿಂದ ಒಡಗೂಡಿದ, ನೀಲಕಂಠನೂ ತ್ರಿಲೋಚನನೂ ಆದ, ಸಮಸ್ತ ವಸ್ತುಗಳನ್ನೂ ಸಾಕ್ಷಾತ್ ನೋಡುತ್ತಿದ್ದು ಧ್ಯಾನಿಸಿದರೆ ಅಜ್ಞಾನವನ್ನು ದಾಟಿ ಮೂಲರೂಪವನ್ನು ಪಡೆಯುವನು " ಎಂಬ ಶ್ರುತಿಗಳು ಪರಶಿವನಿಗೇ ಮುಮುಕ್ಷುಗಳು.

ಉಪಾಸನೆ ಮಾಡಲು ಅರ್ಹತೆಯನ್ನು ಹೇಳಿದ್ದರಿಂದ ಆತನೇ ಶ್ರೇಷ್ಠನೆಂಬದೂ ಸಮಂಜಸವಲ್ಲ. ನೃಸಿಂಹ ತಾಪಿನೀಯ ಉಪನಿಷತ್ತಿನಲ್ಲಿ: "ಕ್ಷೀರಸಮುದ್ರದಲ್ಲಿ ಮಲಗಿದ, ನರ-ಸಿಂಹವೆಂಬ ಎರಡು ರೂಪವನ್ನು ಧರಿಸಿದ, ಯೋಗಿಗಳು ಧ್ಯಾನಿಸುತ್ತಿರುವ ಆ ಪರವಸ್ತುವನ್ನು ತಿಳಿದರೆ ಮೋಕ್ಷವು ಬರುವದು; ಆತನನ್ನು ಮುಮುಕ್ಷುಗಳೂ ಬ್ರಹ್ಮವಾದಿಗಳೂ ನಮಸ್ಕರಿಸುತ್ತಾರೆ; ಆತ್ಮನೇ ನರಸಿಂಹನು, ದೇವನು, ಬ್ರಹ್ಮನು, ಎಂದು ತಿಳಿದರೆ ಅಕಾಮನಾಗುವನು; ಆತ್ಮಕಾಮನೂ ಆಪ್ತಕಾಮನೂ ಆಗುವನು; ಆತನ ಪ್ರಾಣಗಳು ದೇಹದಿಂದ ಹೊರಗೆ ಬರುವುದೇ ಇಲ್ಲ. ಅಂದರೆ ಆತನಿಗೆ ಮರಣವಿಲ್ಲ. ಇಲ್ಲಿಯೇ ಬ್ರಹ್ಮಭಾವವನ್ನು ಹೊಂದುವನು." ಎಂದು ಹೇಳಿರುವದರಿಂದಲೂ; ರಾಮತಾಪಿನೀಯೋಪನಿಷತ್ತಿನಲ್ಲಿ: "ರಾಮನೇ ನಾನು ಎಂದು ಭಾವಿಸುತ್ತಿರುವ ಸಂಸಾರಿಗಳೂ ರಾಮನೇ ಆಗುವರು, ರಾಮನು ಸಚ್ಚಿದಾನಂದರೂಪನು; ನಮಸ್ಕಾರಕ್ಕೆ ಯೋಗ್ಯನು. ಮುಮುಕ್ಷುಗಳು ಆತನಿಗೇ ನಮಸ್ಕಾರ ಮಾಡಬೇಕು" ಮುಂತಾಗಿ ಹೇಳಿರುವದರಿಂದಲೂ; ಗೋಪಾಲ ತಾಪಿನೀಯ ಉಪನಿಷತ್ತಿನಲ್ಲಿ: "ಕಮಲನೇತ್ರನೂ, ಮೇಘವರ್ಣನೂ, ಪೀತಾಂಬರನೂ ಎರಡು ಭುಜಗಳಿದ್ದು ವೇಣು (ಕೊಳಲು) ವನ್ನು ಹಿಡಿದು ಊದುತ್ತ ಗೋಪ--ಗೋಪಿಯರಿಂದೊಡಗೂಡಿ ಯಮುನಾಜಲದಲ್ಲಿ ಕ್ರೀಡಿಸುತ್ತ ಒಬ್ಬನಾದರೂ ಅನೇಕರೂಪದಿಂದ ಕಾಣಿಸಿಕೊಳ್ಳುತ್ತಿರುವ ಕೃಷ್ಣನನ್ನು ಧ್ಯಾನಿಸಿದರೆ ಮುಕ್ತನಾಗುವನು; ಬ್ರಹ್ಮನನ್ನು ಹುಟ್ಟಿಸಿ ಆತನಿಗೆ ವಿದ್ಯೆಯನ್ನಿತ್ತು ರಕ್ಷಿಸುತ್ತ ಬುದ್ಧಿಪ್ರಕಾಶನಾದ ಗೋಪಾಲನೇ ನಾನೆಂದು ಭಾವಿಸಿದರೆ ಮೋಕ್ಷಬರುವದು" ಎಂದು ಹೇಳಿರುವದರಿಂದಲೂ; ನಾರಾಯಣೋಪನಿಷತ್ತಿನಲ್ಲಿ: "ಶುದ್ಧ ಪ್ರಕಾಶನಾದ ಒಬ್ಬ ನಾರಾಯಣನನ್ನುಳಿದು ಬೇರೊಂದಿಲ್ಲ. ಎಂದು ತಿಳಿದರೆ ಆತ ವಿಷ್ಣುವಾಗುವನು" ಎಂದು ಹೇಳಿದ್ದರಿಂದಲೂ; ಭಗವದ್ಗೀತೆಯಲ್ಲಿ: "ಮನುಷ್ಯದೇಹವನ್ನು ತಳೆದ ನನ್ನನ್ನು ಅರಿಯದೇ, ಎಲ್ಲಕ್ಕೂ ಈಶ್ವರನಾದ ನನ್ನನ್ನು ತಿಳಿಯದೇ ತಿರಸ್ಕರಿಸುತ್ತಾರೆ. ಇವರು ರಾಕ್ಷಸೀ ಆಸುರೀ ಪ್ರಕೃತಿಯವರು. ಸಾತ್ವಿಕ ಸ್ವಭಾವದವರು, ದೈವೀಸಂಪತ್ತುಳ್ಳವರು ಯಾವಾಗಲೂ ನನ್ನನ್ನು ಹೊಗಳುತ್ತ ನಮಸ್ಕರಿಸುತ್ತ ಏಕಚಿತ್ತರಾಗಿ ಉಪಾಸನೆ ಮಾಡುವರು" ಎಂದು ಹೇಳಿರುವದರಿಂದಲೂ ವಿಷ್ಣುವಿಗೂ ಮುಮುಕ್ಷುಗಳು ಉಪಾಸನೆ ಮಾಡಲು ಅರ್ಹತೆಯು ಇರುವದೆಂದು ಸಿದ್ಧವಾಗುತ್ತದೆ.

ಸ್ಕಾಂದದಲ್ಲಿ: "ಪರಶಿವನು ಸಾಕ್ಷಾತ್ ಸಂಸಾರ ಮೋಚಕನು. ಇತರ ದೇವತೆಗಳು ಪರಂಪರೆಯಿಂದ, ಅಂದರೆ ಶಿವನ ದ್ವಾರಾ ಮೋಕ್ಷಕೊಡುವವರು" ಎಂದು ಹೇಳಿದ್ದರೆ; ಭಗವದ್ಗೀತೆಯಲ್ಲಿ: "ಈ ಗುಣಮಯವಾದ ಮಾಯೆ ನನ್ನದು. ಇದನ್ನು ದಾಟುವದು ಬಲು ಬಿಗಿ. ನನ್ನನ್ನೇ ಶರಣುಬಂದರೆ ದಾಟಬಹುದು. ಕೆಲವು ನರಾಧಮರು ನನ್ನ ಬಳಿ ಬರದೇ ಆಸುರಭಾವವನ್ನು ತಳೆದು ಅನೇಕ ಕಾಮನೆಗಳಿಗೆ ವಶರಾಗಿ ಬೇರೆ ದೇವತೆಗಳನ್ನು ಭಜಿಸುವರು; ಆದರೂ ಆ ಬೇರೆ ದೇವತೆಗಳನ್ನು ಉಪಾಸನೆ ಮಾಡುತ್ತಾ ಆ ದೇವತೆಗಳ ಮುಖಾಂತರ ನನ್ನ ಸಮೀಪಕ್ಕೆ ಬರುವರು. ನೇರವಾಗಿ ನನ್ನನ್ನು ಭಜಿಸಿದವರು ನೇರವಾಗಿಯೇ ನನ್ನನ್ನು ಪಡೆಯುವರು; ಓಂ ಎಂಬ ಏಕಾಕ್ಷರ ಬ್ರಹ್ಮನನ್ನು ಉಚ್ಚರಿಸುತ್ತ ನನ್ನನ್ನು ಸ್ಮರಿಸಿದವರು ಪುನರ್ಜನ್ಮ ಪಡೆಯರು" ಎಂದು ಹೇಳಿದೆ; ಮತ್ತು "ಬ್ರಹ್ಮವೇದನವುಳ್ಳವನು ಪರಬ್ರಹ್ಮನನ್ನು ಹೊಂದುತ್ತಾನೆ; ಬ್ರಹ್ಮನನ್ನು ತಿಳಿದರೆ ಬ್ರಹ್ಮನಾಗುವನು; ಮೋಕ್ಷಕ್ಕೆ ಬೇರೆ ಮಾರ್ಗವಿಲ್ಲ; ಮುಂತಾದ ಬಲಿಷ್ಠ ಶ್ರುತಿಗಳ ಮೇಲಿಂದ ಜ್ಞಾನವೇ ಸಾಕ್ಷಾತ್ ಮೋಕ್ಷಸಾಧನವೆಂದು ಸಿದ್ಧವಾಗಿರುವದರಿಂದ ಶಿವವಿಷ್ಣು ಉಪಾಸನೆಗಳು ಜ್ಞಾನದ ಮುಖಾಂತರವೇ ಮೋಕ್ಷಸಾಧಕವಾದವುಗಳೆಂದು ಹೇಳಬೇಕಾಗುತ್ತದೆ.

ಸ್ಕಾಂದಪುರಾಣದಲ್ಲಿ: "ಯಾವ-ಯಾವ ಮೂರ್ತಿಯನ್ನು ಹಿಡಿದು ಬ್ರಹ್ಮಭಾವನೆಯಿಂದ ಆರಾಧಿಸುವರೋ! ಆ ಆರಾಧನಾ ಬಲದಿಂದ ಶಂಕರನನ್ನು ತಿಳಿಯುತ್ತಾರೆ. ಶಂಕರನನ್ನು ಆರಾಧಿಸಿ ಜ್ಞಾನಪಡೆಯುತ್ತಾರೆ" ಎಂದು ಇತರ ದೇವತೆಗಳ ಆರಾಧನೆಗಳು ಶಂಕರನ ಆರಾಧನೆಗಳು ಶಂಕರನ ಆರಾಧನೆಯ ಮುಖಾಂತರವೇ ಜ್ಞಾನದಾಯಕವೆಂದು ಹೇಳಿದರೆ =

ಭಗವದ್ಗೀತೆಯಲ್ಲಿ: "ಯಾರ ಪಾಪವು ತೊಳೆದಿದೆಯೋ! ಅವರು ನನ್ನನ್ನು ಭಜಿಸುವರು. ನನ್ನ ಭಜನೆಯಿಂದ ಮುಪ್ಪು--ಸಾವಿಲ್ಲದ ಸ್ಥಿತಿಯನ್ನು ಪಡೆಯಲು ಸಹಾಯಕವಾದ ಜ್ಞಾನವನ್ನು ಹೊಂದುವರು" ಎಂದು ಹೇಳಿದೆ.

ಅಧ್ಯಾತ್ಮ ರಾಮಾಯಣದಲ್ಲಿ: "ಶ್ರುತಿ, ಯುಕ್ತಿ ಪ್ರಮಾಣಗಳಿಂದ ನನ್ನನ್ನು ತಿಳಿಯುವ ವರೆಗೂ ನನ್ನ ಆರಾಧನೆ ಮಾಡಬೇಕು. ಒಳ್ಳೇ ಭಕ್ತಿಯಿಂದ ಆರಾಧಿಸಿದವನಿಗೆ ನಾನು ಆತನ ಹೃದಯದಲ್ಲಿ ಪ್ರಕಟವಾಗುವೆನು. ಇದು ಎಲ್ಲ ವೇದಗಳ ಸಾರ" ಎಂದು ರಾಮನು ಹೇಳಿರುವನು.

ವಾಮನ ಪುರಾಣದಲ್ಲಿ: "ಏಳು ಜನ್ಮಗಳಿಂದ ಸೂರ್ಯನ ಭಕ್ತನು ಎಂಟನೇ ಜನ್ಮದಲ್ಲಿ ರುದ್ರಭಕ್ತನಾಗುವನು. ಹಾಗೆಯೇ ಏಳು ಜನ್ಮದಲ್ಲಿ ರುದ್ರಭಕ್ತನು, ವಿಷ್ಣುಭಕ್ತನೂ ಆ ವಿಷ್ಣುಭಕ್ತಿಯಿಂದ ವಾಸುದೇವನಲ್ಲಿ ಅಡಗುವವನೂ ಆಗುತ್ತಾನೆ" ಎಂದು ಹೇಳಿದೆ. ಇದರಿಂದ ಇತರ ದೇವತೆಗಳ ಆರಾಧನೆಗಳು ವಿಷ್ಣುವಿನ ಆರಾಧನೆಯ ಮುಖಾಂತರವೇ ಜ್ಞಾನವನ್ನು ಕೊಡುವವು ಎಂದು ಹೇಳಬೇಕಾಗುವದು.

"ನೀನು ದೇವತೆಗಳಲ್ಲಿ ಬ್ರಾಹ್ಮಣನು ನಾನು ಮಾನವರಲ್ಲಿ ಬ್ರಾಹ್ಮಣನು. ಬ್ರಾಹ್ಮಣನು ಬ್ರಾಹ್ಮಣನನ್ನು ಹೊಂದುವನು. ಆದ್ದರಿಂದ ನಾನು ನಿನ್ನ ಉಪಾಸನೆಯನ್ನು ಮಾಡುವೆನು" ಎಂಬ ಶ್ರುತಿಯು ಶಿವನು ಬ್ರಾಹ್ಮಣರ ಉಪಾಸ್ಯನೆಂದು ಹೇಳಿದರೆ; ಹಿಂದೆ ಉದಾಹರಿಸಿದ ನೃಸಿಂಹ ತಾಪಿನೀಯ ಗೋಪಾಲ ತಾಪಿನೀಯ ಮುಂತಾದ ಶ್ರುತಿಗಳು "ಕಿಂ ಪುನಃ ಬ್ರಾಹ್ಮಣಾಃ ಪುಣ್ಯಾಃ" ಎಂಬಿವೇ ಮುಂತಾದ ಗೀತಾವಚನಗಳು ವಿಷ್ಣುವು ಬ್ರಾಹ್ಮಣರ ಉಪಾಸ್ಯನೆಂದು ಹೇಳುವವು.

ಆದ್ದರಿಂದ ಶಿವನಿಗೆ ನಾಲ್ಕನೆಯ ಮೂರ್ತಿಯನ್ನು ಒಪ್ಪಿದರೂ ತನ್ನಿಚ್ಛೆಯಿಂದ ಕಲ್ಪಿತವಾದ ಎಲ್ಲಾ ತ್ರಿಮೂರ್ತಿಗಳ ವಿಗ್ರಹಗಳಲ್ಲಿಯೂ ಆವರಣವಿಲ್ಲದ ಆತ್ಮಪ್ರಕಾಶ, ಮುಮುಕ್ಷುಗಳು ಧ್ಯಾನಮಾಡುವ ರೂಪ, ಜ್ಞಾನದಾನ, ಮುಂತಾದ ಅನೇಕ ಗುಣಗಳ ಸಾಮ್ಯತೆಯಿಂದ ಸೇರಿಕೊಂಡ ಆತನಲ್ಲಿ ಭೇದವನ್ನು ಕಲ್ಪಿಸುವದು ತಪ್ಪಾಗುವದು; ಇದಲ್ಲದೇ ಶಿವನಿಗೆ ಪ್ರಮಾಣ ಬಲದಿಂದ ನಾಲ್ಕನೆಯ ಶರೀರವನ್ನೊಪ್ಪಿದಂತೆ ವಿಷ್ಣುವಿಗೂ ನಾಲ್ಕನೆಯ ವಿಗ್ರಹವನ್ನು ಒಪ್ಪಬೇಕಾಗುವದು. ಈ ಕೆಳಗಿನ ಶ್ರುತಿಗಳನ್ನು ಗಮನಿಸಿರಿ.

"ನಾರಾಯಣನು ಒಬ್ಬನೇ ಇದ್ದನು, ಆತನಿಂದ ಈ ಬ್ರಹ್ಮ, ವಿಷ್ಣು, ರುದ್ರ, ವರುಣ, ಇಂದ್ರ ಇವರು ಹುಟ್ಟಿದರು" ಇದು ಪೈಂಗಿರಹಸ್ಯ ಬ್ರಾಹ್ಮಣವು.

"ನಾರಾಯಣನು ಕಾರಣ ಪುರುಷನು" ಇದು ನಾರಾಯಣೋಪನಿಷತ್ತು.

" ಜಾಗ್ರದವಸ್ಥೆಯಲ್ಲಿ ಬ್ರಹ್ಮನೂ, ಸ್ವಪ್ನದಲ್ಲಿ ವಿಷ್ಣುವೂ, ನಿದ್ರೆಯಲ್ಲಿ ರುದ್ರನೂ ಅಭಿಮಾನಿಗಳಾಗಿರುವರು. ನಾಲ್ಕನೆಯವನು ನಾಶವಿಲ್ಲದವನೂ, ಆದಿತ್ಯನೂ ಆದ ವಿಷ್ಣುವು ಶಿವನು " ಎಂಬುದು ಬ್ರಹ್ಮೋಪನಿಷತ್ತು.

" ಬ್ರಹ್ಮ, ವಿಷ್ಣು, ಶಿವರೂಪದಿಂದಿರುವ ನೃಸಿಂಹನಿಗೆ ನಮಸ್ಕಾರವು " ಇದು ಮುಂತಾಗಿ ನೃಸಿಂಹ ತಾಪಿನೀಯ ಉಪನಿಷತ್ತು.

" ಅದ್ವಿತೀಯ ಪರಮ ಆನಂದರೂಪನಾದ ಶ್ರೀ ರಾಮಚಂದ್ರನು ಬ್ರಹ್ಮ, ವಿಷ್ಣು, ರುದ್ರರೂಪಿಯಾಗುವನು, ಆತನಿಗೆ ವಂದನೆ " ಇದು ರಾಮತಾಪಿನೀಯ;

" ಓಂಕಾರದೊಳಗಿನ ಅರ್ಧಮಾತ್ರೆಯ ರೂಪನಾದ ಶ್ರೀ ಕೃಷ್ಣನಿಂದ ಜಗತ್ತು ಹುಟ್ಟುವದು. ಆ ಕೃಷ್ಣನಿಗೆ ಅಭಿನ್ನವಾಗಿ ಮೂಲ ಪ್ರಾಕೃತಿಯೆಂದೆನಿಸಿಕೊಂಡು ಇರುವವಳು ರುಕ್ಮಿಣಿ " ಎಂದು ಗೋಪಾಲ ತಾಪಿನೀಯ.

ಇವೆಲ್ಲ ಶ್ರುತಿಗಳು ನಾಲ್ಕನೆಯ ನಾರಾಯಣನನ್ನೂ ನರಸಿಂಹ; ಮತ್ತು ಶ್ರೀ ರಾಮ ಗೋಪಾಲರನ್ನೂ ವಿಶೇಷವಾಗಿ ಹೇಳುತ್ತಿವೆ.

ಪೈಂಗಿರಹಸ್ಯಬ್ರಾಹ್ಮಣ ಮುಂತಾದವುಗಳು ನಾರಾಯಣ ನರಸಿಂಹ ಮುಂತಾದ ದೇವತೆಗಳಿಗೆ ಮಾಯಾ ಉಪಾಧಿಕನಾದ ಬ್ರಹ್ಮನ ಅಭೇದವನ್ನು ಅನುಸರಿಸಿ ಹಾಗೆ ಹೇಳುತ್ತಿವೆಯೆಂದು ಹೇಳುವುದಾದರೆ, ಶಿವನಿಗೂ ಅದೇ ಅಭಿಪ್ರಾಯದಿಂದ ಶಿವಶಂಭು ಮುಂತಾದ ಶಬ್ದಗಳನ್ನು ಅಥರ್ವಶಿಖಾದಿ ಉಪನಿಷತ್ತುಗಳು ಹೇಳುತ್ತಿವೆಯೆಂದು ಹೇಳಬಹುದು.

ಅಥರ್ವಶಿಖೆ ಮುಂತಾದವುಗಳಲ್ಲಿ ಜಗತ್ತಿಗೆ ಕಾರಣನಾದ ಬ್ರಹ್ಮನಿಗೆ ಉಪಾಸನೆಯ ಬಗ್ಗೆ ಶಂಭು-ಶಿವ ಮುಂತಾದ ಹೆಸರುಳ್ಳ ನಾಲ್ಕನೆಯ ಮೂರ್ತಿಯನ್ನು ಹೇಳಿದೆ; ಎಂದು ಹೇಳಿದರೆ, ಪೈಂಗಿರಹಸ್ಯ ಬ್ರಾಹ್ಮಣ ಮುಂತಾದವುಗಳಲ್ಲಿಯೂ ಜಗತ್ಕಾರಣನಾದ ಬ್ರಹ್ಮನಿಗೇ ಉಪಾಸನೆಗಾಗಿ ನರಸಿಂಹ ನಾರಾಯಣ ಗೋಪಾಲ ಮುಂತಾದ ಹೆಸರುಳ್ಳ ನಾಲ್ಕನೆಯ ಮೂರ್ತಿಗಳು ಹೇಳಲ್ಪಟ್ಟಿವೆ; ಎಂದು ಹೇಳಲು ಇತ್ತ ನಿಮ್ಮ ದೃಷ್ಟಿಯನ್ನು ತಿರುಗಿಸಿರಿ. ಆದ್ದರಿಂದ ಎಲ್ಲ ಪ್ರಮಾಣ ವಚನಗಳಿಗೂ ವಿರೋಧವಾಗಬಾರದೆಂಬ ಸ್ವಚ್ಛಬುದ್ಧಿಯಿಂದ ಮಾತ್ಸರ್ಯವನ್ನು ಬದಿಗಿರಿಸಿ " ಚಿತ್ತು-ಜಡಗಳನ್ನು ನೋಡುವವನು ಅಚ್ಯುತನು " " ಆತನೇ ಮಹಾದೇವನು. ಆತನೇ ಹರಿಯು " " ಯಾರು ನಿನ್ನನ್ನು ದ್ವೇಷಿಸುವರೋ ! ಅವರು ನನ್ನ ದ್ವೇಷಿಗಳು, ಯಾರು ನಿನ್ನನ್ನು ಅನುಸರಿಸುವರೋ; ಅವರು ನನ್ನ ಭಕ್ತರು. ಎಲೈ ವಿಷ್ಣುವೇ ಶಬ್ದಗಳಿಂದಾಗಲೀ ಅರ್ಥದಿಂದಾಗಲೀ ನಮ್ಮೊಳಗೆ ಭೇದವಿಲ್ಲ. ಎಲೈ ಗೋವಿಂದನೇ! ನಿನ್ನ ಹೆಸರುಗಳೆಲ್ಲವೂ ನನ್ನವೇ! ಇದಕ್ಕೆ ಸಂಶಯವಿಲ್ಲ. ಶಿವರೂಪನಾದ ವಿಷ್ಣುವಿಗೂ ವಿಷ್ಣುರೂಪನಾದ ಶಿವನಿಗೂ ನನ್ನ ಅಭಿನಂದನೆಯಿದೆ " ಮುಂತಾದ ಶ್ರುತಿ, ಸ್ಮೃತಿ, ಭಾರತ, ಸ್ಕಾಂದವಚನಗಳ ಪ್ರಮಾಣದ ಮೇರೆಗೆ ಸಕಲ ವೈದಿಕ ಮತಗಳಿಗೂ ಸಮ್ಮತವಾದ ಶ್ರೀ ಶಂಕರ ಭಗವತ್ಪಾದಾಚಾರ್ಯರ ಮತವಾದ ಕೇವಲಾದ್ವೈತ ಮಾರ್ಗವನ್ನು ಅನುಸರಿಸಿ ಹರಿಹರರಲ್ಲಿ ಶಬ್ದಾರ್ಥಗಳಿಂದ ಭೇದವನ್ನೆಣಿಸದೆ ವಿಷ್ಣೂತ್ಕರ್ಷವನ್ನೂ—

ಶಿವನ ಉತ್ಕರ್ಷವನ್ನು ಹೇಳುವ ಎಲ್ಲ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಾದಿಗಳಿಗೆ ಅವಿರುದ್ಧವಾದ ಅರ್ಥವನ್ನು ಸಮರ್ಥನೆ ಮಾಡಬೇಕು. ಅದರಿಂದ ನಾಲ್ಕನೆಯ ಒಂದು ಮೂರ್ತಿಯನ್ನು ಒಪ್ಪುವ ಅವಶ್ಯವಿಲ್ಲ. ಬ್ರಹ್ಮಾದಿ ತ್ರಿಮೂರ್ತಿಗಳಲ್ಲಿ ಒಂದೇ ರೀತಿಯಿಂದ ಸೇರಿಕೊಂಡ ಒಬ್ಬನೇ ಪರಮೇಶ್ವರನು ಎಲ್ಲರಿಗೂ ಉಪಾಸ್ಯನು. ಅಲ್ಲಿ ಮೇಲು-ಕೀಳುತನವನ್ನು ಕಲ್ಪಿಸುವದು ಯುಕ್ತವಲ್ಲ; ಮತ್ತು ಹಾಗೆ ಕಲ್ಪಿಸಿದರೆ "ಯತೋವಾ ಇಮಾನಿ" ಎಂಬಿವೇ ಮುಂತಾದ ಶ್ರುತಿಗಳಿಗೂ ವಿರೋಧಬರುತ್ತದೆ. ಬ್ರಹ್ಮ, ವಿಷ್ಣು, ರುದ್ರ, ನಾರೀ, ಸರಸ್ವತೀ, ಲಕ್ಷ್ಮೀ ಮೊದಲಾದ ಎಷ್ಟೋ ದೇವತೆಗಳಿಗೆ ಈಶ್ವರತ್ವವನ್ನು ಕಲ್ಪಿಸಿ ಅವರ ಉಪಾಸನೆಗಳನ್ನು ಹೇಳಿದ ಮಂತ್ರಶಾಸ್ತ್ರಗಳಿಗೂ ವಿರೋಧಬರುತ್ತದೆ. ಮಂತ್ರಶಾಸ್ತ್ರದಲ್ಲಿ " ಒಬ್ಬನೇ ಸರ್ವೇಶ್ವರನು ಭ್ರಾಂತಿಯಿಂದ ಭಿನ್ನನಾಗಿ ಕಾಣುವನು. ಅದು ಆಕಾಶವು ಘಟಾಕಾಶ, ಮಠಾಕಾಶ ಎಂದು ಭೇದವನ್ನು ಹೊಂದುವಂತೆ ಬರೇ ಭ್ರಾಂತಿಯಾಗಿದೆ. ಜಗತ್ತಿನ ರೂಪನಾದ ಪರಮಾತ್ಮನೊಬ್ಬನೇ ಭೋಗವನ್ನೂ ಮೋಕ್ಷವನ್ನೂ ಕೊಡುವನು. ಯೋಗಿಗಳು ಆನಂದಮಯನಾದ ಆತನನ್ನು ಮಹಾದೇವ, ವಾಸುದೇವ, ಶಿವ, ವಿಷ್ಣು, ಹರ-ಹರಿ ಮುಂತಾದ ನಾನಾರೂಪದಿಂದ ಧ್ಯಾನಿಸುವರು.. ಆತನ ಮೂಲಪ್ರಾಕೃತಿಯೆಂದೆನಿಸಿದ ಮಾಯೆಯನ್ನು ಮೋಹಿನೀ ವಿದ್ಯಾ-ದಕ್ಷಕನ್ಯಾ, ಪಾರ್ವತೀ, ರಮಾ, ಸರಸ್ವತೀ, ಕಾಳೀ ಮುಂತಾದ ರೀತಿಯಿಂದ ಉಪಾಸನೆ ಮಾಡುವರು. ಒಂದೇ ಬ್ರಹ್ಮವಸ್ತುವು ಸ್ತ್ರೀಪುಂಭಾವದಿಂದ ಇಬ್ಬಣವಾಗಿದೆ. ಆದರೆ ಇವುಗಳ ಏಕತೆಯನ್ನು ಉಪಾಸನೆ ಮಾಡುವವನೇ ಸುಖಭಾಗಿಯಾಗುವನು, ಎಂದು ಸ್ಪಷ್ಟವಾಗಿ ಹೇಳಿದೆ,

ಹಾಗಾದರೆ ಬ್ರಹ್ಮ, ವಿಷ್ಣು, ರುದ್ರಾದಿಗಳು ಈಶ್ವರವರ್ಗದಲ್ಲಿ ಸೇರಿದವರು ಎಂದಾದರೆ ವಿಷ್ಣುವು ಶಿವನನ್ನು ಧ್ಯಾನಿಸಿದ್ದು; ಶಿವನು ವಿಷ್ಣುವನ್ನು ಉಪಾಸನೆ ಮಾಡಿದ್ದು; ಮುಂತಾದ ಪರಸ್ಪರ ಉಪಾಸನೆ ಮಾಡಿದ ಪ್ರಕರಣಗಳುಳ್ಳ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳ ಗತಿಯೇನು ?

ಮೋಕ್ಷಧರ್ಮ ಪರ್ವದಲ್ಲಿ ಕೃಷ್ಣನು ಪಾರ್ಥನಿಗೆ ಅಂದದ್ದು= ನಾನು ಮಾಡಿದ್ದನ್ನು ಜನರು ಪ್ರಾಮಾಣಿಕವೆಂದು ತಿಳಿದು ಅನುಸರಿಸುತ್ತಾರೆ. ನನಗೆ ಇನ್ನೊಬ್ಬ ದೇವರಿಲ್ಲ. ಆದರೂ ನಾನು ಜನರಿಗಾಗಿ ಪುತ್ರಕಾಮನೆಯಿಂದ ವಿಶ್ವೇಶ್ವರನನ್ನು ಆರಾಧಿಸಿದೆನು " ಇದರಿಂದ ಕೃಷ್ಣನು ಶಿವೋಪಾಸನೆ ಮಾಡಿದ್ದು ಲೋಕಕ್ಕೆ ಮಾರ್ಗದರ್ಶನ ಮಾಡಲು ಎಂದು ತಿಳಿದುಬರುತ್ತದೆ. ಇದರಂತೆ ಶಿವನು ವಿಷ್ಣೂಪಾಸನೆ ಮಾಡಿದ್ದು. ಇದರಲ್ಲಿ ಆಯಾ ಮೂರ್ತಿಗಳ ಉಪಾಸನೆಯ ಮಹತ್ವವನ್ನು ತಿಳಿದು ಕರ್ತವ್ಯತೆಯನ್ನು ತೋರಿಸುವದೇ ಗುರಿಯಾಗಿ ಕಾಣುತ್ತದೆ; ಹಾಗಲ್ಲದೆ ನಿಜವಾಗಿಯೂ ಅವರು ಒಬ್ಬರಿಗೊಬ್ಬರು ಉಪಾಸನೆ ಮಾಡುವವರೆಂದು ಕಲ್ಪಿಸಿದರೆ ಪರಮೇಶ್ವರನ ನಿತ್ಯ ಮುಕ್ತತೆ, ಪಾಪರಾಹಿತ್ಯ ಮುಂತಾದವುಗಳಿಗೆ ವಿರೋಧಬರುವದು. ಹಾಗಿದ್ದರೆ ಶಿವತತ್ವವಿವೇಕ—ಬ್ರಹ್ಮತರ್ಕಸ್ತವ ಮುಂತಾದ ಗ್ರಂಥಗಳಲ್ಲಿ ಶಿವನಿಗಿಂತ ವಿಷ್ಣುವು ಕೀಳು ಎಂತ ಹೇಳಿದ್ದರಿಂದಲೂ ರಾಮಾದಿ ಅವತಾರಗಳಲ್ಲಿ, ಕೌಸಲ್ಯಾದಿ ಗರ್ಭಗಳಲ್ಲಿ ವಾಸಮಾಡುವದು, ಸೀತೆಯನ್ನು ಕಳಕೊಂಡು ಅಳುವುದು ಮುಂತಾದ ಜೀವನಚೆಷ್ಟೆ ಕಾಣುತ್ತಿರುವುದರಿಂದಲೂ ವಿಷ್ಣುವನ್ನು ಈಶ್ವರವರ್ಗಕ್ಕೆ ಸೇರಿಸುವದು ವಿರುದ್ಧವಾಗುವದಿಲ್ಲವೇ ? ಆ ಗ್ರಂಥಗಳಲ್ಲಿ ಪ್ರತಿವಾದಿಯನ್ನು ಜಯಿಸುವದೇ ಮುಖ್ಯಗುರಿಯಾದ್ದರಿಂದ ಆ ರೀತಿಯಾಗಿ ಹೇಳಿದ್ದು ಇರುತ್ತದೆ. ನಹಿನಿಂದಾ ನ್ಯಾಯದಂತೆ ಶಿವನ ಉಪಾಸನೆ ಮಾಡುವುದರ ಬಗ್ಗೆ ಆ ಗ್ರಂಥಗಳ ಒತ್ತಾಯವೆಂಬುದೇ ಅದರಿಂದ ನಾವು ತಿಳಕೊಳ್ಳಬೇಕಾಗಿದೆ.

ಶಿವತತ್ವವಿವೇಕವನ್ನು ಬರೆದ ಅಪ್ಪಯ್ಯ ದೀಕ್ಷಿತರು ಮಧ್ವಮತ ವಿಧ್ವಂಸನದಲ್ಲಿ "ಶಿವಂ ವಿಷ್ಣುವಾ ಯದ್ಯಭಿ ದಧಸಿ ಶಾಸ್ತ್ರಸ್ಯ ವಿಷಯಂ" ಶಿವನನ್ನಾಗಲೀ ವಿಷ್ಣುವನ್ನಾಗಲೀ ಶಾಸ್ತ್ರದ ಗುರಿಯನ್ನಾಗಿ ಹೇಳುವದಾದರೆ ಅದು ನಮಗಿಷ್ಟ. ನಾವು ಸಗುಣವಾದಿಗಳೂ ಹೌದು, ಎಂದು ಹೇಳಿದ್ದಾರೆ. ಶಿವಕರ್ಣಾಮೃತದಲ್ಲಿ: "ನಾರಾಯಣನು ಪರಂಬ್ರಹ್ಮ ಎಂಬ ವಾದವು ನಾರಾಯಣನು ಶಿವನಿಗೆ ಅಭಿನ್ನ ಎಂಬ ಪಕ್ಷದಲ್ಲಿಯೂ ಹೊಂದುತ್ತದೆ. ಭೇದಪಕ್ಷದಲ್ಲಿಯೇ ನಾರಾಯಣನು ಶಿವನನ್ನು ಆರಾಧಿಸಿ ಶಿವಬ್ರಹ್ಮಾಭೇದ ಭಾವನೆಯ ಬಲದಿಂದ ಪಡೆದ ಬ್ರಹ್ಮತ್ವವನ್ನು ಹೇಳಿದೆ ಎಂದು ಹೊಂದಿಸಬೇಕು" ಎಂಬುದಾಗಿ ಹೇಳಿದೆ.

ಶಿವಾನಂದ ಲಹರೀ ಸಿದ್ಧಾಂತಲೇಶ ಸಂಗ್ರಹ ಮುಂತಾದವುಗಳಲ್ಲಿ "ಪರಮೇಶ್ವರನು ರಘುನಾಥಾದಿ ಅವತಾರ ಮಾಡಿದಾಗ ತಪಸ್ಸು ಮಾಡಿದ್ದು, ದುಃಖಪಟ್ಟಿದ್ದು ಮುಂತಾದವುಗಳ ಸಂಬಂಧದಿಂದ ಜೀವತ್ವವನ್ನು ಹೊಂದಿದಂತೆ ಕಾಣುವಾಗ ಮುಕ್ತರಾದವರು ಪರಮೇಶ್ವರ ಭಾವವನ್ನು ಹೊಂದುವುದಾಗಿ ಒಪ್ಪಿಕೊಳ್ಳುವದು ಹೇಗೆ? ಮುಕ್ತರಿಗೂ ಮತ್ತೆ ಬಂಧವು ಬರುವುದಿಲ್ಲ" ಎಂದು ಶಂಕಿಸಿ, "ಅದು ಭೃಗುಶಾಪದಿಂದ ತಾನು ಅವತಾರವನ್ನು ಮಾಡಿ ಅಲ್ಲಿ ದುಃಖಗಳನ್ನು ನಟಿಸಿದ್ದು ಬರೆ ಬ್ರಾಹ್ಮಣಶಾಪವು ವ್ಯರ್ಥವಾಗುವದಿಲ್ಲವೆಂಬ ತಾನೇ ಮಾಡಿದ ನಿಯಮವನ್ನು ಪರಿಪಾಲಿಸಲೋಸುಗವಾಗಿರುತ್ತದೆ" ಎಂದು ಸಮಾಧಾನಪಡಿಸಿದ್ದಾರೆ. ಅದಲ್ಲದಿದ್ದರೆ ಪರಮೇಶ್ವರನು ನಿತ್ಯಮುಕ್ತನು, ಹಿಡು-ತಡೆಯಿಲ್ಲದ ಸ್ವಾತಂತ್ರ್ಯವುಳ್ಳವನು, ಸಮಾನರೂ ಹೆಚ್ಚಿನವರೂ ಇಲ್ಲದವನು ಎಂಬ ಶ್ರುತಿಗಳಿಗೆ ವಿರೋಧಬರುವದು.

ಆದ್ದರಿಂದ ವ್ಯಾಸರಿಂದ ಹೇಳಲ್ಪಟ್ಟ, ಕೇವಲಾದ್ವಿತೀಯರೂಪ ಸಚ್ಚಿದಾನಂದಮಯನಾದ ಅಖಂಡವಾದ ನಿರ್ಗುಣ ಪರಬ್ರಹ್ಮನು ಮಾಯಾನಿಮಿತ್ತವಾದ—ಅಮೂರ್ತರೂಪದಿಂದ ಜಗತ್ತಿನ ಹುಟ್ಟು ಮೊದಲಾದವುಗಳಿಗೆ ಕಾರಣನಾಗಿ ಬ್ರಹ್ಮ, ವಿಷ್ಣು, ರುದ್ರ, ರಾಮ, ಕೃಷ್ಣ ಮೊದಲಾದ ಮೂರ್ತರೂಪದಿಂದ ಮೋಕ್ಷಾಪೇಕ್ಷೆಗಳಿಗೆ ಧ್ಯೇಯನಾಗಿ ಇರುವನು. ಆತನ ಪ್ರಸಾದದಿಂದಲೇ ಬ್ರಹ್ಮಜ್ಞಾನವು ಬರುವದು. ಎಂದು ಹೇಳಿ ಇಲ್ಲಿಗೆ ಈ ವ್ಯಾಸ-ತಾತ್ಪರ್ಯ ನಿರ್ಣಯವನ್ನು ಮುಗಿಸುವೆವು.

ಎರಡನೆಯ ಪರಿಚ್ಛೇದವು ಮುಗಿಯಿತು.

ಸಂಪೂರ್ಣಂ

ಶ್ರೀ ರಸ್ತು

ಶಿರಸಿ ಶ್ರೀ ಮಾರಿಕಾಂಬಾ ದೇವಸ್ಥಾನ

ಪ್ರಕಾಶನ ವಿಭಾಗ

❖ ಆರಾಧನೆ ❖

(ಧರ್ಮ ಮತ್ತು ಸಂಸ್ಕೃತಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ)

ನಾಲ್ಕನೇ ವರ್ಷದಲ್ಲಿ ನಡೆಯುತ್ತದೆ. ಹಾಲುಕಾಗದದ ತ್ರಿವರ್ಣ ಮುಖಪುಟ. ಕಾದಿಡುವ ಚಿತ್ರಗಳು. ಯಾವಾಗಲೂ ಓದಬಹುದಾದ ಲೇಖನಗಳು. ಕತೆಗಳು.

ವಾರ್ಷಿಕ ಚಂದಾ (ಅಂಚೆಯಿಂದ) ರೂ. ೩=೦೦

ಇಂದೇ ಚಂದಾದಾರರಾಗಿರಿ.

—: ಪ್ರಕಟಿತ ಪುಸ್ತಕಗಳು :—

೧)	ಶ್ರೀಮಾರಿಕಾಂಬೆಯ ಚರಿತ್ರೆ	–ಶ್ರೀ ವಿನೀತರು.	೦=೫೦
೨)	ಯಾತ್ರಿಕನ ಪತ್ರಗಳು	– " ವಿ. ನಾ.	೧=೫೦
೩)	ಅವಳ ದೇವರು ಮತ್ತು ಇತರ ಕಥೆಗಳು	– " ಪಿ. ವಿ. ಶಾಸ್ತ್ರಿ	೧=೫೦
೪)	ಸಚಿತ್ರ ಜನಪ್ರಿಯ ವಿಜ್ಞಾನ	– " ಎಂ. ಡಿ. ಇಸಳೂರ	೨=೦೦
೫)	ಗರುಡ ವಿಜಯ (ಯಕ್ಷಗಾನ)	– " ಗಂಗಾಜಿ	೦=೫೦
೬)	ಆತ್ಮೀಯರಿಗೆ (ಧರ್ಮಸಾಧನೆ)	– ಡಿ. ಜಿ. ರಾಘವೇಂದ್ರರಾವ	೧=೫೦
೭)	ಸಮುದ್ರದಂಚಿನ ಸಂಜೆ (ಕಾದಂಬರಿ)	– ಶ್ರೀ ಪಿ. ವ್ಹಿ. ಶಾಸ್ತ್ರಿ	೧=೨೫
೮)	ದಕ್ಷಿಣಾಪಥದ ಸಂತರು	– " ವಿ. ನಾ.	೧=೨೫
೯)	ವ್ಯಾಸತಾತ್ಪರ್ಯ ನಿರ್ಣಯ	– " ರಾಮಚಂದ್ರ ಭಟ್ಟ ಸೂರಿ	೧=೦೦

ಶ್ರೀದೇವಿಯ ಮತ್ತು ಸಾಧು-ಸಂತರ ಫೋಟೋಗಳು ಸಹ ಸಿಗುತ್ತವೆ.

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ಕೊಡಲಾಗುವದು.

ಒಮ್ಮೆ ಪ್ರಕಾಶನ ವಿಭಾಗವನ್ನು ಸಂದರ್ಶಿಸಿರಿ.

ಇಲ್ಲವೇ ಅಂಚೆಯಮೂಲಕ ತರಿಸಿಕೊಳ್ಳಿ.